**ಸಂಪುಟ:** 04 **ಸಂಚಿಕೆ:** 320 **ಪುಟಗಳು:** 08 **ಶನಿವಾರ** 01 **ಫೆಬ್ರವರಿ** 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

**ಸಂಪಾದಕರು: ಟಿ. ಹೊಂಬೇಗೌಡ**

9448225696 +91 8035841833 ₹5

# ಉದಯ ವಾಹಿನಿ

UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಬುದ್ಧಿಯಲ್ಲಿ ಸ್ಥಿರತೆ ಇದ್ದರೆ ಸುಖ ಬಂದಾಗ ಹಿಗ್ಗಲ್ಲ, ದುಃಖಕ್ಕೆ ಕುಗ್ಗೋದಿಲ್ಲ, ಏಕೆಂದರೆ ಇವೆರಡೂ ಕ್ಷಣಿಕವೆಂದು ಅವರಿಗೆ ತಿಳಿದಿದೆ.

## 7 ಜಿಲ್ಲೆಗಳು, 27 ಸ್ಥಳಗಳಲ್ಲಿ ಲೋಕಾಯುಕ್ತ ದಾಳಿ

• **ಉದಯವಾಹಿನಿ, ಬೆಂಗಳೂರು**

ಬೆಳಂಬೆಳಗ್ಗೆ ಬೆಚ್ಚಗೆ ಮನೆಯಲ್ಲಿ ಮಲಗಿದ್ದ ಭ್ರಷ್ಟ ಅಧಿಕಾರಿಗಳಿಗೆ ಲೋಕಾಯುಕ್ತ ಪೊಲೀಸರು ಶಾಕ್ ನೀಡಿದ್ದರು. ಕರ್ನಾಟಕದ 7 ಜಿಲ್ಲೆಗಳಲ್ಲಿ ಏಕಕಾಲದಲ್ಲಿ 28 ಕಡೆ ದಾಳಿ ನಡೆಸಿ ಭರ್ಜರಿ ಬೇಟೆಯಾಡಿದ್ದಾರೆ. ನಿರಂತರ ಭ್ರಷ್ಟಾಚಾರದ ದೂರು, ಆದಾಯಕ್ಕೂ ಮೀರಿದ ಅಸಮತೋಲನ ಆಸ್ತಿ ಗಳಿಕೆ ಆರೋಪದ ಹೊತ್ತಿದ್ದ 7 ಸರ್ಕಾರಿ ಅಧಿಕಾರಿಗಳಿಗೆ ಬೆವರಿಳಿಸಿದ್ದಾರೆ. ಹಾಗಾದರೆ ಲೋಕಾ ರೇಡ್ ವೇಳೆ ಬಯಲಾದ ಭ್ರಷ್ಟ ಅಧಿಕಾರಿಗಳ ಆಸ್ತಿ-ಪಾಸ್ತಿಗಳ ಮೌಲ್ಯ ಎಷ್ಟುಎಲ್ಲಾ ಸ್ಥಿರಾಸ್ತಿ ಮತ್ತು ಚರಾಸ್ತಿಗಳು ಪಕ್ಕಾ ಲೆಕ್ಕ ಇಲ್ಲಿದೆ. ಲೋಕಾಯುಕ್ತ ಭ್ರಷ್ಟ ಅಧಿಕಾರಿಗಳ ಪಾಲಿಗೆ ಸಿಂಹಸ್ವಪ್ನ. ಅಸಮತೋಲನ, ಅಕ್ರಮ ಸಂಪತ್ತು ಗಳಿಸಿರುವ ಅಧಿಕಾರಿಗಳ ಮನೆ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ಮಾಡಿ ಚಳಿ ಬಿಡಿಸುತ್ತಿರುತ್ತಾರೆ. ಅದೇ ರೀತಿ ಇಂದು ಬೆಂಗಳೂರು ನಗರದ 2 ಕಡೆ, ಬೆಳಗಾವಿ-2, ಬಾಗಲಕೋಟೆ-1, ಚಿತ್ರದುರ್ಗ-1, ರಾಯಚೂರು-1 ಸೇರಿ 7 ಸರ್ಕಾರಿ ಅಧಿಕಾರಿಗಳ ಮೇಲೆ ಏಕಕಾಲಕ್ಕೆ 27 ಕಡೆ ದಾಳಿ ಮಾಡಿ ಭ್ರಷ್ಟರ ಬೆವರಿಳಿಸಿದ್ದಾರೆ. ಸದ್ಯ ರಾಜ್ಯದ 7 ಭ್ರಷ್ಟ ಅಧಿಕಾರಿಗಳ ಮೇಲೆ ಲೋಕಾ ದಾಳಿ ವೇಳೆ ಆದಾಯಕ್ಕೂ ಮೀರಿದ ಅಸಮತೋಲನ ಆಸ್ತಿ ಹೊಂದಿರುವ ಆರೋಪದಲ್ಲಿ 18 ಕೋಟಿಗೂ ಅಧಿಕ ಮೌಲ್ಯದ ಆಸ್ತಿ-ಪಾಸ್ತಿ ಪತ್ತೆಯಾಗಿದ್ದು, ಮುಂದಿನ ದಿನಗಳಲ್ಲಿ ಆಸ್ತಿಗೆ ಸಂಬಂಧಪಟ್ಟಂತ ಸಮರ್ಪಕ ದಾಖಲೆಗಳನ್ನು ಭ್ರಷ್ಟ ಅಧಿಕಾರಿಗಳು ಒದಗಿಸಬೇಕಾಗುತ್ತದೆ. ಭ್ರಷ್ಟ ಅಧಿಕಾರಿಗಳ ಎದೆಯಲ್ಲಿ ನಡುಕ ಶುರುವಾಗಿದೆ.

## ರಾಜ್ಯದಲ್ಲಿ 'ಮೈಕ್ರೋ ಫೈನಾನ್ಸ್' ಕಿರುಕುಳಕ್ಕೆ ಬ್ರೇಕ್: ಸಿದ್ದರಾಮಯ್ಯ

• **ಉದಯವಾಹಿನಿ, ಮೈಸೂರು**

ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಕಿರುಕುಳದಿಂದ ಅನೇಕ ಜನರು ಸರಣಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಮೈಕ್ರೋ ಫೈನಾನ್ಸ್ ಕಿರುಕುಳ ತಡೆಗೆ ಸುಗ್ರೀವಾಜ್ಞೆ ಜಾರಿಗೆ ತರಲು ಮುಂದಾಗಿದ್ದು ಇಂದು ಅಥವಾ ನಾಳೆ ಸುಗ್ರೀವಾಜ್ಞೆ ಜಾರಿ ಮಾಡುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.
ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಸುತ್ತೂರು ಜಾತ್ರೆಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹೆಚ್ಚಿನ ಹಣ ವಸೂಲಿ ಮಾಡಲು ಮೈಕ್ರೋ ಫೈನಾನ್ಸ್ ಅಧಿಕಾರ ಕೊಟ್ಟಿದ್ದು ಯಾರು ಫೈನಾನ್ಸ್ ನವರು ಹೊಸೂರಿಗೆ ಗೂಂಡಾ ರೌಡಿಗಳನ್ನ ಇಟ್ಟುಕೊಳ್ಳುತ್ತಾರೆ. ಪಾಪ ರೌಡಿಗಳ ಕಿರು ಕುಳಕ್ಕೆ ಜನರು ಭಯ ಬೀಳುತ್ತಾರೆ. ಇದನ್ನು ತಡೆಗಟ್ಟಲು ಕಾನೂನು ಜಾರಿ ಮಾಡಲಾಗುತ್ತದೆ ಎಂದರು. ಯಾರು ಸಹ ಭಯ ಪಡುವ ಅಗತ್ಯವಿಲ್ಲ. ಸರ್ಕಾರ ನಿಮ್ಮ ಜೊತೆಗೆ ಇದೆ. ನಿಮಗೆ ಏನಾದರೂ ಕಿರುಕುಳ ಕೊಟ್ಟರೆ ಪೊಲೀಸರಿಗೆ ದೂರು ನೀಡಿ. ಅಸಲಿಗಿಂತ ಬಡ್ಡಿ ಜಾಸ್ತಿ ಹಾಕಬಾರದೆಂದು ಕಾನೂನಿನಲ್ಲಿ ಸೇರಿಸುತ್ತೇವೆ. ಎಂದು ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಸುತ್ತೂರು ಜಾತ್ರೆಯಲ್ಲಿ ಸಿಎಂ ಸಿದ್ದರಾಮಯ್ಯ ಹೇಳಿಕೆ ನೀಡಿದರು.

## 'ಚೆಕ್ ಬೌನ್ಸ್' ಕೇಸ್‌ನಲ್ಲಿ 6 ತಿಂಗಳು ಜೈಲುಶಿಕ್ಷೆ

• **ಉದಯವಾಹಿನಿ, ಮೈಸೂರು**

ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ದೂರು ನೀಡಿದ್ದ ಆರ್.ಟಿ. ಕಾರ್ಯಕರ್ತ ಸ್ನೇಹಿ ಕೃಷ್ಣಗೆ ಚೆಕ್ ಬೌನ್ಸ್ ಪ್ರಕರಣದಲ್ಲಿ ಕೋರ್ಟ್ 6 ತಿಂಗಳು ಜೈಲು ಶಿಕ್ಷೆ ವಿಧಿಸಿ ಕೋರ್ಟ್ ಆದೇಶ ಹೊರಡಿಸಿದೆ. ಚೆಕ್ ಬೌನ್ಸ್ ಪ್ರಕರಣದಲ್ಲಿ ಮೈಸೂರಿನ ಮೂರನೇ ಜೆ ಎಂ ಎಫ್ ಸಿ ಕೋರ್ಟ್ ಸ್ನೇಹಮಯಿ ಕೃಷ್ಣ ಅವರಿಗೆ 6 ತಿಂಗಳು ಜೈಲು ಶಿಕ್ಷೆ ವಿಧಿಸಿದೆ. ಪತ್ರಿಕೆ ನಡೆಸಲು ಹಾಗೂ ಗೃಹೋಪಯೋಗಕ್ಕಾಗಿ ಲಲಿತಾದ್ರಿಪುರದ ಕುಮಾರ್ ಎಂಬುವವರಿಂದ ಸ್ನೇಹಮಯಿ ಕೃಷ್ಣ 2015ರಲ್ಲಿ ಸಾಲ ಪಡೆದಿದ್ದರು. ಅದಕ್ಕೆ ಪ್ರತಿಯಾಗಿ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ನ ಚೆಕ್ ನೀಡಿದ್ದರು. ಕುಮಾರ್ ಅವರೌ ತಮ್ಮ ಬ್ಯಾಂಕ್ ಗೆ ಚಕ್ ಹಾಕಿದ್ದಾಗ ಬೌನ್ಸ್ ಆಗಿದೆ. ಈ ಹಿನ್ನೆಲೆಯಲ್ಲಿ ಸ್ನೇಹಮಯಿ ಕೃಷ್ಣ ವಿರುದ್ಧ ಚೆಕ್ ಬೌನ್ಸ್ ಕೇಸ್ ದಾಖಲಿಸಿದ್ದರು.ವಿಚಾರಣೆ ನಡೆಸಿದ ಮೈಸೂರಿನ ಮೂರನೇ ಜೆ ಎಂ ಎಫ್ ಸಿ ಕೋರ್ಟ್ ಸ್ನೇಹಮಯಿ ಕೃಷ್ಣ ಅವರಿಗೆ 6 ತಿಂಗಳು ಜೈಲು ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದೆ.


## ಮುಡಾ ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ: ಸಚಿವ ಮಹದೇವಪ್ಪ

• **ಉದಯವಾಹಿನಿ, ಮೈಸೂರು**

'ನವೀನ್ ಬೋಸ್ ನನ್ನ ಅಣ್ಣನ ಮಗ. ಆತ ಮುಡಾದಿಂದ ನಿವೇಶನ ತೆಗೆದುಕೊಂಡಿರುವುದು ನನಗೆ ಗೊತ್ತಿಲ್ಲ. ನಾನು ಹಾಗೂ ನನ್ನ ಅಣ್ಣನ ಕುಟುಂಬ ಪ್ರತ್ಯೇಕವಾಗಿದ್ದೇವೆ' ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ತಿಳಿಸಿದರು. ಜಾರಿ ನಿರ್ದೇಶನಾಲಯ (ಇಡಿ) ವರದಿಯಲ್ಲಿ ತಮ್ಮ ಹೆಸರು ಉಲ್ಲೇಖವಾಗಿರುವ ಕುರಿತು ಜಿಲ್ಲೆಯ ಸುತ್ತೂರಿನಲ್ಲಿ ಶುಕ್ರವಾರ ಪ್ರತಿಕ್ರಿಯಿಸಿದ ಅವರು, 'ಮುಡಾ ವಿಚಾರದಲ್ಲಿ ನನ್ನ ಯಾವ ಪಾತ್ರವೂ ಇಲ್ಲ. ಅವರು ಕೊಟ್ಟಿದ್ದಾರೆ ಇವನು ತೆಗೆದುಕೊಂಡಿದ್ದಾನೆ. ಅದರ ಬಗ್ಗೆ ನನಗೆ ಗೊತ್ತಿಲ್ಲ' ಎಂದರು

● ಕೇಂದ್ರ ಸರ್ಕಾರದ ಶರವೇಗದ ಸಾಧನೆಗೆ ರಾಷ್ಟ್ರಪತಿ ಪ್ರಶಂಸೆ ● ಬಜೆಟ್ ಅಧಿವೇಶನ ಸಂಸತ್ತಿನ ಉಭಯ ಸದನ ಉದ್ದೇಶಿಸಿ ಮುರ್ಮು ಭಾಷಣ ● ರಾಷ್ಟ್ರಪತಿಗೆ 'Poor Lady'ಎಂದ ಸೋನಿಯಾ ಗಾಂಧಿ, ಭಾರೀ ಆಕ್ರೋಶ ● ಬಿಜೆಪಿ ತೀವ್ರ ತಿರುಗೇಟು ● ರಾಷ್ಟ್ರಪತಿ ಬಗ್ಗೆ ಸೋನಿಯಾಗೆ ಅಪಾರ ಗೌರವವಿದೆ ● ಮಾಧ್ಯಮಗಳು ಹೇಳಿಕೆ ತಿರುಚಿವೆ; ಪ್ರಿಯಾಂಕಾ ● ಸೋನಿಯಾ ಗಾಂಧಿಯವರ ಹೇಳಿಕೆಯ ಬಗ್ಗೆ ಪ್ರಿಯಾಂಕಾ ಗಾಂಧಿ ಸ್ಪಷ್ಟನೆ

# ಶರವೇಗದ ಸಾಧನೆ ಮುರ್ಮು ಬಣ್ಣನೆ



**ಡಿಜಿಟಲ್ ವಂಚನೆ ಮತ್ತು ಸೈಬರ್ ಅಪರಾಧಗಳ ಬಗ್ಗೆ ಕಳವಳ**

**ಎ.4ರಂದು ಮುಕ್ತಾಯ**

ಸರ್ಕಾರದ ಶಾಸಕಾಂಗ ಕಾರ್ಯಸೂಚಿಯಲ್ಲಿ ಬ್ಯಾಂಕಿಂಗ್ ಕಾನೂನುಗಳು (ತಿದ್ದುಪಡಿ) ಮಸೂದೆ, 2024, ರೈಲ್ವೆ (ತಿದ್ದುಪಡಿ) ಮಸೂದೆ, 2024, ವಿಪತ್ತು ನಿರ್ವಹಣೆ (ತಿದ್ದುಪಡಿ) ಮಸೂದೆ, 2024, ತೈಲಕ್ಷೇತ್ರಗಳು (ನಿಯಂತ್ರಣ ಮತ್ತು ಅಭಿವೃದ್ಧಿ) ತಿದ್ದುಪಡಿ ಮಸೂದೆ, 2024, ಬಾಯ್ಲರ್ ಮಸೂದೆ, 2024, ವಕ್ಫ್ (ತಿದ್ದುಪಡಿ) ಮಸೂದೆ, 2024, ಕರಾವಳಿ ಶಿಪ್ಪಿಂಗ್ ಮಸೂದೆ, 2024, ವ್ಯಾಪಾರಿ ಸಾಗಣೆ ಮಸೂದೆ, 2024 ಮತ್ತು ಹಣಕಾಸು ಮಸೂದೆ, 2025 ಸೇರಿವೆ. ಬಜೆಟ್ ಅಧಿವೇಶನದ ಮೊದಲ ಭಾಗವು ಫೆಬ್ರವರಿ 13ರವರೆಗೆ ಮುಂದುವರಿದು ವಿರಾಮದ ನಂತರ ಎರಡೂ ಸದನಗಳು ಮಾ.10ರಂದು ಮತ್ತೆ ಸಭೆ ಸೇರುತ್ತವೆ. ಅಧಿವೇಶನವು ಎ.4ರಂದು ಮುಕ್ತಾಯಗೊಳ್ಳುತ್ತದೆ.

**ಆರ್ಥಿಕ ಸಮೀಕ್ಷೆ**

ಹಣಕಾಸು ಸಚಿವಾಲಯದ ಆರ್ಥಿಕ ವ್ಯವಹಾರಗಳ ಇಲಾಖೆಯ ಆರ್ಥಿಕ ವಿಭಾಗವು ಸಿದ್ಧಪಡಿಸಿದ ಮತ್ತು ಮುಖ್ಯ ಆರ್ಥಿಕ ಸಲಹೆಗಾರರ ಮೇಲ್ವಿಚಾರಣೆಯಲ್ಲಿ ರೂಪಿಸಲಾದ ಆರ್ಥಿಕ ಸಮೀಕ್ಷೆಯು, ಮುಂದಿನ ಹಣಕಾಸು ವರ್ಷದ ಮುನ್ನೋಟದೊಂದಿಗೆ 2024-25 (ಏಪ್ರಿಲ್-ಮಾರ್ಚ್) ಗಾಗಿ ಆರ್ಥಿಕತೆಯ ಸ್ಥಿತಿ ಮತ್ತು ವಿವಿಧ ಸೂಚಕಗಳ ಒಳನೋಟಗಳನ್ನು ಒದಗಿಸುತ್ತದೆ. ಬ್ಯಾಂಕಿಂಗ್ ನಿಯಮಗಳು ಮತ್ತು ಮೇಲ್ವಿಚಾರಣೆಯನ್ನು ಬಲಪಡಿಸುವ ಗುರಿಯನ್ನು ಹೊಂದಿರುವ ಬ್ಯಾಂಕಿಂಗ್ ಕಾನೂನುಗಳು (ತಿದ್ದುಪಡಿ) ಮಸೂದೆ, 2024 ಮತ್ತು ಭಾರತೀಯ ರೈಲ್ವೆಯ ಕಾರ್ಯಾಚರಣೆಯ ದಕ್ಷತೆಯನ್ನು ಹೆಚ್ಚಿಸುವತ್ತ ಗಮನಹರಿಸುವ ರೈಲ್ವೆ (ತಿದ್ದುಪಡಿ) ಮಸೂದೆ, 2024 ಸೇರಿದಂತೆ ಹಲವಾರು ಪ್ರಮುಖ ಮಸೂದೆಗಳನ್ನು ಬಜೆಟ್ ಅಧಿವೇಶನದಲ್ಲಿ ಮಂಡಿಸುವ ನಿರೀಕ್ಷೆಯಿದೆ.

**ಮೋದಿ ಸರ್ಕಾರದ ಕ್ರಮಗಳನ್ನು ಪ್ರಶಂಸಿಸಿದ ಮುರ್ಮು**

**ಕೇಂದ್ರ ಬಜೆಟ್ ಅಧಿವೇಶನಕ್ಕೆ ಚಾಲನೆ**

ಉ.ಪ್ರ. ಪ್ರಯಾಗ್‌ರಾಜ್‌ನಲ್ಲಿ ಐತಿಹಾಸಿಕ ಮಹಾ ಕುಂಭ ನಡೆಯುತ್ತಿದೆ. ನಮ್ಮ ಸಾಂಸ್ಕೃತಿಕ ಸಂಪ್ರದಾಯಗಳು ಮತ್ತು ಸಾಮಾಜಿಕ ಜಾಗೃತಿಗಳ ಹಬ್ಬವಾಗಿದೆ. ಪವಿತ್ರ ಹಬ್ಬದಲ್ಲಿ ಮೌನಿ ಅಮಾವಾಸ್ಯೆ ಸಂಭವಿಸಿದ ದುರಂತದ ಬಗ್ಗೆ ಸಂತಾಪವಿದೆ. ಗಾಯಗೊಂಡವರ ತ್ವರಿತ ಚೇತರಿಕೆಗಾಗಿ ಪ್ರಾರ್ಥಿಸುವುದಾಗಿ ರಾಷ್ಟ್ರಪತಿ ದೌಪದಿ ಮುರ್ಮು ಹೇಳಿದರು. ಕಳೆದ ವರ್ಷ ಡಿಸೆಂಬರ್ 26 ರಂದು ನಿಧನರಾದ ಭಾರತದ ಮಾಜಿ ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದ ರಾಷ್ಟ್ರಪತಿ ದೌಪದಿ ಮುರ್ಮು ಅವರು, ದೇಶದ ಸಂವಿಧಾನವನ್ನು ಅಳವಡಿಸಿಕೊಂಡು 75 ವರ್ಷಗಳಾಗಿರುವ ಹಿನ್ನೆಲೆ ಎಲ್ಲಾರಿಗೂ ಶುಭಕೋರಿದರು.

• **ಉದಯವಾಹಿನಿ, ನವದೆಹಲಿ**

2025ನೇ ಸಾಲಿನ ಸಂಸತ್ತಿನ ಬಜೆಟ್ ಅಧಿವೇಶ ಶುಕ್ರವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಉಭಯ ಸದನಗಳ ಜಂಟಿ ಸಭೆಯನ್ನುದ್ದೇಶಿಸಿ ಭಾಷಣ ಮಾಡುವ ಮೂಲಕ ಆರಂಭಗೊಂಡಿದೆ. ಶತಮಾನದ ಐತಿಹಾಸಿಕ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳದಲ್ಲಿ ಮೊನ್ನೆ ಮೌನಿ ಅಮಾವಾಸ್ಯೆ ದಿನ ಸಂಭವಿಸಿದ ಕಾಲ್ತುಳಿತದಲ್ಲಿ ಮೃತಪಟ್ಟ ಭಕ್ತರಿಗೆ ಗೌರವ ಸಲ್ಲಿಸುವ ಮೂಲಕ ಮತ್ತು ಕಳೆದ ವರ್ಷ ಡಿ.24ರಂದು ನಿಧನರಾದ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರಿಗೆ ಗೌರವ ಸಲ್ಲಿಸುವ ಮೂಲಕ ಭಾಷಣ ಪ್ರಾರಂಭಿಸಿದರು.

ಮಹಾಕುಂಭ ಮೇಳ ಒಂದು ಹಬ್ಬ: ಉತ್ತರ ಪ್ರದೇಶದ ಪ್ರಯಾಗ ರಾಜದಲ್ಲಿ ನಡೆಯುತ್ತಿರುವ ಮಹಾ ಕುಂಭವು ಭಾರತದ ಸಾಂಸ್ಕೃತಿಕ ಸಂಪ್ರದಾಯ ಮತ್ತು ಸಾಮಾಜಿಕ ಪ್ರಜ್ಞೆಯ ಹಬ್ಬವಾಗಿದೆ. ದೇಶ ಮತ್ತು ಪ್ರಪಂಚದಾದ್ಯಂತ ಕೋಟ್ಯಂತರ ಭಕ್ತರು ಈಗಾಗಲೇ ಪ್ರಯಾಗ್‌ರಾಜ್‌ನಲ್ಲಿ ಪವಿತ್ರ ಸ್ನಾನ ಮಾಡಿದ್ದಾರೆ. 'ಮೌನಿ ಅಮಾವಾಸ್ಯೆಯಂದು' ನಡೆದ ದುರ್ಘಟನೆಗೆ ನಾನು ಸಂತಾಪ ಸೂಚಿಸುತ್ತೇನೆ. ಗಾಯಗೊಂಡವರು ಶೀಘ್ರವಾಗಿ ಗುಣಮುಖರಾಗಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಹೇಳಿದ್ದಾರೆ. ಉಭಯ ಸದನಗಳನ್ನುದ್ದೇಶಿಸಿ ಮಾತನಾಡಿ,ರಾಷ್ಟ್ರಪತಿ ದ್ರೌಪದಿ ಮುರ್ಮು. ಎನ್ ಡಿಎ ಸರ್ಕಾರದ ಮೂರನೇ ಅವಧಿಯು ಹಿಂದಿನ ಆಡಳಿತಗಳಿಗಿಂತ ಮೂರು ಪಟ್ಟು ವೇಗದಲ್ಲಿ ಕೆಲಸ ಮಾಡುತ್ತಿದೆ ಎಂದು ಶ್ಲಾಘಿಸಿದರು.

ಅಧಿವೇಶನಕ್ಕೆ ಆಗಮಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಸಂಸತ್ತಿನ ಆವರಣದಲ್ಲಿ ಉಪ ರಾಷ್ಟ್ರಪತಿ ಜಗದೀಪ್ ಧಂಖರ್, ಪ್ರಧಾನಿ ನರೇಂದ್ರ ಮೋದಿ ಮತ್ತು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಹಾಗೂ ಸರ್ಕಾರವು ಸಾಂಸ್ಕೃತಿಕ ಸಂಕೇತವಾಗಿ ಅಳವಡಿಸಿಕೊಂಡ 'ಸೆಂಗೋಲ್'ನ್ನು ಹೊತ್ತ ಅಧಿಕಾರಿ ಸ್ವಾಗತಿಸಿದರು. ರಾಷ್ಟ್ರಪತಿಗಳು ಆರು ಕುದುರೆಗಳನ್ನು ಎಳೆಯುವ ವಿಧ್ಯುಕ್ತ ಬಗ್ಗಿಯಲ್ಲಿ ಕುದುರೆ ಸವಾರಿಯ ಅಂಗರಕ್ಷಕರ ಬೆಂಗಾವಲಿನಲ್ಲಿ ಸಂಸತ್ತಿಗೆ ಆಗಮಿಸಿದರು. ಸಂಸತ್ತಿನ ಕಟ್ಟಡದ ಹುಲ್ಲುಹಾಸಿನ ಮೇಲೆ ಅವರಿಗೆ ಗೌರವ ರಕ್ಷೆ ನೀಡಲಾಯಿತು. ಉಪ ರಾಷ್ಟ್ರಪತಿ ಜಗದೀಪ್ ಧಂಖರ್, ಮೋದಿ, ಓಂ ಬಿರ್ಲಾ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಲೋಕಸಭೆಯ ಕೊಠಡಿಗೆ ಅವರೊಂದಿಗೆ ಆಗಮಿಸಿದರು. ರಾಷ್ಟ್ರಪತಿಗಳ ಭಾಷಣದ ನಂತರ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ 2025ನೇ ಆರ್ಥಿಕ ವರ್ಷದ ಬಜೆಟ್ ಮಂಡಿಸಲಿದ್ದಾರೆ.

| | |
|---|---|
| 1 | ಬಜೆಟ್ ಮಂಡನೆಗೂ ಒಂದು ದಿನ ಮೊದಲು ರಾಷ್ಟ್ರಪತಿ ಭಾಷಣ |
| 2 | MP ರಾಹುಲ್ ಗಾಂಧಿ, ಸೋನಿಯಾ ಗಾಂಧಿ ವಿರುದ್ಧ ಬಿಜೆಪಿ ಕಿಡಿ |
| 3 | 16 ಮಸೂದೆ ಮಂಡನೆಗೆ ಯೋಜನೆ |



ರಾಷ್ಟ್ರಪತಿಗಳು ಭಾಷಣ ಮುಕ್ತಾಯ ಮಾಡುವ ವೇಳೆಗೆ ಸುಸ್ತಾಗಿದ್ದರು. ಕಷ್ಟಪಟ್ಟು ಅವರಿಗೆ ಮಾತನಾಡಲು ಸಾಧ್ಯವಾಗಲಿಲ್ಲ. ಕಳಪೆ ವಿಷಯಗಳ ಬಗ್ಗೆ ಅವರಿಗೆ ಮಾತನಾಡಲು ಕಷ್ಟವಾಗುತ್ತಿತ್ತು. ರಾಷ್ಟ್ರಪತಿಗಳ ಭಾಷಣದ ಬಗ್ಗೆ ಪ್ರತಿಕ್ರಿಯಿಸಿದ ಸಂಸದ ಪಪ್ಪು ಯಾದವ್ ರಾಷ್ಟ್ರಪತಿಗಳನ್ನು 'ರಬ್ಬರ್ ಸ್ಟಾಂಪ್' ಎಂದು ಕರೆದರು. ರಾಷ್ಟ್ರಪತಿಗಳು ಒಂದು ಸ್ಟಾಂಪ್ ಇದ್ದಂತೆ. ಅವರು ಪ್ರೇಮ ಪತ್ರವನ್ನು ಓದಬೇಕು ಅಷ್ಟೇ.

**-ಸೋನಿಯಾ ಗಾಂಧಿ ಕಾಂಗ್ರೆಸ್ ನಾಯಕಿ**



ನನ್ನ ತಾಯಿಗೆ ಈಗ 78 ವರ್ಷ ವಯಸ್ಸಾಗಿದೆ. 'ಇಷ್ಟು ದೀರ್ಘವಾದ ಭಾಷಣವನ್ನು ಓದಿ ಅಧ್ಯಕ್ಷರಿಗೆ ಸುಸ್ತಾಗಿರಬೇಕು. ಪಾಪ' ಎಂದಷ್ಟೇ ಅವರು ಹೇಳಿದ್ದು. ಅವರಿಗೆ ರಾಷ್ಟ್ರಪತಿಯವರ ಬಗ್ಗೆ ಸಂಪೂರ್ಣ ಗೌರವವಿದೆ. ಇಂಥ ವಿಷಯವನ್ನು ಮಾಧ್ಯಮಗಳು ತಿರುಚುತ್ತಿರುವುದು ತುಂಬಾ ದುರದೃಷ್ಟಕರ.ಅವರಿಬ್ಬರೂ ಗೌರವಾನ್ವಿತ ವ್ಯಕ್ತಿಗಳಾಗಿದ್ದು, ಅವರು ನಮಗಿಂತ ಹಿರಿಯರು. ಹಿರಿಯರಾದ ಸೋನಿಯಾರವರ ಮಾತು ಯಾವುದೇ ಅಗೌರವವನ್ನು ಅರ್ಥೈಸುವುದಿಲ್ಲ ಎಂಬುದು ಬಹಳ ಸ್ಪಷ್ಟವಾಗಿದೆ.

**-ಪ್ರಿಯಾಂಕಾ ಕಾಂಗ್ರೆಸ್ ಸಂಸದೆ**

**ಸರಕಾರದ ಪ್ರಯತ್ನಗಳಿಗೆ ಶ್ಲಾಘನೆ**

ಕೋವಿಡ್ ಮತ್ತು ಜಾಗತಿಕ ಸಂಘರ್ಷಗಳಂತಹ ಸವಾಲುಗಳ ಹೊರತಾಗಿಯೂ ಆರ್ಥಿಕತೆಯನ್ನು ಮೇಲೆತ್ತುವ ನಿಟ್ಟಿನಲ್ಲಿ ಸರ್ಕಾರ ಕೆಲಸ ಮಾಡಿದೆ. ಮೋದಿ ಸರ್ಕಾರದ ಮೂರನೇ ಅವಧಿಯು ಹಿಂದಿನ ಆಡಳಿತದ ಮೂರು ಪಟ್ಟು ಕೆಲಸಗಳನ್ನು ಮಾಡುತ್ತಿದೆ. ವಿಮಾನಯಾನ ಮತ್ತು ರೈಲ್ವೇ ವಲಯದಲ್ಲಿ ಸರಕಾರದ ಪ್ರಯತ್ನಗಳನ್ನು ಶ್ಲಾಘಿಸಿದ್ದರು.

## ಬಿಜೆಪಿಗೆ ಹೋದವ್ರನ್ನ ಯೂಸ್ & ಥ್ರೋ ಮಾಡಿದ್ರು


• **ಉದಯವಾಹಿನಿ, ಶಿವಮೊಗ್ಗ**



ಕಾಂಗ್ರೆಸ್‌ನಿಂದ ಬಿಜೆಪಿಗೆ ಹೋದವ್ರನ್ನ ಅವರು ಯೂಸ್ ಥ್ರೋ ರೀತಿ ಟ್ರೀಟ್ ಮಾಡುತ್ತಿದ್ದಾರೆ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ಹೇಳಿದ್ದಾರೆ.ನಗರದ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಈ ವೇಳೆ, ಬಿಜೆಪಿಯಲ್ಲಿ ನಡೆಯುತ್ತಿರುವ ಆಂತರಿಕ ಕಚ್ಚಾಟದ ಬಗ್ಗೆ ಪ್ರತಿಕ್ರಿಯಿಸಿ, ಕಾಂಗ್ರೆಸ್ ಪಕ್ಷವು ಬೇರೆ ಪಕ್ಷಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಮೇಲೆ ಅವಲಂಬಿತವಾಗಿ ಸರ್ಕಾರ ನಡೆಸುತ್ತಿಲ್ಲ. ತಮ್ಮ ಪಕ್ಷದ ಗುರಿ ನಾಡಿನ ಜನತೆಯು ಸರ್ಕಾರದ ಮೇಲಿಟ್ಟಿರುವ ವಿಶ್ವಾಸವನ್ನು ಉಳಿಸಿಕೊಳ್ಳುವುದಾಗಿದೆ ಎಂದಿದ್ದಾರೆ.
ಬಿಜೆಪಿಯವರಿಗೆ ರಾಜ್ಯದ ಜನ ಅಧಿಕಾರ ನೀಡಿದಾಗ ಅವರಲ್ಲಿ ಸರ್ಕಾರ ನಡೆಸುವ ಅನುಭವ ಇರಲಿಲ್ಲ. ಈಗ ವಿರೋಧ ಪಕ್ಷದಲ್ಲಿ ಕೂತು ಕೆಲಸ ಮಾಡಿ ಎಂದು ಜನ ಹೇಳಿದ್ದಾರೆ. ಬಿಜೆಪಿಯಲ್ಲಿನ ಒಳಜಗಳಗಳು ಯಾವತ್ತೂ ಇದ್ದಿದ್ದೇ ಎಂದಿದ್ದಾರೆ.ಅವರ ಪಾರ್ಟಿಯವರು ಏನಾದ್ರೂ ಮಾಡಿಕೊಳ್ಳಲಿ. ನಾವು ಅದಕ್ಕೆ ಮಧ್ಯೆ ಪ್ರವೇಶಿಸಲು ಇಷ್ಟವಿಲ್ಲ. ಅದರಿಂದ ರಾಜಕೀಯ ಲಾಭದ ನಿರೀಕ್ಷೆಯೂ ನಮಗಿಲ್ಲ ಎಂದಿದ್ದಾರೆ.

## ಈ ರೀತಿ ಹೇಳಿಕೆ ನೀಡುವವರನ್ನು ನೇಣಿಗೆ ಹಾಕಬೇಕು

• **ಉದಯವಾಹಿನಿ, ಮೈಸೂರು**



ಉತ್ತರಪ್ರದೇಶದ ಪ್ರಯಾಗ್ರಾಜನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳದಲ್ಲಿ ಗಂಗೆಸ್ನಾನ ಮಾಡುವುದರ ಕುರಿತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿಕೆಗೆ ತೀವ್ರ ಆಕ್ರೋಶ ವ್ಯಕ್ತವಾಗಿದ್ದು, ಇದೀಗ ಬಿಜೆಪಿಯ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಇಂತಹ ಹೇಳಿಕೆ ನೀಡುವವರನ್ನು ನೇಣಿಗೆ ಹಾಕಬೇಕು ಎಂದು ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಆಕ್ರೋಶ ಹೊರ ಹಾಕಿದರು.
ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಗಂಗೆಯಲ್ಲಿ ಪುಣ್ಯ ಸ್ನಾನ ಮಾಡೋದು ಸಂಸ್ಕೃತಿ. ಗಂಗೆಯಲ್ಲಿ ಪುಣ್ಯ ಸ್ನಾನ ಮಾಡಿ ಅಂತ ಪೋಸ್ಟರ್ ಹಾಕಿಲ್ಲ. ಕೋಟ್ಯಂತರ ಜನರ ನಂಬಿಕೆ ನೋಯಿಸುವ ಕೆಲಸ ಆಗಿದೆ. ಈ ರೀತಿ ಯಾರೇ ಹೇಳಿಕೆ ನೀಡಿದರು ನೇಣಿಗೆ ಹಾಕಬೇಕು. ಇದನ್ನು ನಿಂದಿಸುವ ಗೌರಿಸುವ ಕೆಲಸ ಮಾಡಬಾರದು ಮಲ್ಲಿಕಾರ್ಜುನ ಖರ್ಗೆ ಮನೆಯಲ್ಲಿ ನಿತ್ಯ ಪೂಜೆ ಮಾಡುತ್ತಾರೆ. ಹೊರಗೆ ಬಂದು ಯಾರನ್ನು ಮುಚ್ಚಿಸಲು ಹೀಗೆ ಟೀಕಿಸುತ್ತಿದ್ದೀರಾ ಎಂದು ಆಕ್ರೋಶ ವ್ಯಕ್ತಪಡಿಸಿದರು.

## ಅಸ್ತಿತ್ವ ಉಳಿಸಿಕೊಳ್ಳಲು ರಾಜ್ಯಸಭಾ ಸ್ಥಾನಕ್ಕೆ ಬೇಡಿಕೆ ಇಟ್ಟರಾ ಶ್ರೀರಾಮುಲು

### ಆಂಧ್ರದಿಂದ ರಾಜ್ಯಸಭಾ ಸದಸ್ಯರನ್ನಾಗಿ ಮಾಡುವಂತೆ ರಾಜ್ಯ ನಾಯಕರ ಮೂಲಕ ಸಂದೇಶ

• **ಉದಯವಾಹಿನಿ, ಬಳ್ಳಾರಿ**



ಬಿಜೆಪಿ ನಾಯಕರ ಮೇಲೆ ಮುನಿಸಿಕೊಂಡರೋ ಶ್ರೀರಾಮುಲು ಅವರನ್ನ ಸಮಾಧಾನ ಮಾಡಲು ರಾಜ್ಯ ಹಾಗೂ ರಾಷ್ಟ್ರೀಯ ನಾಯಕರು ಸರ್ಕಸ್ ಮಾಡ್ತಿದ್ದಾರೆ. ಈ ನಡುವೆ ಶ್ರೀರಾಮುಲು ಇದೀಗ ಹೊಸ ವರಸೆ ಶುರು ಮಾಡಿದ್ದು, ರಾಜ್ಯಸಭಾ ಸದಸ್ಯ ಸ್ಥಾನಕ್ಕೆ ಬೇಡಿಕೆ ಇಟ್ಟಿದ್ದಾರೆ ಎನ್ನಲಾಗಿದೆ.
ರಾಜ್ಯ ಹಾಗೂ ರಾಷ್ಟ್ರೀಯ ನಾಯಕರು ಎಷ್ಟೇ ಕರೆ ಮಾಡಿ ಕರೆದರೂ ಪಕ್ಷದ ನಾಯಕರಿಂದ ಶ್ರೀರಾಮುಲು ದೂರವೇ ಉಳಿಯುತ್ತಿದ್ದಾರೆ. ಸದ್ಯ ಪಕ್ಷದಲ್ಲಿ ಯಾವುದೇ ಹುದ್ದೆ ಇಲ್ಲ, ವಿಧಾನಸಭೆ ಮತ್ತು ಲೋಕಸಭೆ ಎರಡರಲ್ಲೂ ಸೋತಿರೋ ಶ್ರೀರಾಮುಲು, ಜೆ.ಪಿ ನಡ್ಡಾ ಅಮಿತ್ ಶಾ ದೆಹಲಿಗೆ ಬರುವಂತೆ ಸೂಚನೆ ನೀಡಿದ ಹಿನ್ನೆಲೆ ದೆಹಲಿ ಚುನಾವಣೆ ಮುಗಿದ ಬಳಿಕ ಹೈಕಮಾಂಡ್ ಭೇಟಿಯಾಗಲು ನಿರ್ಧಾರ ಮಾಡಿದ್ದಾರೆ. ಅಸ್ತಿತ್ವದ ಪ್ರಶ್ನೆ ಹಾಗೂ ಅಸ್ತಿತ್ವದ ಉಳಿವಿನ ಹೋರಾಟದಲ್ಲಿರುವ ರಾಮುಲುರಿಂದ ರಾಜ್ಯ ಸಭಾ ಸದಸ್ಯರನ್ನಾಗಿ ಮಾಡುವಂತೆ ಒತ್ತಾಯ ಮಾಡಿದ್ದಾರೆ ಎನ್ನಲಾಗಿದೆ. ರಾಜ್ಯದಲ್ಲಿ ಮತ್ತೊಮ್ಮೆ ಸಕ್ರಿಯರಾಗಿ ಪಕ್ಷ ಕಟ್ಟಲು, ತಮ್ಮನ್ನು ರಾಜ್ಯಸಭೆ ಸದಸ್ಯರನ್ನಾಗಿ ಮಾಡುವಂತೆ ಬೇಡಿಕೆ ಇಡಲಿದ್ದಾರೆ. ಮೊನ್ನೆ ಆಂಧ್ರದ ರಾಜ್ಯಸಭೆ ಸದಸ್ಯ ವೈಎಸ್‌ಆರ್‌ಪಿ ಪಕ್ಷದ ವಿಜಯ ಸಾಯಿರೆಡ್ಡಿ ರಾಜೀನಾಮೆ ನೀಡಿದ್ದಾರೆ.

**4 ವರ್ಷದ ಅವಧಿ ಇನ್ನೂ ಬಾಕಿ**

ವಿಜಯ ಸಾಯಿ ರೆಡ್ಡಿಯವರ 4 ವರ್ಷದ ಅವಧಿ ಇನ್ನೂ ಬಾಕಿ ಇರೋ ಹಿನ್ನೆಲೆ ಆಂಧ್ರ ಕೋಟಾದಡಿ ರಾಜ್ಯಸಭೆ ಮಾಡುವಂತೆ ಮನವಿ ಮಾಡಲಿದ್ದಾರಂತೆ. ಈ ಬಗ್ಗೆ ಸೂಕ್ಷ್ಮವಾಗಿ ರಾಜ್ಯ ಮುಖಂಡ ಮೂಲಕ ಸಂದೇಶ ನೀಡಿರುವ ರಾಮುಲು, ದೆಹಲಿ ಭೇಟಿ ವೇಳೆ ಈ ಬಗ್ಗೆ ಚರ್ಚೆ ನಡೆಸುವ ಸಾಧ್ಯತೆ ಇದೆ ಎನ್ನಲಾಗಿದೆ.

# ರಾಜ್ಯಾಧ್ಯಕ್ಷ ಚುನಾವಣೆ: ಇದೊಂದು ಯುದ್ಧ, ಹಿಂದೆ ಸರಿಯೋ ಮಾತೇ ಇಲ್ಲ

● ರಾಜ್ಯ ಬಿಜೆಪಿಯಲ್ಲಿ ನಡೆಯುತ್ತಿರುವ ಬೆಳವಣಿಗೆ ಹಿನ್ನೆಲೆಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾಗೆ ಸುದೀರ್ಘ ಪತ್ರವನ್ನು ಬರೆಯಲಾಗಿದೆ

• **ಉದಯವಾಹಿನಿ, ಬೆಂಗಳೂರು**

ಇದೊಂದು ಯುದ್ಧ, ನಮ್ಮದು ಮಾಡು ಇಲ್ಲವೆ ಮಡಿ ಹೋರಾಟ. ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಬಿಜೆಪಿ ರೆಬೆಲ್ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಗುಡುಗಿದ್ದಾರೆ.

ಸದಾಶಿವನಗರದ ಕುಮಾರ ಬಂಗಾರಪ್ಪ ನಿವಾಸದಲ್ಲಿ ಶುಕ್ರವಾರ ನಡೆದ ಸಭೆಯ ಬಳಿಕ ಮಾತನಾಡಿದ ಅವರು, ರಾಜ್ಯ ಬಿಜೆಪಿಯಲ್ಲಿ ನಡೆಯುತ್ತಿರುವ ಬೆಳವಣಿಗೆ ಹಿನ್ನೆಲೆಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾಗೆ ಸುದೀರ್ಘ ಪತ್ರವನ್ನು ಬರೆಯಲಾಗಿದೆ. ಪಕ್ಷದ ಚೌಕಟ್ಟಿನಲ್ಲಿ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

ಜಿಲ್ಲಾಧ್ಯಕ್ಷರ ನೇಮಕಾತಿ ಪ್ರಕ್ರಿಯೆ ವ್ಯವಸ್ಥಿತ ರೀತಿಯಲ್ಲಿ ಮಾಡಿಲ್ಲ. ರಾಜ್ಯಾಧ್ಯಕ್ಷ ಆಗುವ ಉದ್ದೇಶದಿಂದ ಮಾಡಲಾಗಿದೆ. ಯಾರನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಏಕಪಕ್ಷೀಯವಾಗಿ ಬೇಕಾಬಿಟ್ಟಿ ಮಾಡಲಾಗಿದೆ ಎಂದು ಆರೋಪಿಸಿದರು. ಜಿಲ್ಲಾಧ್ಯಕ್ಷರ ನೇಮಕಾತಿಯಲ್ಲಿ ಸಾಕಷ್ಟು ಗೊಂದಲ ಆಗಿದೆ. ಜಿಲ್ಲಾಧ್ಯಕ್ಷರ ಘೋಷಣೆ ಬಳಿಕ ತಟಸ್ಥ ಗುಂಪು ಜೆಪಿ ನಡ್ಡಾ ಅವರಿಗೆ ಪತ್ರವನ್ನು ಬರೆದಿದ್ದಾರೆ. ಏಕಪಕ್ಷೀಯವಾಗಿ ಚುನಾವಣೆ ನಡೆಸಲಾಗಿದೆ ಎಂದು ದೂರು ನೀಡಿದ್ದಾರೆ ಎಂದು ವಿವರಿಸಿದರು. ರಾಜ್ಯಾಧ್ಯಕ್ಷ ಚುನಾವಣೆ ಬಂದರೆ ಅಭ್ಯರ್ಥಿ ಆಯ್ಕೆ ಮಾಡುವ ನಿಟ್ಟಿನಲ್ಲಿ ಇನ್ನೆರಡು ದಿನ ಚರ್ಚೆ ಮಾಡಿ ನಿರ್ಧಾರ ಮಾಡುತ್ತೇವೆ. ಈ ನಿಟ್ಟಿನಲ್ಲಿ ದೆಹಲಿಯಲ್ಲಿ ಸಭೆ ನಡೆಸುತ್ತೇವೆ. ಜಿಲ್ಲಾಧ್ಯಕ್ಷರ ನೇಮಕಾತಿ ಪಾರದರ್ಶಕವಾಗಿಲ್ಲ. ಅಪಮಾನ, ಅವಮಾನ ಮಾಡುವ ರೀತಿಯಲ್ಲಿ ಜಿಲ್ಲಾಧ್ಯಕ್ಷರ ಆಯ್ಕೆ ನಡೆದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ನನ್ನ ಹೋರಾಟಕ್ಕೆ ನಾವು ಬದ್ಧ, ಯಾವುದೇ ಬದಲಾವಣೆ ಇಲ್ಲ. ದೆಹಲಿಯಲ್ಲಿ ಸಂಸತ್ ಅಧಿವೇಶನ ನಡೆಯುತ್ತಿದೆ. ಅಲ್ಲಿ ಎಲ್ಲರ ಜೊತೆಗೆ ಚರ್ಚೆ ಮಾಡಿ ಯಾರನ್ನು ರಾಜ್ಯಾಧ್ಯಕ್ಷರನ್ನಾಗಿ ಆಯ್ಕೆ ಮಾಡುವ ನಿಟ್ಟಿನಲ್ಲಿ ಚರ್ಚೆ ಮಾಡಿ ನಿರ್ಣಯ ಕೈಗೊಳ್ಳುತ್ತೇವೆ.



**ನಮ್ಮದು ಡು ಆರ್ ಡೈ,, ಇದೊಂದು ಯುದ್ಧ**

ಜಿಲ್ಲಾಧ್ಯಕ್ಷರ ನೇಮಕಾತಿಯ ಸಂದರ್ಭದಲ್ಲಿ ಕೇಂದ್ರವನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದಾರಾ ಎಂಬುದು ಗೊತ್ತಿಲ್ಲ. ಹೈಕಮಾಂಡ್ ನಮ್ಮನ್ನು ಕೇಳಲೇ ಇಲ್ಲ ಎಂದು ಹೇಳಲು ಸಾಧ್ಯವಿಲ್ಲ. ಯಡಿಯೂರಪ್ಪ ಬಿಟ್ಟರೆ ಬಿಜೆಪಿ ಇಲ್ಲ ಎಂಬ ವಾತಾವರಣ ಇತ್ತು, ಆದರೆ ಈಗಿಲ್ಲ ಎಂದರು. ಎಸ್ ಆರ್ ವಿಶ್ವನಾಥ ನಿಷ್ಠೆ ಬಿಎಸ್ ಯಡಿಯೂರಪ್ಪಗೆ, ವಿಜಯೇಂದ್ರಗೆ ಅಲ್ಲ. ನಮ್ಮ ಶಕ್ತಿ ದೊಡ್ಡದಾಗಿದೆ. ದೊಡ್ಡ ಗುಂಪು ತಯಾರಾಗಿದೆ. ಎಲ್ಲಾ ಒಂದೇ ಮನಸ್ಥಿತಿ ಹೊಂದಿದ್ದೇವೆ ಎಂದರು. ನಮ್ಮದು ಡು ಆರ್ ಡೈ,, ಇದೊಂದು ಯುದ್ಧ, ಹಿಂದೆ ಸರಿಯುವ ಪ್ರಶ್ನೆ ಇಲ್ಲ ಎಂದರು. ರಾಜ್ಯಾಧ್ಯಕ್ಷ ಅಷ್ಟು ಬೇಗ ಆಯ್ಕೆ ಮಾಡುವುದಿಲ್ಲ. ಹಿರಿಯ ನಾಯಕರ ಅಭಿಪ್ರಾಯ ಪಡೆಯಬೇಕು. ಇನ್ನೂ ಸಾಕಷ್ಟು ಪ್ರಕ್ರಿಯೆ ಇದೆ. ಹೈಕಮಾಂಡ್ ಗೆ ಈಗ ಮನವರಿಕೆ ಆಗ್ತಿದೆ ಎಂದು ಹೇಳಿದರು.

23 ಜಿಲ್ಲಾಧ್ಯಕ್ಷರ ನೇಮಕಾತಿಗೆ ಒಪ್ಪಿಗೆ ಇಲ್ಲ. ಯಾರನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ರಾತ್ರೋ ರಾತ್ರಿ ನಮಗೆ ಬೇಕಾದವರನ್ನು ಆಯ್ಕೆ ಮಾಡಲಾಗಿದೆ. ಯಾರನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ನಾಯಕತ್ವ ಎಂದರೆ ಏನು ರಾಜ್ಯಾಧ್ಯಕ್ಷ ಬಿಜೆಪಿ ಕರ್ನಾಟಕದ ನಾಯಕ ಆಗಬೇಕು. ಆದರೆ ವಿಜಯೇಂದ್ರ ಉದ್ಧಟತನದಿಂದ ವರ್ತಿಸುತ್ತಿದ್ದಾರೆ. ಇದು ಆತಂಕಕಾರಿ. ಮುಂದಿನ ದಿನಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಬರಬೇಕು, ಒಳ್ಳೆಯ ಆಡಳಿತ ನೀಡಬೇಕು ಎಂಬ ನಿಟ್ಟಿನಲ್ಲಿ ನಮ್ಮ ಹೋರಾಟ ಎಂದರು.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹8,433 /Gram24ct ₹7,730/Gram22ct ಬೆಳ್ಳಿ: ₹99.50/Gram


# ಗಂಗರ ಕಾಲದ ಗಂಗವಾಡಿ ವೀರಭದ್ರೇಶ್ವರ ದೇವಸ್ಥಾನ ಜೀರ್ಣೋದ್ಧಾರ

## ಗ್ರಾಮದಲ್ಲಿ ವೀರಭದ್ರ ದೇವರ ಸುಂದರ ವಿಗ್ರಹವನ್ನು ಕೆತ್ತಿಸಿ ಪ್ರತಿಷ್ಠಾಪಿಸದ್ದಾರೆ ಎಂಬ ಪ್ರತೀತಿ ಇದೆ

• ಉದಯವಾಹಿನಿ ಸಂತೇಮರಹಳ್ಳಿ

ಗಂಗವಾಡಿಯಲ್ಲಿ ಐದು ಶತಮಾನಗಳ ಹಿಂದೆ ಗಂಗರು ನಿರ್ಮಾಣ ಮಾಡಿರುವ ವೀರಭದ್ರೇಶ್ವರ ದೇವಸ್ಥಾನ ಸಾಂಸ್ಕೃತಿಕ, ಸಾಹಿತ್ಯ ಹಾಗೂ ಶಿಲ್ಪಕಲೆಯ ಶ್ರೀಮಂತಿಕೆಗೆ ಸಂತೇಮರಹಳ್ಳಿ ಗಂಗವಾಡಿ ವೀರಭದ್ರೇಶ್ವರ ದೇವಸ್ಥಾನ ಸಾಕ್ಷಿಯಾಗಿದೆ. ಗಂಗರು 500 ವರ್ಷಗಳ ಹಿಂದೆ ಈ ಭಾಗದಲ್ಲಿ ಆಡಳಿತ ನಡೆಸಿದ್ದರು ಎಂಬುದಕ್ಕೆ ಗಂಗವಾಡಿ ಗ್ರಾಮದಲ್ಲಿ ಲಭ್ಯವಾಗಿರುವ ಮಾಸ್ತಿಗಲ್ಲು ಹಾಗೂ ಶಿಲ್ಪ ಕಲೆಗಳು ಗಂಗ ಸಾಮ್ರಾಜ್ಯದ ಉತ್ತುಂಗದಲ್ಲಿದ್ದ ವಿಚಾರವನ್ನು ಸಾರಿ ಹೇಳುತ್ತಿವೆ.

ಗ್ರಾಮದಲ್ಲಿ ನಿರ್ಮಿಸಿರುವ ವೀರಭದ್ರೇಶ್ವರ ದೇವಸ್ಥಾನ ಇತಿಹಾಸ ಪ್ರಸಿದ್ಧವಾಗಿದ್ದು, ಹೊರ ರಾಜ್ಯಗಳಲ್ಲದೆ, ವಿದೇಶಗಳಲ್ಲೂ ನೆಲೆಸಿರುವ ಭಕ್ತರು ದೇವರ ದರ್ಶನಕ್ಕೆ ಬರುತ್ತಾರೆ.



ಉದಯವಾಹಿನಿ ಚಿತ್ರ

**ಯುಗಾದಿ ಮುಗಿದ 10ನೇ ದಿನಕ್ಕೆ ರಥೋತ್ಸವ**

ಗಂಗರ ಆಡಳಿತ ಅವಧಿಯಲ್ಲಿ ಈ ಭಾಗದಲ್ಲಿದ್ದ ಶಾಂತ ಮಹರ್ಷಿಗಳು ಅವರ ತಪೋಭೂಮಿಯಾಗಿದ್ದ ಗಂಗವಾಡಿ ಗ್ರಾಮದಲ್ಲಿ ವೀರಭದ್ರ ದೇವರ ಸುಂದರ ವಿಗ್ರಹವನ್ನು ಕೆತ್ತಿಸಿ ಪ್ರತಿಷ್ಠಾಪಿಸದ್ದಾರೆ ಎಂಬ ಪ್ರತೀತಿ ಇದೆ. ಈ ಅವಧಿಯಲ್ಲಿ ಚೋಳರು ಪ್ರಾಬಲ್ಯ ಇದ್ದರೂ ಗಂಗರು ವೀರಭದ್ರ ವಿಗ್ರಹ ಕಂಡು ಬಂದ ಸ್ಥಳದಲ್ಲಿ ಗುಡಿ ಗೋಪುರಗಳನ್ನು ನಿರ್ಮಿಸಿ ಸುಂದರ ದೇವಸ್ಥಾನವನ್ನು ನಿರ್ಮಿಸಿದ್ದಾರೆ ಎನ್ನಲಾಗಿದೆ. ದೇವಸ್ಥಾನದಲ್ಲಿ 6 ಅಡಿ ಎತ್ತರದ ಸುಂದರ ವೀರಭದ್ರ ದೇವರ ಆಕರ್ಷಕ ವಿಗ್ರಹವಿದೆ. ವಿಗ್ರಹದ ಬಲ ಭಾಗದಲ್ಲಿ ಗಣಪತಿಯ ವಿಗ್ರಹವಿದೆ. ಎಡ ಬಲದಲ್ಲಿ ಬೃಹದಾಕಾರದ ದ್ವಾರಪಾಲಕರ ವಿಗ್ರಹಗಳನ್ನು ನಿಲ್ಲಿಸಲಾಗಿದೆ.

**ಇತಿಹಾಸ ಪ್ರಸಿದ್ಧ ದೇವಸ್ಥಾನವು ಕಂಗೊಳಿಸುತ್ತಿದ್ದು ಭಕ್ತರನ್ನು ಸೆಳೆಯುತ್ತಿದೆ. ಯುಗಾದಿ ಮುಗಿದ 10ನೇ ದಿನಕ್ಕೆ ರಥೋತ್ಸವ 11ನೇ ದಿನಕ್ಕೆ ಕೊಂಡೋತ್ಸವ, 12ನೇ ದಿನಕ್ಕೆ ದೇವಿ ಕೆರೆಯಲ್ಲಿ ತೆಪ್ಪೋತ್ಸವ ನಡೆಯುತ್ತದೆ ಎಂದು ಅರ್ಚಕರಾದ ಸುರೇಂದ್ರ ಧೀಕ್ಷಿತ್, ವಿಕೇಶ್ ಹಾಗೂ ವೀರಗಾಸೆ ಕಲಾವಿದ ಶಿವರುದ್ರಸ್ವಾಮಿ ತಿಳಿಸಿದರು.**

ದೇವಸ್ಥಾನವನ್ನು ಸಂಪೂರ್ಣವಾಗಿ ಕಲ್ಲಿನಿಂದ ನಿರ್ಮಾಣ ಮಾಡಲಾಗಿದೆ. ಪ್ರತಿ ಕಂಬಗಳಲ್ಲಿ ಪೌರಾಣಿಕ ಹಾಗೂ ವಚನಕಾರರನ್ನು ಬಿಂಬಿಸುವ ಕೆತ್ತನೆ ಇದೆ. ದೇವಸ್ಥಾನ ಸಂಪೂರ್ಣ ದ್ರಾವಿಡ ಶೈಲಿಯಲ್ಲಿ ನಿರ್ಮಾಣ ಮಾಡಲಾಗಿದೆ.

**ಭಕ್ತರ ದೇಣಿಗೆ ಹಾಗೂ ಸ್ವಂತ ಹಣ ಬಳಸಿ ಮುತ್ತುವರ್ಜಿ ವಹಿಸಿ ದೇವಸ್ಥಾನವನ್ನು ಜೀರ್ಣೋದ್ಧಾರಗೊಳಿಸಿದ್ದಾರೆ. ಶಿಥಿಲಾವಸ್ಥೆ ತಲುಪಿದ ದೇವಸ್ಥಾನವನ್ನು ಅಭಿವೃದ್ಧಿಪಡಿಸಿದ ಪರಿಣಾಮ ದೇವಸ್ಥಾನದ ಸುತ್ತಮುತ್ತಲಿನ ಹಾಗೂ ಗ್ರಾಮಗಳ ರಸ್ತೆಗಳು ಅಭಿವೃದ್ಧಿಗೊಂಡಿದೆ.ದೇವಸ್ಥಾನಗಳು ಗ್ರಾಮಗಳ ಧಾರ್ಮಿಕ ಹಾಗೂ ಭಾವೈಕ್ಯತೆಯ ಸಂದೇಶವಾಗಿದೆ ಎಂದು ದುಗ್ಗಟ್ಟಿ ಪಿ.ವೀರಭದ್ರಪ್ಪ ಹೇಳುತ್ತಾರೆ.**


ಸಭಾಂಗಣ, ಗರ್ಭಾಂಕಣ, ಉತ್ಸವ ಮೂರ್ತಿ ಅಂಕಣ ಹಾಗೂ ಗರ್ಭಗುಡಿ ಅಂಕಣಗಳು ದೇವಸ್ಥಾನದಲ್ಲಿವೆ. ಕಂಬಗಳಲ್ಲಿ ಲಿಂಗ, ಬೇಡರ ಕಣ್ಣಪ್ಪ, ಚಂಡಿಕೇಶ್ವರಿ, ಆಂಜನೇಯ ಸಹಿತ ಹಲವು ಸಕಲ ದೇವತೆಗಳ ಕೆತ್ತನೆಗಳು ಆಕರ್ಷಕವಾಗಿವೆ. ಡೈನೋಸಾರ್ ಮಾದರಿಯ ಪ್ರಾಣಿ ಮನುಷ್ಯನನ್ನು ನುಂಗುವ ದೃಶ್ಯವೂ ಇರುವುದು ವಿಶೇಷವಾಗಿದೆ. ಲಿಂಗವೊಂದಕ್ಕೆ ಎರಡು ತಲೆಯ ಹಸುವೊಂದು ಹಾಲು ಕರೆಯುವ ದೃಶ್ಯ ಗಮನ ಸೆಳೆಯುತ್ತದೆ.

ಜೀರ್ಣೋದ್ಧಾರ ಶತಮಾನಗಳು ಕಳೆದಂತೆ ದೇವಸ್ಥಾನ ಸಂಪೂರ್ಣವಾಗಿ ಶಿಥಿಲಾವಸ್ಥೆ ತಲುಪಿತ್ತು.

ಪೂಜಾ ಕೈಂಕಯ, ಭಕ್ತರ ಸಂಖ್ಯೆ ಕ್ಷೀಣಿಸುತ್ತಿರುವುದನ್ನು ಕಂಡ ಶಿಕ್ಷಣ, ಧಾರ್ಮಿಕ ಹಾಗೂ ಸಮಾಜ ಸೇವೆಯಲ್ಲಿ ಮುಂಚೂಣಿಯಲ್ಲಿರುವ ದುಗ್ರಹಟ್ಟಿ ಪಿ.ವೀರಭದ್ರಪ್ಪನವರು 1989ರಲ್ಲಿ ಸುತ್ತಲಿನ ಗ್ರಾಮಸ್ಥರು ಹಾಗೂ ಮುಖಂಡರ ಸಭೆ ಕರೆದು ದೇವಸ್ಥಾನ ಅಭಿವೃದ್ಧಿ ಸಮಿತಿ ರಚಿಸಿದರು.

# ನಾಡಕುಸ್ತಿ: ವಿಜಯೇಂದ್ರ 'ಸುತ್ತೂರು ಕೇಸರಿ'

• ಉದಯವಾಹಿನಿ ನಂಜನಗೂಡು



ಉದಯವಾಹಿನಿ ಚಿತ್ರ

**ಡಾ.ಯತೀಂದ್ರ ಸಿಎಂ ನಾಡಕುಸ್ತಿಗೆ ಚಾಲನೆ**

ಮಂಡ್ಯ ಜಿಲ್ಲೆಯ ದರಸಗುಪ್ಪೆ ಗ್ರಾಮದ ಪೈಲ್ವಾನ್ ವಿಜಯೇಂದ್ರ ಹಾಗೂ ಹೊಸಹಳ್ಳಿಯ ಪೈಲ್ವಾನ್ ಸೂರಜ್ ಕ್ರಮವಾಗಿ 'ಸುತ್ತೂರು ಕೇಸರಿ' 'ಸುತ್ತೂರು ಕುಮಾರ' ಪ್ರಶಸ್ತಿ ಗೆದ್ದರು. ಸುತ್ತೂರಿನಲ್ಲಿ ನಡೆಯುತ್ತಿರುವ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಮುಕ್ತಾಯಗೊಂಡ ನಾಡಕುಸ್ತಿಯ ಅಂತಿಮ ಹಣಾಹಣಿಯಲ್ಲಿ ವಿಜಯೇಂದ್ರ ಅವರು ಲಿಂಗದೇವರು ಕೊಪ್ಪಲಿನ ಪೈಲ್ವಾನ್ ಅರ್ಜುನ್ ಅವರನ್ನು ಮಣಿಸಿದರು. ನಂಜನಗೂಡಿನ ಒಕ್ಕಲಗೇರಿ ಗರಡಿಯ ಸೂರ್ಯ ಕಾಂತ್ ನಡುವೆ ನಡೆದ ಜಿದ್ದಾಜಿದ್ದಿನ ಸೆಣಸಾಟದಲ್ಲಿ ಹೊಸಹಳ್ಳಿ ಸೂರಜ್ ಮೇಲುಗೈ ಸಾಧಿಸಿ, 'ಸುತ್ತೂರು ಕುಮಾರ' ಆದರು.

ಬೆಳಗಾವಿಯ ಪ್ರಕಾಶ್ ಪಾಟೀಲ್ ಇಂಗಳಗಿ ಹಾಗೂ ಹರಿಯಾಣ ರಾಜ್ಯದ ಸೋನಿಫತ್ ಅಖಾಡದ ಪವನ್ ಕುಮಾರ್ ನಡುವೆ ಒಂದು ಗಂಟೆಗೂ ಹೆಚ್ಚು ಕಾಲ ನಡೆದ ಮಾರ್ಪಿಟ್ ಕುಸ್ತಿಯಲ್ಲಿ ಪವನ್ ಕುಮಾರ್ ಜಯಗಳಿಸಿದರು. ಪ್ರಕಾಶ್ ಅರ್ಧದಲ್ಲೇ ಗಾಯಗೊಂಡು ನಿವೃತ್ತರಾದರು. ನಾಡಕುಸ್ತಿಯಲ್ಲಿ 79 ಜೋಡಿ ಕುಸ್ತಿ ಡ್ರಾ ಆಯಿತು. ಸಂಸದ ಸುನೀಲ್ ಬೋಸ್ ಹಾಗೂ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ಧರಾಮಯ್ಯ ನಾಡಕುಸ್ತಿಗೆ ಚಾಲನೆ ನೀಡಿದರು. ಸಿದ್ದರಾಜು, ಶಂಕರ್ ಜಾನಿ, ಹೊಸಹಳ್ಳಿ ಶಿವಣ್ಣ ತೀರ್ಪುಗಾರರಾಗಿದ್ದರು.

ಶಾಸಕರಾದ ಹರೀಶ್ ಗೌಡ, ಶರಣಗೌಡ ಕುಂದಾಪುರ, ಪುಟ್ಟರಂಗಶೆಟ್ಟಿ, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ವೀರಶೇವ ಲಿಂಗಾಯಿತ ಮಹಾ ಸಭಾ ಬೆಂಗಳೂರು ಜಿಲ್ಲಾಧ್ಯಕ್ಷ ಎಸ್.ಗುರುಸ್ವಾಮಿ, ಸಾಲೂರು ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಕಂಬಳೀಶ್ವರ ಮಠದ ಚೆನ್ನಬಸವ ಸ್ವಾಮೀಜಿ ಪಾಲ್ಗೊಂಡಿದ್ದರು.

# ಸ್ವಾಭಿಮಾನದ ಬದುಕಿಗೆ ಆಧಾರವಾದ ಹೈನುಗಾರಿಕೆ

• ಉದಯವಾಹಿನಿ ಗುಂಡ್ಲುಪೇಟೆ

ಸಾಧಿಸುವ ಛಲವಿದ್ದರೆ ಎಂತಹ ಸವಾಲುಗಳನ್ನೂ ಎದುರಿಸಿಯೂ ಜಯಿಸಿ ಗುರಿ ಮುಟ್ಟಬಹುದು ಎಂಬುದಕ್ಕೆ ತಾಲ್ಲೂಕಿನ ಲಕ್ಕೂರು ಗ್ರಾಮದ ಉಮೇಶ್ ವಿಶ್ವಾರಾಧ್ಯ ಸಾಕ್ಷಿಯಾಗಿದ್ದಾರೆ. ಹೈನೋದ್ಯಮದಲ್ಲಿ ಯಶಸ್ವಿಯಾಗಿ ಬದುಕು ಕಟ್ಟಿಕೊಂಡಿರುವ ಉಮೇಶ್ ನಿರುದ್ಯೋಗಿ ಯುವಕರಿಗೆ ಮಾದರಿಯಾಗಿದ್ದಾರೆ.

120 ರಾಸುಗಳನ್ನು ಸಾಕಿರುವ ಉಮೇಶ್ ಪ್ರತಿದಿನ 150ಕ್ಕೂ ಹೆಚ್ಚು ಲೀಟರ್ ಹಾಲು ಕರೆಯುತ್ತಿದ್ದು ಪ್ರತಿ ತಿಂಗಳು ರೂ.2.5 ಲಕ್ಷ ಸಂಪಾದನೆ ಮಾಡುತ್ತಿದ್ದಾರೆ. ಅನ್ಯರ ಜಮೀನು ಗುತ್ತಿಗೆ ಪಡೆದುಕೊಂಡು ನಾಲ್ಕು ಹಸುಗಳಿಂದ ಹೈನೋದ್ಯಮ ಆರಂಭಿಸಿದ ಉಮೇಶ್ ಮಾದರಿ ಹೈನುಗಾರಿಕೆಯಲ್ಲಿ ಯಶಸ್ಸು ಕಂಡುಕೊಂಡಿದ್ದಾರೆ. ದಿನಚರಿ ಹೇಗೆ: ಪ್ರತಿದಿನ ಬೆಳಗಿನ ಜಾವ ನಾಲ್ಕು ಗಂಟೆಗೆ ಎದ್ದು ಹಸುಗಳ ಮೈತೊಳೆದು ಹಾಲು ಕರೆದು 11 ಗಂಟೆಯವರೆಗೆ ಹಸುಗಳು ಮೆಲುಕು ಹಾಕಲು ಕಟ್ಟಲಾಗುತ್ತದೆ. ಬಳಿಕ ಹಸುಗಳನ್ನು



ಉದಯವಾಹಿನಿ ಚಿತ್ರ

ಕೊಟ್ಟಿಗೆಯಲ್ಲಿ ಕಟ್ಟಿ ಮೇವು ಹಾಕಲಾಗುವುದು. ಹಾಲು ಕರೆಯಲು ಹಾಗೂ ಕೊಟ್ಟಿಗೆಯನ್ನು ಸ್ವಚ್ಛ ಮಾಡಲು ಯಂತ್ರಗಳನ್ನು ಬಳಕೆ ಮಾಡುವುದರಿಂದ ಮಾನವ ಶ್ರಮ ಹೆಚ್ಚು ಬೇಡುವುದಿಲ್ಲ ಎನ್ನುತ್ತಾರೆ ಉಮೇಶ್, ಮುಂದೆ ಹೆಚ್ಚಿನ ರಾಸುಗಳನ್ನು ಖರೀದಿಸಿ ಸಾಕುವ ಆಸೆ ಇದೆ. ಹೈನೋದ್ಯಮ ಕಾರ್ಯಕ್ಕೆ ಪತ್ನಿ ಬೆನ್ನೆಲುಬಾಗಿ ದುಡಿಯುತ್ತಿದ್ದಾರೆ.

ಕುಟುಂಬದ ಪ್ರೇರಣೆಯಿಂದ ಹೈನುಗಾರಿಕೆಯಲ್ಲಿ ಯಶಸ್ಸು ದೊರೆತಿದೆ ಎನ್ನುತ್ತಾರೆ ಅವರು.ಗ್ರಾಮದಲ್ಲಿ ಕೃಷಿ ಜಮೀನಿದ್ದರೂ ಹಲವರು ಪಟ್ಟಣಕ್ಕೆ ಬಿಡಿಗಾಸು ಸಂಪಾದಿಸಲು ವಲಸೆ ಹೋಗುತ್ತಿದ್ದಾರೆ. ಕೃಷಿಯ ಜೊತೆಗೆ ಹೈನುಗಾರಿಕೆಯನ್ನು ಉಪಕಸುಬಾಗಿ ಮಾಡಿಕೊಂಡರೆ ಉತ್ತಮ ಆದಾಯ ಗಳಿಸಬಹುದು.

**ಹಸುಗಳಿಗೆ ಆರೋಗ್ಯದಲ್ಲಿ ಏರುಪೇರಾದರೆ ತಕ್ಷಣ ಪ್ರಾಥಮಿಕ ಚಿಕಿತ್ಸಾ ವಿಧಾನ ಕಲಿತಿದ್ದೇನೆ. ಕಾಯಿಲೆ ಗಂಭೀರವಾಗಿದ್ದರೆ ಪಶುವೈದ್ಯರನ್ನು ಕರೆಸಲಾಗುವುದು. ಕಳೆದೆರಡು ವರ್ಷಗಳಿಂದ ಹಸುಗಳಿಗೆ ರೋಗಗಳ ಬಾಧೆ ಕಾಡಿಲ್ಲ. ಸಣ್ಣ ಅನಾರೋಗ್ಯಕ್ಕೆ ಸ್ವಚಿಕಿತ್ಸಾ ವಿಧಾನ ಅನುಸರಿಸುತ್ತಿದ್ದೇನೆ ಎಂದು ಉಮೇಶ್ ತಿಳಿಸಿದರು.**

ನಾಲ್ಕು ಹಸುಗಳನ್ನು ಕಟ್ಟಿದರೆ ಪ್ರತಿ ತಿಂಗಳು ★ 25,000 ಆದಾಯ ಗಳಿಸಬಹುದು ಎಂದು ಸಲಹೆ ನೀಡುತ್ತಾರೆ ಅವರು.

ಯುವಕರು ಸ್ವಉದ್ಯೋಗದತ್ತ ಒಲವು ತೋರಿಸಬೇಕು, ಯಾವ ಕೆಲಸವನ್ನೂ ಆಗುವುದಿಲ್ಲ ಎಂದು ಹಿಂದೆ ಸರಿಯಬಾರದು. ಎಲ್ಲವೂ ಸಾಧ್ಯ ಎಂಬ ದೃಢ ಮನಸ್ಸಿನಿಂದ ಮುನ್ನುಗಿದರೆ ಖಂಡಿತ ಯಶಸ್ಸು ದೊರೆಯುತ್ತದೆ.

# ಪ್ರಕರಣದಲ್ಲಿ ನನ್ನ ತಂದೆಯನ್ನು ಸಿಲುಕಿಸಲು ಇಡಿ ಯತ್ನಿಸುತ್ತಿದೆ

• ಉದಯವಾಹಿನಿ ಮೈಸೂರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನಿವೇಶನ ಹಂಚಿಕೆ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದ (ಇ.ಡಿ) ಮೂಲಕ ತನ್ನ ತಂದೆಯನ್ನು ಪ್ರಕರಣದಲ್ಲಿ ಸಿಲುಕಿಸಲು ಯತ್ನಿಸಲಾತ್ತಿದೆ ಎಂದು ಸಿಎಂ ಸಿದ್ದರಾಮಯ್ಯ ಅವರ ಪುತ್ರ ಯತೀಂದ್ರ ಸಿದ್ದರಾಮಯ್ಯ ಶುಕ್ರವಾರ ಹೇಳಿದ್ದಾರೆ.ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯ ಆರೋಪಿ ಎಂದು ಸಾಮಾನ್ಯ ಅಭಿಪ್ರಾಯ ಮೂಡಿಸಲು ಇ.ಡಿ ಬಯಸಿದೆ. ಇ.ಡಿ ಉದ್ದೇಶಪೂರ್ವಕವಾಗಿಯೇ ಸಿದ್ದರಾಮಯ್ಯ ಅವರ ಹೆಸರನ್ನು ಅಧಿಕೃತ ಸಂವಹನದಲ್ಲಿ ಉಲ್ಲೇಖಿಸಿದೆ. ನಮ್ಮ ಪಾಲಿಗೆ ಬಂದಿರುವ 14 ಸೈಟ್ ಗಳಲ್ಲಿ ಅಕ್ರಮ ಏನೂ ಇಲ್ಲ ಎಂಬುದು ಅವರಿಗೂ ಚೆನ್ನಾಗಿ ತಿಳಿದಿದೆ. ಕಾನೂನುಬದ್ಧವಾಗಿ ನಿವೇಶನ ಹಂಚಿಕೆ ಮಾಡಿರುವುದು ಅವರಿಗೂ ಗೊತ್ತಿದೆ. ಆದರೆ, ಅವರ ಮೇಲೆ ಕೇಂದ್ರ ಸರ್ಕಾರ ನಿರಂತರ ಒತ್ತಡ ಹೇರುತ್ತಿದೆ ಎಂದರು. 'ಕರ್ನಾಟಕ ಬಿಜೆಪಿ ಘಟಕ ಮತ್ತು ಇತರ ವಿರೋಧ ಪಕ್ಷಗಳು ಸಿಎಂ ಸಿದ್ದರಾಮಯ್ಯ ಅವರನ್ನು ಹೇಗಾದರೂ ಸರಿ ಈ ಪ್ರಕರಣದಲ್ಲಿ ಆರೋಪಿಯನ್ನಾಗಿ ಮಾಡಬೇಕೆಂದು ಒತ್ತಡ ಹೇರುತ್ತಿವೆ. ಇ.ಡಿ ಆ ಸೂಚನೆಗಳನ್ನು ಅನುಸರಿಸುತ್ತಿದೆ. ಕರ್ನಾಟಕ ಮಾತ್ರವಲ್ಲದೆ ಇತರ ರಾಜ್ಯಗಳಲ್ಲಿಯೂ ಕೇಂದ್ರದ ಯಾವುದೇ ತನಿಖಾ ಸಂಸ್ಥೆ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬುದು ಬಹಿರಂಗ ರಹಸ್ಯವಾಗಿದೆ. ಇ.ಡಿ ಬಿಜೆಪಿಯ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ. ಅಂತಿಮವಾಗಿ, ಸತ್ಯ ಮತ್ತು ನ್ಯಾಯಕ್ಕೆ ಜಯ ಲಭಿಸುತ್ತದೆ. ಸಿಎಂ



ಉದಯವಾಹಿನಿ ಚಿತ್ರ

ಸಿದ್ದರಾಮಯ್ಯ ಅವರು ಯಾವುದೇ ತಪ್ಪು ಮಾಡಿಲ್ಲ ಕ್ಲೀನ್ ಇಮೇಜ್‌ನೊಂದಿಗೆ ಪ್ರಕರಣದಿಂದ ಹೊರಬರುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. 'ಸಿಎಂ ಸಿದ್ದರಾಮಯ್ಯ ವಿರುದ್ಧ ಅವರಿಗೆ (ಇ.ಡಿ) ಯಾವ ಸಾಕ್ಷ್ಯ ಸಿಕ್ಕಿದೆ? ಅವರು ಅದನ್ನು ತೋರಿಸಲಿ ಅವರು ಇತರರ ವಶಪಡಿಸಿಕೊಂಡ ಆಸ್ತಿಯನ್ನು ತೋರಿಸುತ್ತಿದ್ದಾರೆ. ಸಿಎಂ ಸಿದ್ದರಾಮಯ್ಯ ಅಥವಾ ನಮ್ಮ ಕುಟುಂಬದ ಸದಸ್ಯರ ಹೆಸರಿನಲ್ಲಿರುವ ಯಾವುದೇ ಆಸ್ತಿಯನ್ನು ಇಡಿ ಮುಟ್ಟುಗೋಲು ಹಾಕಿಕೊಂಡಿಲ್ಲ. ಇ.ಡಿ ಅಧಿಕೃತ ಹೇಳಿಕೆಗಳಲ್ಲಿ ಸಿದ್ದರಾಮಯ್ಯ ಅವರನ್ನು ಆರೋಪಿಯನ್ನಾಗಿ ಮಾಡುವ ಇಚ್ಛಾಶಕ್ತಿಯಿಂದ ಅವರ ಹೆಸರನ್ನು ಉಲ್ಲೇಖಿಸಲಾಗಿದ್ದು, ಅದರಲ್ಲಿ ಯಾವುದೇ ಸತ್ಯಾಂಶವಿಲ್ಲ' ಎಂದು ಆರೋಪಿಸಿದರು.ನಮ್ಮ ನಿವೇಶನಗಳ ವಿಷಯ ವಿಭಿನ್ನವಾಗಿದೆ. ನಮ್ಮ ಭೂಮಿಯನ್ನು ಮುಡಾ ಅಕ್ರಮವಾಗಿ ಸ್ವಾಧೀನಪಡಿಸಿಕೊಂಡಿದ್ದು, ಅದರ ಬದಲಿಗೆ 14 ನಿವೇಶನಗಳನ್ನು ನಮಗೆ ಮಂಜೂರು ಮಾಡಿದೆ. ಆದರೆ, ಮುಡಾದಲ್ಲಿ ನಡೆದಿರುವ ಹಗರಣವೇ ಬೇರೆ ಮುಡಾದ ಕೆಲವು ಸದಸ್ಯರು ಮತ್ತು ಇತರರು ರೈತರಿಂದ ಖರೀದಿಸಿದ ಜಮೀನಿನ ಮಾಲೀಕರಿಗೆ 50:50 ಅನುಪಾತದ ನಿವೇಶನಗಳನ್ನು ಪರಿಹಾರವಾಗಿ ನೀಡುವ ಮೂಲಕ ಹಗರಣ ಮಾಡಿದ್ದಾರೆ. ಅದು ಕಾನೂನಿಗೆ ವಿರುದ್ಧವಾಗಿದ್ದು, ಅದನ್ನು ಎದುರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ನಮ್ಮ ಕುಟುಂಬಕ್ಕೆ ಮಂಜೂರಾದ 14 ನಿವೇಶನಗಳಿಗೂ ಇದಕ್ಕೂ ಯಾವುದೇ ಸಂಬಂಧವಿಲ್ಲ' ಎಂದು ಸ್ಪಷ್ಟಪಡಿಸಿದರು.ನಂಬಿಕೆ ಇರುವವರು ಕುಂಭಮೇಳದಲ್ಲಿ ಪಾಲ್ಗೊಳ್ಳಲಿ

ಮಹಾ ಕುಂಭಮೇಳದ ಬಗ್ಗೆ ಟೀಕೆಗಳ ಕುರಿತು ಪ್ರತಿಕ್ರಿಯಿಸಿದ ಯತೀಂದ್ರ, 'ಯಾವುದು ಸರಿ ಮತ್ತು ಯಾವುದು ತಪ್ಪು ಎಂದು ನಿರ್ಧರಿಸುವವರು ಯಾರು? ನಂಬಿಕೆ ಇರುವವರು ಕುಂಭಮೇಳದಲ್ಲಿ ಪಾಲ್ಗೊಳ್ಳುತ್ತಾರೆ ಮತ್ತು ಸ್ನಾನ ಮಾಡುತ್ತಾರೆ.

# ಇಎಂಆರ್‌ಸಿ: ಹಂಗಾಮಿಗಳಿಗೇ ಕಾರ್ಯಭಾರ!

• ಉದಯವಾಹಿನಿ ಮೈಸೂರು

ಇಲ್ಲಿನ ಮೈಸೂರು ವಿಶ್ವವಿದ್ಯಾಲಯದ ಮಾನಸ ಗಂಗೋತ್ರಿಯಲ್ಲಿರುವ ಶೈಕ್ಷಣಿಕ ಬಹು ಮಾಧ್ಯಮ ಸಂಶೋಧನಾ ಕೇಂದ್ರಕ್ಕೆ (ಇಎಂಆರ್‌ಸಿ) 13 ವರ್ಷದಿಂದಲೂ ಪೂರ್ಣಾವಧಿಯ ನಿರ್ದೇಶಕರಾಗಿ ಯಾರನ್ನೂ ನೇಮಿಸಿಲ್ಲ. ಇತರ ಅಧ್ಯಯನ ವಿಭಾಗದ ಪ್ರಾಧ್ಯಾಪಕರನ್ನೇ ಹಂಗಾಮಿ ನಿರ್ದೇಶಕರಾಗಿ ಮೈಸೂರು ವಿಶ್ವವಿದ್ಯಾಲಯ ನಿಯೋಜಿಸುತ್ತಿದೆ. ಅವರ ಮೇಲೆ ಹೆಚ್ಚುವರಿ ಕಾರ್ಯಭಾರ ಬೀಳುತ್ತಿದೆ.

ವಿಶ್ವವಿದ್ಯಾಲಯದ ಧನಸಹಾಯ ಆಯೋಗವು (ಯುಜಿಸಿ) ದೃಶ್ಯ ಮಾಧ್ಯಮದ ಮೂಲಕ ಉನ್ನತ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಕೇಂದ್ರವನ್ನು 1995ರಲ್ಲಿ ಸ್ಥಾಪಿಸಿತ್ತು. ಆಗ ಧ್ವನಿ ಮತ್ತು ದೃಶ್ಯ ಸಂಶೋಧನಾ ಕೇಂದ್ರ (ಎವಿಆರ್‌ಸಿ) ಎಂದು ಕರೆಯಲಾಗುತ್ತಿತ್ತು. 2004ರಲ್ಲಿ ಇಎಂಆರ್‌ಸಿ ಮರು ನಾಮಕರಣ ಮಾಡಲಾಗಿದೆ. ಇ–ಪರಿಕರ ಹಾಗೂ ಆನ್‌ಲೈನ್ ಕಲಿಕಾ ಸಂಪನ್ಮೂಲವನ್ನು ಕೇಂದ್ರವು ಸೃಷ್ಟಿಸುತ್ತಿದೆ. ಬಹುದೊಡ್ಡ ಜವಾಬ್ದಾರಿ ಇರುವ ಕೇಂದ್ರದ ಹುದ್ದೆಗೆ ಮೈಸೂರು ವಿಶ್ವವಿದ್ಯಾಲಯವು ಈ ಹಿಂದೆ ವಾಣಿಜ್ಯ



ಉದಯವಾಹಿನಿ ಚಿತ್ರ

ವಿಭಾಗದ ಪ್ರೊ.ರಾಜಶೇಖರ್, ಮಾನವ ವಿಜ್ಞಾನದ ಪ್ರೊ.ಎಂ.ಆರ್.ಗಂಗಾಧರ್, ಕನ್ನಡ ವಿಭಾಗದ ಪ್ರೊ.ಸುಚೇತನ ಸ್ವರೂಪ್ ಅವರನ್ನು ಪ್ರಭಾರ ನಿರ್ದೇಶಕರಾಗಿ ನಿಯೋಜಿಸಿತ್ತು.ನವದೆಹಲಿಯ ಶೈಕ್ಷಣಿಕ ಸಂವಹನ ಒಕ್ಕೂಟದ (ಸಿಇಸಿ) ನಿರ್ದೇಶಕ ಜಗತ್‌ಭೂಷಣ್ ನಡ್ಡಾ ಅವರು ಜುಲೈ 2, 2019ರಲ್ಲೇ ಶೈಕ್ಷಣಿಕ ಕಾರ್ಯಗಳು ಸುಗಮವಾಗಿ ನಡೆಯಲು ಪೂರ್ಣಾವಧಿಯ ನಿರ್ದೇಶಕರನ್ನು ನಿಯೋಜಿಸುವಂತೆ ವಿಶ್ವವಿದ್ಯಾಲಯಕ್ಕೆ ಪತ್ರ ಬರೆದಿದ್ದರು. ನೇಮಕ ಪ್ರಕ್ರಿಯೆ ಮುಗಿಯುವವರೆಗೂ ಪ್ರಭಾರ ನಿರ್ದೇಶಕರ ಹುದ್ದೆಗೆ ಮಾಧ್ಯಮ ತಜ್ಞ ಪ್ರಾಧ್ಯಾಪಕರನ್ನು ಒಂದು ವರ್ಷದ ಅವಧಿಗೆ ನಿಯೋಜಿಸಬೇಕು ಎಂದಿದ್ದರು.

ವಿಷಯ ತಜ್ಞ ಪ್ರಾಧ್ಯಾಪಕರು ಇಲ್ಲದಿದ್ದರೆ, ಮಾಧ್ಯಮ ಕೇಂದ್ರದ ಹಿರಿಯ ಸಿಬ್ಬಂದಿ (ಪ್ರೊಡ್ಯೂಸರ್) ಅನ್ನು ವರ್ಷದ ಅವಧಿಗೆ ಮಾತ್ರ ಪ್ರಭಾರ ನಿರ್ದೇಶಕರನ್ನು ನಿಯೋಜಿಸಬಹುದೆಂದೂ ಸಿಇಸಿ ತಿಳಿಸಿತ್ತು.

ಆದರೆ, ಬೇರೆ ವಿಭಾಗದ ಪ್ರಾಧ್ಯಾಪಕರನ್ನೇ ಹಂಗಾಮಿ ನಿರ್ದೇಶಕರಾಗಿ ಆಯ್ಕೆ ಮಾಡಲಾಗುತ್ತಿದೆ.

**'5 ವರ್ಷ ಅವಧಿಯ ಪೂರ್ಣಾವಧಿ ನಿರ್ದೇಶಕರ ನೇಮಕಾತಿ ಪ್ರಕ್ರಿಯೆಗೆ ವಿಶ್ವವಿದ್ಯಾಲಯವು ಅಧಿಸೂಚನೆ ಹೊರಡಿಸುತ್ತಿಲ್ಲ. ಕೇಂದ್ರದ ಪ್ರೊಡ್ಯೂಸರ್‌ಗಳ ಸೇವಾ ಜೇಷ್ಠತೆ ಪರಿಗಣಿಸುತ್ತಿಲ್ಲ. ಅವರ ಕಾರ್ಯಾನುಭವಕ್ಕೆ ಕವಡೆ ಕಾಸಿನ ಕಿಮ್ಮತ್ತನ್ನೂ ನೀಡುತ್ತಿಲ್ಲ 18 ಸಿಬ್ಬಂದಿ ಇದ್ದು, ದಶಕಗಳ ಹಿಂದೆ ಸೈಯದ್ ಖಲೀಂ ಅವರನ್ನು ಮಾತ್ರ ನಿಯೋಜಿಸಿತ್ತಷ್ಟೇ' ಎಂದು ಹೆಸರು ಪ್ರಕಟವಾಗಲು ಬಯಸದ ಕೇಂದ್ರದ ಸಿಬ್ಬಂದಿಯೊಬ್ಬರು ದೂರಿದರು.**

# 30 ಕೋಟಿ ಪಡೆದು ಕುಟುಂಬ ಸಮೇತ ಪರಾರಿ!

• ಉದಯವಾಹಿನಿ ತುಮಕೂರು

ತುಮಕೂರಿನಲ್ಲಿ ಬೆಚ್ಚಿ ಬೆಳೆಸುವ ಘಟನೆ ನಡೆದಿದ್ದು, ಜುವೆಲ್ಲರೀ ಶಾಪ್ ಮಾಲೀಕನೊಬ್ಬ ಸುಮಾರು 100ಕ್ಕೂ ಹೆಚ್ಚು ಜನರ ಬಳಿ ಹಣ ಪಡೆದು 30 ಕೋಟಿಯೊಂದಿಗೆ ಕುಟುಂಬ ಸಮೇತ ಪರಾರಿಯಾಗಿರುವ ಘಟನೆ ಇದೀಗ ಬೆಳಕಿಗೆ ಬಂದಿದೆ.ಹೌದು ತುಮಕೂರಿನ ಜುವೆಲ್ಲರೀ ಶಾಪ್ ಮಾಲೀಕನ ಈ ಒಂದು ಮಹಾ ಮೋಸ ಬೆಳಕಿಗೆ ಬಂದಿದೆ.

30 ಕೋಟಿ ಹಣ ಪಡೆದು ಕುಟುಂಬ ಸಮೇತ ಇದೀಗ ಜುವೆಲ್ಲರಿ ಮಾಲೀಕ ಪರಾರಿಯಾಗಿದ್ದಾನೆ. ಸುಮಾರು 100ಕ್ಕೂ ಹೆಚ್ಚು ಮಂದಿಗೆ ಶಿವಾನಂದ ಮೂರ್ತಿ ಎನ್ನುವ ವ್ಯಕ್ತಿ ವಂಚಿಸಿದ್ದಾನೆ. ವಂಚನೆ ಎಸಗಿದವನನ್ನು ಆಕಾಶ ಜುವೆನರಿ ಶಾಪ್ ಮಾಲೀಕ ಶಿವಾನಂದಮೂರ್ತಿ ಎಂದು ತಿಳಿದುಬಂದಿದೆ.ತುಮಕೂರಿನ ಸರ್ಕಾರಿ ಬಸ್ ನಿಲ್ದಾಣದ ಎದುರುಗಡೆ ಜಿಎಂಎಸ್ ಕಾಂಪ್ಲೇಕ್ಸ್ ನಲ್ಲಿ ಜುವೆಲ್ಲರಿ ಶಾಪ್ ಹೊಂದಿದ್ದ ಶಿವಾನಂದಮೂರ್ತಿ, ಚೀಟಿ ವ್ಯವಹಾರವನ್ನು ಕೂಡ ನಡೆಸುತ್ತಿದ್ದ ಎಂದು ತಿಳಿದುಬಂದಿದೆ. ಆಕಾಶ ಸಹಾಕಾರಿ ಕೋ ಆಪರೇಟಿವ್ ಸೊಸೈಟಿ ಆರಂಭ ಮಾಡಿದ್ದ.

ನೂರಾರು ಜನರ ಶೇರ್ ಹಣ ಸಂಗ್ರಹಿಸಿದ ಶಿವಾನಂದ ಮೂರ್ತಿ ಸೊಸೈಟಿ ಹಣ ಹೊಡೆದುಕೊಂಡು ಇದೀಗ ಪರಾರಿಯಾಗಿದ್ದಾನೆ. ಸದ್ಯ ಶಿವಾನಂದ ಮೂರ್ತಿ ವಿರುದ್ಧ ಆಡಳಿತ ಮಂಡಳಿ ದೂರು ನೀಡಿದ್ದು, ಶಿವನಂದ ಮೂರ್ತಿ ವಿರುದ್ಧ ಈಖಖ ದಾಖಲಾಗಿದೆ. ಯಾರು ಹಣ ನೀಡದಂತೆ ಸೊಸೈಟಿ ನಿರ್ದೇಶಕ ಮನವಿ ಮಾಡಿದ್ದಾರೆ.



ಉದಯವಾಹಿನಿ ಚಿತ್ರ

**ನೂರಾರು ಜನರ ಶೇರ್ ಹಣ ಸಂಗ್ರಹ**

# ಮಕ್ಕಳ ವಾಹನ ಚಾಲನೆಗೆ ಪೊಲೀಸರ ಬ್ರೇಕ್!

## ಪೊಲೀಸ್ ಠಾಣೆಗಳ ವ್ಯಾಪ್ತಿಯ ಶಾಲಾ ಕಾಲೇಜುಗಳು, ಪ್ರಮುಖ ರಸ್ತೆಗಳಲ್ಲಿ ವಾಹನಗಳ ತಪಾಸಣೆ

• ಉದಯವಾಹಿನಿ ಚಾಮರಾಜನಗರ

ಅಪ್ರಾಪ್ತರು ವಾಹನ ಚಾಲನೆ ಮಾಡುತ್ತಿರುವ ಬಗ್ಗೆ ವ್ಯಾಪಕ ದೂರುಗಳು ಕೇಳಿಬಂದಿರುವ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಪೊಲೀಸ್ ಇಲಾಖೆ ವಿಶೇಷ ಕಾರ್ಯಾಚರಣೆ ಆರಂಭಿಸಿದೆ. ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆಗಳ ವ್ಯಾಪ್ತಿಯ ಶಾಲಾ ಕಾಲೇಜುಗಳು ಹಾಗೂ ಪ್ರಮುಖ ರಸ್ತೆಗಳಲ್ಲಿ ವಾಹನಗಳ ತಪಾಸಣೆಗೆ ಇಳಿದಿರುವ ಪೊಲೀಸರು ಸಂಚಾರ ನಿಯಮ ಉಲ್ಲಂಘಿಸಿ ವಾಹನ ಚಲಾಯಿಸುತ್ತಿದ್ದ ಅಪ್ರಾಪ್ತರನ್ನು ಪತ್ತೆ ಹಚ್ಚುತ್ತಿದ್ದಾರೆ.

ಜನವರಿಯಲ್ಲಿ ನಡೆದ ವಿಶೇಷ ಕಾರ್ಯಾಚರಣೆ ವೇಳೆ ಚಾಮರಾಜನಗರ ಪಟ್ಟಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 14, ಗ್ರಾಮಾಂತರ ಠಾಣೆಯಲ್ಲಿ 6, ಪೂರ್ವ ಠಾಣೆಯಲ್ಲಿ 5, ಸಂಚಾರ ಠಾಣೆ ಹಾಗು ಕುದೇರು ಠಾಣೆಯಲ್ಲಿ 2, ಸಂತೇಮರಹಳ್ಳಿ ಠಾಣೆಯಲ್ಲಿ 5, ಗುಂಡ್ಲುಪೇಟೆಯಲ್ಲಿ 6, ಬೇಗೂರಿನಲ್ಲಿ 9, ತೆರಕಣಾಂಬಿ ವ್ಯಾಪ್ತಿಯಲ್ಲಿ 3, ಯಳಂದೂರು, ಮಾಂಬಳ್ಳಿ, ಕೊಳ್ಳೇಗಾಲ ನಗರ ಠಾಣಾ ವ್ಯಾಪ್ತಿಯಲ್ಲಿ ತಲಾ 2, ಕೊಳ್ಳೇಗಾಲ ಗ್ರಾಮಾಂತರ ಭಾಗದಲ್ಲಿ 9, ಹನೂರಿನಲ್ಲಿ 7. ರಾಮಾಪುರ 2, ಮಲೆ ಮಹದೇಶ್ವರ ಬೆಟ್ಟ ಠಾಣಾ ವ್ಯಾಪ್ತಿಯಲ್ಲಿ ನಾಲ್ವರು ಅಪ್ರಾಪ್ತರು ವಾಹನ ಚಲಾಯಿಸಿರುವುದು ಕಂಡುಬಂದಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಸಂಚಾರ ನಿಯಮ ಉಲ್ಲಂಘಿಸಿದ ಮಕ್ಕಳ



ಉದಯವಾಹಿನಿ ಚಿತ್ರ

ಬಳಿ ಪೋಷಕರ ಮಾಹಿತಿ ಪಡೆದು ಅವರನ್ನು ಸ್ಥಳಕ್ಕೆ ಕರೆಸಿಕೊಂಡು ಸಂಚಾರ ನಿಯಮಗಳ ಕುರಿತು ಅರಿವು ಮೂಡಿಸಲಾಗುತ್ತಿದೆ. ಮಕ್ಕಳಿಗೆ ವಾಹನಗಳನ್ನು ಓಡಿಸಲು ಅವಕಾಶ ನೀಡಿದರೆ ಕಾನೂನಿನಡಿ ರೂ. 25,000ದವರೆಗೂ ದಂಡ ವಿಧಿಸುವ ಹಾಗೂ ಜೈಲು ಶಿಕ್ಷೆಗೆ ಗುರಿಯಾಗಬೇಕಾಗುವ ಬಗ್ಗೆ ತಿಳಿಸಿ ಎಚ್ಚರಿಕೆ ನೀಡಲಾಗುತ್ತಿದೆ ಎಂದು ಎಸ್‌ಪಿ ಬಿ.ಟಿ.ಕವಿತಾ ತಿಳಿಸಿದರು. ಮೊದಲಸಲ ಸಿಕ್ಕಿಬಿದ್ದವರಿಗೆ ಮಾನವೀಯ ನೆಲೆಯಲ್ಲಿ ದಂಡ ವಿಧಿಸದೆ ಪ್ರಕರಣ ದಾಖಲಿಸದೆ ಎಚ್ಚರಿಕೆ ನೀಡಲಾಗುತ್ತಿದೆ. ಮತ್ತೆ ನಿಯಮ ಉಲ್ಲಂಘಿಸಿ ಸಿಕ್ಕಿಬಿದ್ದರೆ ದಂಡ ವಿಧಿಸುವುದರ ಜೊತೆಗೆ ಪ್ರಕರಣ ದಾಖಲಿಸಲಾಗುವುದು ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಪೋಷಕರು ವಾಹನಗಳನ್ನು ಓಡಿಸಲು ಕೊಡಬಾರದು, ಅಪ್ರಾಪ್ತರು ವಾಹನಗಳನ್ನು ಓಡಿಸುವಷ್ಟು ದೈಹಿಕವಾಗಿ ಹಾಗೂ ಮಾನಸಿಕವಾಗಿ ಸಮರ್ಥರಾಗಿರುವುದಿಲ್ಲ, ಸಾರ್ವಜನಿಕರ ಜೀವಕ್ಕೂ ಹಾನಿಯಾಗುವ ಸಂಭವ ಇರುವುದರಿಂದ ಜವಾಬ್ದಾರಿಯಿಂದ ವರ್ತಿಸಬೇಕು. 18 ವರ್ಷ ತುಂಬಿದ ನಂತರ ಸಾರಿಗೆ ಇಲಾಖೆಯಿಂದ ಚಾಲನಾ ಪರವಾನಗಿ ಪಡೆದು. ವಾಹನ ಓಡಿಸಲು ಅನುಮತಿ ನೀಡಬೇಕು ಎಂದು ಎಂದು ಎಸ್‌ಪಿ ಪೋಷಕರಿಗೆ ಕಿವಿಮಾತು ಹೇಳಿದರು.

**ಶಾಲಾ ಕಾಲೇಜುಗಳಿಗೆ ಬೈಕ್**

**ನಗರ, ಪಟ್ಟಣ ಪ್ರದೇಶಗಳಲ್ಲಿರುವ ಶಾಲಾ-ಕಾಲೇಜುಗಳಿಗೆ ಮಕ್ಕಳು ದ್ವಿಚಕ್ರ ವಾಹನಗಳಲ್ಲಿ ಬರುತ್ತಿರುವುದು ಹೆಚ್ಚಾಗಿದೆ. ಈ ಬಗ್ಗೆ ಶಾಲಾ ಕಾಲೇಜುಗಳ ಆಡಳಿತ ಮಂಡಳಿ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು. ಅಪ್ರಾಪ್ತರು ವಾಹನಗಳನ್ನು ತರುವುದಕ್ಕೆ ಕಡಿವಾಣ ಹಾಕಬೇಕು. ಪೋಷಕರಿಗೂ ವಾಹನಗಳನ್ನು ನೀಡದಂತೆ ತಾಕೀತು ಮಾಡಬೇಕು ಎನ್ನುತ್ತಾರೆ ರಾಮಸಮುದ್ರ ನಿವಾಸಿ ಪ್ರಶಾಂತ್. ಬಿ.ರಾಚಯ್ಯ ಜೋಡಿ ರಸ್ತೆ, ಸಂತೇಮರಹಳ್ಳಿ ವೃತ್ತ ಸೇಂಟ್ ಫ್ರಾನ್ಸಿಸ್ ಶಾಲೆ, ಚೆನ್ನಾಪುರದ ಮೋಳೆ ರಸ್ತೆಗಳಲ್ಲಿ ಪ್ರತಿನಿತ್ಯ ಅಪ್ರಾಪ್ತರು ಬೈಕ್‌ನಲ್ಲಿ ಸವಾರಿ ಮಾಡುವುದು ಹೆಚ್ಚಾಗಿದೆ.**

**ಒಂದು ಬೈಕ್‌ನಲ್ಲಿ ಮೂವರು ಕುಳಿತು ಅಪಾಯಕಾರಿಯಾಗಿ ವಾಹನ ಓಡಿಸುವುದನ್ನು ನೋಡಿದರೆ ಆತಂಕವಾಗುತ್ತದೆ. ಪೊಲೀಸರು ವಾಹನ ಮಾಲೀಕರಿಗೆ ದಂಡ ವಿಧಿಸಿ ಪ್ರಕರಣ ದಾಖಲಿಸಿದರೆ ಅಪ್ರಾಪ್ತರು ವಾಹನ ಚಾಲನೆ ಮಾಡುವ ಪ್ರಕರಣಗಳು ಕಡಿಮೆಯಾಗುತ್ತವೆ ಎನ್ನುತ್ತಾರೆ ಪ್ರಶಾಂತ್.**

**ಮಕ್ಕಳಿಗೆ ವಾಹನ ಕೊಡುವ ಮುನ್ನ ಇರಲಿ ಎಚ್ಚರ ಮಕ್ಕಳು ಸಿಕ್ಕಿಬಿದ್ದರೆ ಪೋಷಕರಿಗೆ ರೂ.25,000 ದಂಡ ಸಾರ್ವಜನಿಕರ ಜೀವಹಾನಿಯಾದರೆ ಜೈಲು ಶಿಕ್ಷೆಬಿ.ಟಿ.ಕವಿತಾ ಎಸ್‌ಪಿರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ಜಿಲ್ಲೆಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ ಅಪ್ರಾಪ್ತ ಮಕ್ಕಳ ವಾಹನ ಚಾಲನೆಗೆ ಕಡಿವಾಣ ಹಾಕಲಾಗುತ್ತಿದೆ. ಮಕ್ಕಳ ಸುರಕ್ಷತೆ ಹಾಗೂ ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಪೋಷಕರು ಮಕ್ಕಳಿಗೆ ವಾಹನ ಓಡಿಸಲು ಅವಕಾಶ ನೀಡಬಾರದು**

# ಮಿನಿ ನ್ಯೂಸ್

## ಬಸ್ ಡಿಪೋದಲ್ಲಿ ಆಕಸ್ಮಿಕ ಅಗ್ನಿಘಡ

• ಉದಯವಾಹಿನಿ ತುಮಕೂರು

ಬಸ್ ಡಿಪೋದಲ್ಲಿ ನಿಲ್ಲಿಸಿದ್ದ ಬಸ್ ನಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡು ಒಂದು ಕೆಎಸ್ ಆರ್ ಟಿಸಿ ಬಸ್ ಬೆಂಕಿಗಾಹುತಿಯಾಗಿರುವ ಘಟನೆ ತುಮಕೂರು ಜಿಲ್ಲೆಯ ಮಧುಗಿರಿಯಲ್ಲಿ ನಡೆದಿದೆ. ಮಧುಗಿರಿ ಕೆಎಸ್ ಆರ್ ಟಿಸಿ ಬಸ್ ಡಿಪೋದಲ್ಲಿ ತಾಂತ್ರಿಕ ದೋಷದಿಂದ ಬೆಂಕಿ ಹೊತ್ತಿಕೊಂಡಿದೆ ಎನ್ನಲಾಗಿದ್ದು, ಬೆಂಕಿಯಿಂದ್ ಬಸ್‌ನ ಮುಂಭಾಗ ಸಂಪೂರ್ಣ ಸುಟ್ಟು ಹೋಗಿದೆ. ಬಸ್ ನಲ್ಲಿ ಬೆಂಕಿ ಕಾಣಿಸಿಕೊಂಡ ತಕ್ಷಣ ಡಿಪೋ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

## ನನ್ನ ಟಾರ್ಗೆಟ್ ಮಾಡಿ ಇಡಿ ತನಿಖೆ ಮಾಡುತ್ತಿದೆ: ಸಿಎಂ ಆಕ್ರೋಶ

• ಉದಯವಾಹಿನಿ ಮೈಸೂರು

ನನ್ನ ಇಮೇಜ್‌ಗೆ ಡ್ಯಾಮೇಜ್ ಮಾಡುವ ಕೆಲಸ ನಡೆಯುತ್ತಿದೆ. ನನ್ನ ಟಾರ್ಗೆಟ್ ಮಾಡಿ ಇಡಿ ತನಿಖೆ ನಡೆಸುತ್ತಿದೆ ಎಂದು ಸಿಎಂ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಕ್ರಮ ಹಣ ವರ್ಗಾವಣೆ ಆಗಿರೋದಕ್ಕೆ ಸಾಕ್ಷಿ ಏನಿದೆ. ಉದ್ದೇಶ ಪೂರ್ವಕವಾಗಿ ನನ್ನನ್ನು ಟಾರ್ಗೆಟ್ ಮಾಡಲಾಗುತ್ತಿದೆ. ತನಿಖೆ ಮಾಡುತ್ತಿರುವ ಲೋಕಾಯುಕ್ತ ಸ್ವತಂತ್ರ ತನಿಖೆ ಅಲ್ಲವೇ ಬೇಕು ಅಂತಾನೆ ರಾಜಕೀಯ ಮಾಡಲಾಗುತ್ತಿದೆ. ಇಡಿ ರಿಲೀಸ್ ಮಾಡಿರುವುದು ಸೀಜ್ ರಿಪೋರ್ಟ್ ಅಷ್ಟೇ ಎಂದರು. ಮುಡಾ ಹಗರಣದಲ್ಲಿ ನನ್ನನ್ನು ಟಾರ್ಗೆಟ್ ಮಾಡಿ ರಾಜಕೀಯ ಮಾಡಲಾಗುತ್ತಿದೆ. ನನ್ನ ಇಮೇಜ್ ಗೆ ಧಕ್ಕೆ ತರುವ ಪ್ರಯತ್ನ ಉದ್ದೇಶ ಪೂರ್ವಕವಾಗಿಯೇ ಮಾಡಲಾಗುತ್ತಿದೆ ಎಂದು ಕಿಡಿಕಾರಿದ್ದಾರೆ.

## ರಾಜ್ಯದ ಬೇಡಿಕೆಗಳಿಗೆ ಕಿವುಡಾದ ಕೇಂದ್ರ ಸರ್ಕಾರ: ಸಿದ್ದರಾಮಯ್ಯ

• ಉದಯವಾಹಿನಿ ಮಡಿಕೇರಿ

ರಾಜ್ಯದ ಬೇಡಿಕೆಗಳಿಗೆ ಕೇಂದ್ರ ಸರ್ಕಾರ ಕಿವುಡಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹರಿಹಾಯ್ದರು. ಭಾಗಮಂಡಲದ ಕಾವೇರಿ ಪ್ರೌಢಶಾಲೆಯ ಆವರಣದಲ್ಲಿ ಹೆಲಿಕಾಪ್ಟರ್ ಮೂಲಕ ಶುಕ್ರವಾರ ಬಂದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.ನಮ್ಮ ರಾಜ್ಯಕ್ಕೆ ನ್ಯಾಯಯುತವಾಗಿ ಸಿಕ್ಕಬೇಕಾದ ತೆರಿಗೆ ಪಾಲನ್ನು ನೀಡದೆ ಕೇಂದ್ರ ವಂಚಿಸಿದೆ ಎಂದು ಆರೋಪಿಸಿದರು.ಹೀಗಾಗಿ, ನಾಳಿನ ಬಜೆಟ್ ಬಗ್ಗೆ ಹೆಚ್ಚಿನ ನಿರೀಕ್ಷೆಯನ್ನು ಇರಿಸಿಕೊಂಡಿಲ್ಲ ಎಂದರು.ಕಾವೇರಿ ನದಿ ಸ್ವಚ್ಛತೆ ಕುರಿತು ರಚಿಸಲಾದ ಸಮಿತಿ ಇನ್ನೂ ವರದಿ ನೀಡಿಲ್ಲ. ವರದಿ ಆಧರಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.ವನ್ಯಜೀವಿಗಳ ಸಂಖ್ಯೆ ಹೆಚ್ಚಾಗಿದೆ. ಆಹಾರ, ನೀರಿಗಾಗಿ ಅವು ಜನವಸತಿ ಪ್ರದೇಶಗಳತ್ತ ಬರುತ್ತಿವೆ ವನ್ಯಜೀವಿ ಮಾನವ ಸಂಘರ್ಷ ನಿವಾರಣೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

## ಮಧುಗಿರಿ ಬಳಿ ಕರಡಿಗಳ ದಾಳಿಯಲ್ಲಿ ಮಹಿಳೆಗೆ ಗಂಭೀರ ಗಾಯ

• ಉದಯವಾಹಿನಿ ಮಧುಗಿರಿ

ಗದ್ದೆಯಲ್ಲಿ ಮೇಕೆಗಳನ್ನು ಮೇಯಿಸುತ್ತಿದ್ದ ಮಹಿಳೆಯ ಮೇಲೆ ಹಗಲು ಹೊತ್ತಿನಲ್ಲಿ ಕರಡಿಯೊಂದು ದಾಳಿ ಮಾಡಿದೆ. ಪುರವರ ಹೋಬಳಿಯ ಭಾಗ್ಯಮ್ಮ ತಲೆಗೆ ತೀವ್ರ ಗಾಯಗಳಾಗಿದ್ದು, ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ.ಮಧ್ಯಾಹ್ನ ಹೊಲದಲ್ಲಿ ಮೇಕೆಗಳನ್ನು ಮೇಯಿಸುತ್ತಿದ್ದಾಗ ಎಲ್ಲಿಂದಲೋ ಮೂರು ಕರಡಿಗಳು ಕಾಣಿಸಿಕೊಂಡವು. ಅದರಲ್ಲಿ ಒಂದು ಕರಡಿ ಮೇಲೆ ದಾಳಿ ಮಾಡಿತು.ಅವರು ಕಿರುಚಿದಾಗ, ಅವರ ಪತಿ ನಾಗರಾಜು ಹಾಗೂ ಹತ್ತಿರದಲ್ಲಿದ್ದ ಇತರರು ಧಾವಿಸಿ ಬಂದು ಕಾಡು ಪ್ರಾಣಿಯನ್ನು ಓಡಿಸಿದರು.ದಾಳಿಯಲ್ಲಿ ಮಹಿಳೆಯ ತಲೆ ಬಹುತೇಕ ಗಾಯವಾಗಿದೆ ಮತ್ತು ಅವರ ಕೈಗಳು ಸಹ ತೀವ್ರವಾಗಿ ಗಾಯಗೊಂಡಿದ್ದವು. ರೇಂಜ್ ಫಾರೆಸ್ಟ್ ಆಫೀಸರ್ ಮುತ್ತುರಾಜು ಸ್ಥಳಕ್ಕೆ ಭೇಟಿ ನೀಡಿ ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ಯಲು ಆಂಬ್ಯುಲೆನ್ಸ್ ವ್ಯವಸ್ಥೆ ಮಾಡಿದ್ದಾರೆ. ಮಹಿಳೆಯ ಚಿಕಿತ್ಸೆಗೆ ಸಹಾಯ ಮಾಡಲಾಗುವುದು ಎಂದು ಅರಣ್ಯ ಅಧಿಕಾರಿ ಸುರೇಶ್ ತಿಳಿಸಿದ್ದಾರೆ. ಸ್ಥಳದಲ್ಲಿ ಬೋನ್ ಇರಿಸಿ ಕರಡಿಯನ್ನು ಸೆರೆಹಿಡಿಯಲು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಭರವಸೆ ನೀಡಿದ್ದಾರೆ.

## ಒಪಿಎಸ್ ಮರುಜಾರಿಗೆ ಒತ್ತಾಯ

• ಉದಯವಾಹಿನಿ ಗೌರಿಬಿದನೂರು

ಎನ್‌ಪಿಎಸ್ ರದ್ದು ಪಡಿಸಿ, ಒಪಿಎಸ್ ಮರುಜಾರಿಗೊಳಿಸಬೇಕು ಎಂದು ಒತ್ತಾಯಿಸಿ ನಗರದ ಕೋಟೆ ಶಾಲೆಯಲ್ಲಿ ಕರ್ನಾಟಕ ರಾಜ್ಯ ಎನ್‌ಪಿಎಸ್ ನೌಕರರ ಸಂಘದಿಂದ ಗುರುವಾರ ಪತ್ರ ಚಳವಳಿ ಹಮ್ಮಿಕೊಳ್ಳಲಾಗಿತ್ತು. ನಗರದ ಕೋಟೆ ಶಾಲೆಯಿಂದ, ಪೋಸ್ಟ್ ಆಫೀಸ್‌ವರೆಗೆ ಜಾಥಾ ನಡೆಸಿ ಮನವಿ ಪತ್ರಗಳನ್ನು ಪೋಸ್ಟ್ ಆಫೀಸ್ ಡಬ್ಬಿಯಲ್ಲಿ ಹಾಕುವ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎನ್.ಆರ್. ಮಂಜುನಾಥ್ ಮಾತನಾಡಿ, 2006ರ ನಂತರ ಆಯ್ಕೆಯಾದ ಸರ್ಕಾರಿ ನೌಕರರಿಗೆ ನಿವೃತ್ತಿ ನಂತರ ಅತೀ ಕಡಿಮೆ ಪಿಂಚಣಿ ದೊರೆಯುತ್ತಿದೆ. ಇದರಿಂದ ಜೀವನ ನಿರ್ವಹಣೆ ಕಷ್ಟವಾಗುತ್ತಿದೆ. ಆದ್ದರಿಂದ ಹಳೇ ಪಿಂಚಣಿ ವ್ಯವಸ್ಥೆ ಮರು ಜಾರಿ ಮಾಡಬೇಕು ಎಂದು ಪತ್ರಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗಿದೆ ಎಂದರು.

## ಕೊಲೆಯಾದ ವ್ಯಕ್ತಿಯ ಮುಖ ತಿಂದು ಹಾಕಿರುವ ಪ್ರಾಣಿಗಳು

• ಉದಯವಾಹಿನಿ ಚಿಕ್ಕಬಳ್ಳಾಪುರ

ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷನ ಮಗನನ್ನ ಕೊಲೆ ಮಾಡಿ ಚರಂಡಿಯಲ್ಲಿ ಮುಚ್ಚಿ ಹಾಕಿ ಕೊಲೆಗಾರ ಎಸ್ಕೇಪ್ ಆಗಿರುವ ಘಟನೆ ಚಿಕ್ಕಬಳ್ಳಾಪುರ ತಾಲ್ಲೂಕಿನ ಮರಸನಹಳ್ಳಿ ಕೆರೆ ಬಳಿ ಇರುವ ಬಡಾವಣೆಯಲ್ಲಿ ನಡೆದಿದೆ.ಹಾರೋಬಂಡೆ ಗ್ರಾಮದ ಮಾಜಿ ಗ್ರಾಮ ಪಂಚಾಯತಿ ಅಧ್ಯಕ್ಷ ನಾಗರೆಡ್ಡಿ ಮಗ 30 ವರ್ಷದ ಮಾರುತೇಶ್ ಕೊಲೆಯಾಗಿರುವ ದುರ್ದೈವಿ. ಅಂದಹಾಗೆ ಪಾಳುಬಿದ್ದ ಬಡಾವಣೆಯೊಂದರ ಚರಂಡಿಯಲ್ಲಿ ಮೃತದೇಹ ಪತ್ತೆಯಾಗಿದೆ. ಕೊಲೆಯಾದ ಮಾರುತೇಶ್ ಪ್ಲಂಬರ್ ಹಾಗೂ ಎಲೆಕ್ಟ್ರಿಕ್ ಕೆಲಸ ಮಾಡುತ್ತಿದ್ದ. ಕುಡಿದ ಅಮಲಿನಲ್ಲಿ ಜೊತೆಗಾರನಿಂದಲೇ ಕೊಲೆಯಾಗಿರುವ ಶಂಕೆ ವ್ಯಕ್ತವಾಗಿದೆ.

ಅಂತರಾಳದಿಂದ..
EDITORIAL

# ರಾಜ್ಯ ಬಿಜೆಪಿ ಭಿನ್ನಮತ
## ಎತ್ತು ಏರಿಗೆಳೆದರೆ ಕೋಣ ನೀರಿಗೆ

ಜೋಡಿಸುವುದಕ್ಕೆ ಯತ್ನಿಸಿದಷ್ಟು ಬಿಜೆಪಿಯ ಬಿರುಕು ದೊಡ್ಡದಾಗುತ್ತಿದೆ. ಪ್ರಜಾಸತ್ತಾತ್ಮಕ ದಾರಿಯಲ್ಲಿ ಎಲ್ಲರ ಅಭಿಪ್ರಾಯಗಳನ್ನು ಗೌರವಿಸುವ ಮೂಲಕ ಬಿಜೆಪಿಯೊಳಗಿನ ಆಕ್ರೋಶವನ್ನು ತಣಿಸಲು ವರಿಷ್ಠರು ಮುಂದಾಗಿದ್ದರೆ, ಚುನಾವಣೆಯು ಅಸಮಾಧಾನವನ್ನು ಇನ್ನಷ್ಟು ಹೆಚ್ಚಿಸಿದೆ. ಜಿಲ್ಲಾಧ್ಯಕ್ಷರ ಆಯ್ಕೆಯಲ್ಲಿ ವಿಜಯೇಂದ್ರ ಬಣದ ಕೈ ಮೇಲಾಗಿರುವುದು, ಬಿಜೆಪಿಯ ಯತ್ನಾಳ್ ಬಣವನ್ನು ಸಿಟ್ಟಿಗೆಬ್ಬಿಸಿದೆ. ಚಿಕ್ಕಬಳ್ಳಾಪುರ ಜಿಲ್ಲಾ ಬಿಜೆಪಿ ಅಧ್ಯಕ್ಷ ಸ್ಥಾನದ ಆಯ್ಕೆ ವಿಚಾರದಲ್ಲಿ ಸುಧಾಕರ್ ಅವರು ಸಿಡಿದಿದ್ದು, ನೇರವಾಗಿ ಯುದ್ಧವನ್ನು ಘೋಷಿಸಿದ್ದಾರೆ. ಇದೇ ಸಂದರ್ಭದಲ್ಲಿ ಎಲ್ಲಾ ನಿಂದನೀಯ ಟೀಕೆಗಳಿಗೆ ಸಭ್ಯ ಭಾಷೆಯಲ್ಲೇ ಉತ್ತರಿಸುತ್ತಾ ವಿಜಯೇಂದ್ರ ಮುತ್ಸದ್ದಿತನವನ್ನು ಪ್ರದರ್ಶಿಸುತ್ತಿದ್ದಾರೆ.

> ''ನನ್ನ ಸಮಾಧಾನದ ದಿನಗಳು ಮುಗಿದವು. ಇನ್ನು ಯುದ್ಧ ಕಾಲ'' ಎಂದು ಅವರು ಸವಾಲು ಹಾಕಿದ್ದಾರೆ. ''ಸ್ವತಃ ಚುನಾವಣೆಗೆ ನಿಂತು ಗೆಲ್ಲಲು ಅರ್ಹತೆಯಿಲ್ಲದ ವಿಜಯೇಂದ್ರ ಅವರು ಅಧ್ಯಕ್ಷ, ರಾಜ್ಯ ಕಾರ್ಯದರ್ಶಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಮತ್ತು ರಾಜ್ಯ ಉಪಾಧ್ಯಕ್ಷರಾಗಿ ತಮಗೆ ಬೇಕಾದವರನ್ನೇ ಆಯ್ಕೆ ಮಾಡಿಕೊಂಡಿದ್ದಾರೆ'' ಎಂಬ ಗಂಭೀರ ಆರೋಪವನ್ನು ಅವರು ಮಾಡಿದ್ದಾರೆ. ಇದರ ಬೆನ್ನಿಗೇ ಯತ್ನಾಳ್ ಅವರು ''ವಿಜಯೇಂದ್ರ ಅವರು ಹಣದ ಮೂಲಕ ರಾಜ್ಯಾಧ್ಯಕ್ಷರಾಗಲು ಹೊರಟಿದ್ದಾರೆ. ಹಾಗಾದರೆ ಅನಗತ್ಯವಾಗಿ ಚುನಾವಣೆಯನ್ನು ಯಾಕೆ ಮಾಡಬೇಕು ನೇರವಾಗಿಯೇ ಆಯ್ಕೆ ಮಾಡಿ'' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಲ್ಲಿಯವರೆಗಿನ ವಿದ್ಯಮಾನವನ್ನು ಗಮನಿಸಿದರೆ, ಜಿಲ್ಲಾ ಮಟ್ಟದ ನಾಯಕರ ಆಯ್ಕೆಯಲ್ಲಿ ವಿಜಯೇಂದ್ರ ಅವರ ಕೈ ಮೇಲಾಗಿದೆ. ಇದು ಪರೋಕ್ಷವಾಗಿ ವಿಜಯೇಂದ್ರ ಅವರು ರಾಜ್ಯಾಧ್ಯಕ್ಷರಾಗಲು ಪೂರಕವಾಗಿದೆ. ಚುನಾವಣೆಯಲ್ಲಿ ವಿಜಯೇಂದ್ರ ವಿರುದ್ಧ ಸ್ಪರ್ಧಿಸುತ್ತೇನೆ ಎಂದು ಯತ್ನಾಳ್ ಹೇಳಿಕೆ ನೀಡಿದ್ದಾರಾದರೂ, ತಳಸ್ತರದ ನಾಯಕರ ಆಯ್ಕೆಯ ಸಂದರ್ಭದಲ್ಲಿ ಆಗಿರುವ ಹಿನ್ನಡೆ, ಯತ್ನಾಳ್‌ಗೆ ಸೋಲಿನ ಸೂಚನೆಯನ್ನು ನೀಡಿದೆ. ಬಣ ರಾಜಕೀಯದಲ್ಲಿ ಯತ್ನಾಳ್ ಬೆನ್ನಿಗೆ ಆರೆಸ್ಸೆಸ್ ನಿಂತಿದೆಯಾದರೂ, ಅದು ಬಹಿರಂಗವಾಗಿ ತನ್ನ ಬೆಂಬಲವನ್ನು ಘೋಷಿಸುವ ಸ್ಥಿತಿಯಲ್ಲಿ ಇಲ್ಲ. ಒಳಗೊಳಗೆ ಯತ್ನಾಳ್‌ಗೆ ಕುಮ್ಮಕ್ಕು ನೀಡುವವರು ರಾಜ್ಯಾಧ್ಯಕ್ಷರನ್ನಾಗಿಸುವ ವಿಷಯದಲ್ಲಿ ಬೀದಿಗಿಳಿದು ಕೆಲಸ ಮಾಡುವವರಲ್ಲ. ಬಿಜೆಪಿಯೊಳಗಿರುವ ಕೆಲವು ನಾಯಕರಿಗೆ ವಿಜಯೇಂದ್ರ ಅಧಿಕಾರದಿಂದ ಕೆಳಗಿಳಿಯಬೇಕೇ ಹೊರತು, ಆ ಜಾಗದಲ್ಲಿ ಯತ್ನಾಳ್‌ರನ್ನು ಕೂರಿಸುವ ಬಗ್ಗೆ ಯಾವುದೇ ಸ್ಪಷ್ಟ ನಿರ್ಧಾರವನ್ನು ಹೊಂದಿಲ್ಲ. ಇಷ್ಟಕ್ಕೂ ಹಲವು ನಾಯಕರು ರಾಜ್ಯಾಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ. ಆದರೆ ಬಹಿರಂಗ ಚುನಾವಣೆಯಲ್ಲಿ ಸ್ಪರ್ಧಿಸಿ, ಯಡಿಯೂರಪ್ಪ ವಿರೋಧಿ ಬಣದಲ್ಲಿ ಗುರುತಿಸಿಕೊಳ್ಳುವುದು ಅವರಿಗೆ ಇಷ್ಟವಿಲ್ಲ. ವರಿಷ್ಠರಿಗೆ ಯಡಿಯೂರಪ್ಪ ಕೈಯಿಂದ ಚುಕ್ಕಾಣಿಯನ್ನು ಕಿತ್ತುಕೊಳ್ಳುವ ಇರಾದೆ ಇದೆಯಾದರೂ, ಅದನ್ನು ಅತ್ಯಂತ ನಾಜೂಕಿನಿಂದ ನಿರ್ವಹಿಸುವುದು ಅತ್ಯಗತ್ಯ ಎನ್ನುವುದನ್ನು ಮನಗಂಡಿದ್ದಾರೆ. ಈಗಾಗಲೇ ಬಿಜೆಪಿಯ ಹಲವು ಶಾಸಕರು ಕಾಂಗ್ರೆಸ್ ಸೇರುವ ಇಂಗಿತ ವ್ಯಕ್ತಪಡಿಸಿದ್ದಾರೆ ಎಂದು ಕಾಂಗ್ರೆಸ್ ಮುಖಂಡರು ಹೇಳಿಕೆ ನೀಡಿರುವುದು ಬಿಜೆಪಿ ವರಿಷ್ಠರನ್ನು ನಿದ್ದೆಗೆಡಿಸಿದೆ. ಇದೇ ಹೊತ್ತಿಗೆ ಶ್ರೀರಾಮುಲು ಕೂಡ ಕಾಂಗ್ರೆಸ್ ಸೇರುವ ಬಗ್ಗೆ ವದಂತಿ ಹರಡುತ್ತಿದೆ. ಯತ್ನಾಳ್ ಮತ್ತು ಯಡಿಯೂರಪ್ಪ ಇವರಲ್ಲಿ, ಬಿಜೆಪಿಯನ್ನು ಮುನ್ನಡೆಸಬಲ್ಲ ವರ್ಚಸ್ಸು ಇರುವುದು ಯಡಿಯೂರಪ್ಪರಿಗೆ ಎನ್ನುವುದರ ಬಗ್ಗೆ ವರಿಷ್ಠರಿಗೂ ಅನುಮಾನವಿಲ್ಲ. ಯತ್ನಾಳ್‌ನ ಹರಕು ಬಾಯಿ ಬಿಜೆಪಿಯೊಳಗೆ ಇನ್ನಷ್ಟು ಸಮಸ್ಯೆಗಳನ್ನು ಸೃಷ್ಟಿಸುವ ಅಪಾಯವಿದೆ ಎನ್ನುವ ಆತಂಕ ಅವರದು. ಆದುದರಿಂದ, ವರಿಷ್ಠರು, ಪ್ರಜಾಸತ್ತಾತ್ಮಕ ಚುನಾವಣೆಯೇ ನಾಯಕನಾರು ಎನ್ನುವುದನ್ನು ನಿರ್ಧರಿಸಲಿ ಎನ್ನುತ್ತಿದ್ದಾರೆ. ಪ್ರಜಾಸತ್ತೆಯನ್ನು ಹಣ ಮತ್ತು ಜಾತಿ ಬಲದಿಂದ ಹೇಗೆ ಕೊಂಡುಕೊಳ್ಳಬಹುದು ಎನ್ನುವುದನ್ನು ಯಡಿಯೂರಪ್ಪ ಅವರಿಗೆ ಹೊಸದಾಗಿ ಕಲಿಸಬೇಕಾಗಿಲ್ಲ. ಆದುದರಿಂದಲೇ, ಯತ್ನಾಳ್ ಅವರು ಕೆರಳಿದ್ದಾರೆ. ಸೋಲಿನ ವಾಸನೆ ಅವರಿಗೆ ಅದಾಗಲೇ ಬಡಿದಿದೆ.

ಜಿಲ್ಲಾಧ್ಯಕ್ಷರ ಆಯ್ಕೆಯಲ್ಲಿ ವಿಜಯೇಂದ್ರ ಬಣ ಗೆದ್ದಿರುವುದರಿಂದ, ಯತ್ನಾಳ್ ಅವರು ಸ್ಪರ್ಧಿಸಿದರೂ ರಾಜ್ಯಾಧ್ಯಕ್ಷ ಸ್ಥಾನದಲ್ಲಿ ವಿಶೇಷ ಬದಲಾವಣೆ ಕಷ್ಟ. ಕುಮಾರ ಬಂಗಾರಪ್ಪ ಅವರು ಯತ್ನಾಳ್ ಮತ್ತು ರಮೇಶ್ ಜಾರಕಿ ಹೊಳಿಯವರ ಪರವಾಗಿ ಕೊಡೆ ಹಿಡಿದಿದ್ದಾರೆ. ಸುಧಾಕರ್ ಕೂಡ ವಿಜಯೇಂದ್ರ ಅವರಿಗೆ ತಿರುಗಿ ಬಿದ್ದಿದ್ದಾರೆ. ಆದರೆ ಬೊಮ್ಮಾಯಿ, ಅಶೋಕ್, ಸೋಮಣ್ಣರಂತಹ ಹಿರಿಯ ನಾಯಕರು ಬಾಯಿ ತೆರೆಯದೇ ಇದ್ದರೆ ವಿಜಯೇಂದ್ರ ಅವರ ಬದಲಾವಣೆ ಕಷ್ಟ. ಯಡಿಯೂರಪ್ಪ ಅವರೊಂದಿಗೆ ಅಸಮಾಧಾನ ಹೊಂದಿರುವ ಬಿಜೆಪಿಯೊಳಗಿರುವ ಕೆಲವು ಹಿರಿಯ ನಾಯಕರು ಯತ್ನಾಳ್ ಜೊತೆಗೆ ಬಹಿರಂಗವಾಗಿ ಗುರುತಿಸುವ ಕೆಲಸವನ್ನು ಮಾಡುತ್ತಿಲ್ಲ. ಇದೇ ಸಂದರ್ಭದಲ್ಲಿ ಯತ್ನಾಳ್ ಅವರು ಲಿಂಗಾಯತ ಸಮುದಾಯದ ಆಕ್ರೋಶವನ್ನೂ ಸೆರಗಿನಲ್ಲಿ ಕಟ್ಟಿಕೊಂಡಿದ್ದಾರೆ. ಬಸವಣ್ಣನವರಿಗೆ ಅವಮಾನಮಾಡಿದ್ದಾರೆ ಎನ್ನುವ ಆರೋಪವೂ ಅವರ ಮೇಲಿದೆ. ಆದುದರಿಂದಲೇ, ಬಿಜೆಪಿಯ ಕೆಲವರಿಗೆ ಯತ್ನಾಳ್ ನುಂಗಲೂ ಆಗದ, ಉಗುಳಲೂ ಆಗದ ಬಿಸಿತುಪ್ಪವಾಗಿದ್ದಾರೆ. ''ವಿಜಯೇಂದ್ರ ಹಣದ ಮೂಲಕ ಪ್ರಜಾಸತ್ತೆಯನ್ನು ಕೊಂಡುಕೊಳ್ಳುವ ಪ್ರಯತ್ನ ನಡೆಸಿದ್ದಾರೆ'' ಎಂದು ಆರೋಪಿಸುವ ಮೂಲಕ ರಾಜ್ಯಾಧ್ಯಕ್ಷ ಸ್ಥಾನಕ್ಕೆ ನಡೆಯುವ ಚುನಾವಣೆಗೆ ಮುನ್ನವೇ ಅದರ ಬಗ್ಗೆ ತಮ್ಮ ಅಪನಂಬಿಕೆಯನ್ನು ವ್ಯಕ್ತಪಡಿಸಿದ್ದಾರೆ. ಒಂದು ರೀತಿಯಲ್ಲಿ ಸ್ಪರ್ಧೆಗೆ ಅವರು ಹಿಂಜರಿಯುತ್ತಿದ್ದಾರೆ. ಚುನಾವಣೆಯಲ್ಲಿ ಸ್ಪರ್ಧಿಸಿ ಸೋತರೆ, ವಿಜಯೇಂದ್ರ ಅವರನ್ನು ಒಪ್ಪಿಕೊಳ್ಳುವುದು ಅನಿವಾರ್ಯವಾಗುತ್ತದೆ. ಒಂದು ವೇಳೆ ಮತ್ತೂ ರಾಜ್ಯಾಧ್ಯಕ್ಷರ ವಿರುದ್ಧ ಯತ್ನಾಳ್ ಟೀಕೆ ಮುಂದುವರಿಸಿದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವುದು ವರಿಷ್ಠರಿಗೆ ಅನಿವಾರ್ಯವಾಗುತ್ತದೆ. ಇದು ಬಿಜೆಪಿಯ ಸ್ಥಿತಿಯನ್ನು ಇನ್ನಷ್ಟು ಚಿಂತಾಜನಕಗೊಳಿಸಬಹುದು. ಒಂದು ವೇಳೆ ಚುನಾವಣೆಯಲ್ಲಿ ವಿಜಯೇಂದ್ರ ಬಣಕ್ಕೆ ಹಿನ್ನಡೆಯಾದರೂ ಬಿಜೆಪಿ ವರಿಷ್ಠರ ಸಮಸ್ಯೆ ಮುಗಿಯುವುದಿಲ್ಲ. ಯಾಕೆಂದರೆ, ಈಗಾಗಲೇ ಬಹುತೇಕ ಜಿಲ್ಲಾಧ್ಯಕ್ಷರು ವಿಜೇಯಂದ್ರ ಪರವಾಗಿದ್ದಾರೆ.




• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ

ಇಂಥ ಶುಭಕಾರ್ಯಗಳಿಗೆ ಬಹು ವಿಘ್ನಗಳುಂಟಾಗುವುವು. ಈಗ ಭರತನು ವಿದೇಶಕ್ಕೆ ಹೋಗಿದ್ದಾನೆ. ಇದೇ ನಿನಗೆ ಪಟ್ಟಾಭಿಷೇಕಕ್ಕೆ ಸಮಯವು. ಭರತನು ನಿನಗೆ ಸಮ್ಮತನಾಗಿ ಸದ್ವರ್ತನೆಯಲ್ಲಿದ್ದಾನೆ. ಆತನಿಗೆ ನಿನ್ನಲ್ಲಿ ಜೇಷ್ಠಭ್ರಾತೃವೆಂಬ ಬುದ್ಧಿಯಿಂದ ಕಾಮ ಕ್ರೋಧಗಳಿಲ್ಲದಿದ್ದರೂ ಲೋಕದಲ್ಲಿ ಮನುಷ್ಯರ ಅಂತಃಕರಣವನ್ನರಿಯುವುದಕ್ಕೆ ಶಕ್ಯವಲ್ಲವೆಂದು ನನ್ನ ಮನಸ್ಸಿಗೆ ತೋರುತ್ತದೆ. ಸತ್ಪುರುಷರು ಮನಸ್ಸಿನಲ್ಲಿ ಯಾವಾಗಲೂ ಪರಹಿತವನ್ನೇ ಚಿಂತಿಸುತ್ತಾರಲ್ಲದೆ ಮತ್ತೊಂದನ್ನು ಚಿಂತಿಸುವುದಿಲ್ಲ. ನೀನು ಈಹೊತ್ತು ನಿನ್ನ ಭಾರ್ಯೆಯೊಡನೆ ನಿಯಮದಿಂದಿದ್ದು ನಾಳೆ ಶುಭಲಗ್ನದಲ್ಲಿ ಪಟ್ಟಾಭಿಷೇಕಕ್ಕೆ ಸಿದ್ಧನಾಗು ಎಂದು ಹೇಳಿಕಳುಹಿಸಿದನು. ಶ್ರೀರಾಮನು ಮಹಾಪ್ರಸಾದವೆಂದು ಆ ರಾಯನಿಗೆ ನಮಸ್ಕಾರವನ್ನು ಮಾಡಿ ಬೀಳ್ಕೊಂಡು ತನ್ನ ಅರಮನೆಗೆ ಹೋದನು. ಆತನಿಗೆ ಪಟ್ಟಾಭಿಷೇಕವಾಗುವುದೆಂದು ಕೌಸಲ್ಯಾದೇವಿಯು ನಿಯಮದಿಂದ ತನ್ನ ದೇವಪೂಜೆಯ ಮನೆಯಲ್ಲಿ ದೇವತಾರ್ಚನೆಯನ್ನು ಮಾಡುತ್ತ ಧ್ಯಾನಾಸಕ್ತೆಯಾಗಿದ್ದಳು. ಆಕೆಯ ಸಮೀಪದಲ್ಲಿ ಸೇವಾರ್ಥವಾಗಿ ಸುಮಿತ್ರಾದೇವಿಯು ತನ್ನ ಮಗನಾದ ಲಕ್ಷ್ಮಣನ ಸಹಿತವಾಗಿ ಕಾದಿದ್ದಳು. ಸೀತಾದೇವಿಯು ತನ್ನ ಪ್ರಾಣಕಾಂತನಾದ ಶ್ರೀರಾಮನ ಪಟ್ಟಾಭಿಷೇಕವಾರ್ತೆಯನ್ನು ಕೇಳಿ ತನ್ನ ಅತ್ತೆಯಾದ ಕೌಸಲ್ಯಾದೇವಿಯ ಸಮೀಪದಲ್ಲಿ ಸೇವಾಸತ್ಕಾರಗಳನ್ನು ಮಾಡಿಕೊಂಡಿದ್ದಳು. ಆಗ ಶ್ರೀರಾಮನು ತನ್ನ ತಾಯಿಯಾದ ಕೌಸಲ್ಯಾದೇವಿಯಸಮೀಪಕ್ಕೆ ಹೋಗಿ ನಮಸ್ಕಾರವನ್ನು ಮಾಡಿದನು. ಆ ದೇವಿಯು ಪ್ರಾಣಾಯಾಮವನ್ನು ಮಾಡುತ್ತ ಅಂತರಂಗದಲ್ಲಿ ವರಮಪುರುಷನಾದ ನಾರಾಯಣನ ಧ್ಯಾನವನ್ನು ಮಾಡುತ ಕಣ್ಣುಗಳನ್ನು ಮುಚ್ಚಿಕೊಂಡಿದ್ದಳು. ಶ್ರೀರಾಮನು ಆಕೆಗೆ ನಮಸ್ಕರಿಸಿ ಆ ದೇವಿಯನ್ನು ಕುರಿತು ಅಮ್ಮ, ನನ್ನ ತಂದೆಯಾದ ದಶರಥರಾಯನು ಪ್ರಜಾಪಾಲನಕ್ಕೋಸ್ಕರ ನಾಳೆ ಪುಷ್ಯನಕ್ಷತ್ರದಲ್ಲಿ ನನಗೆ ಪಟ್ಟಾಭಿಷೇಕವನ್ನು ಮಾಡುವುದಾಗಿ ಹೇಳಿದನು. ಈ ರಾತ್ರಿ ನಾನು ಸೀತೆಯೊಡನೆ ಉಪವಾಸ ಮಾಡಬೇಕೆಂದು ಗುರುಗಳಾದ ವಸಿಷ್ಠವಾಮದೇವಾದಿಗಳು ಹೇಳಲು ನನ್ನ ತಂದೆಯ ಹಾಗೆ ಮಾಡಬೇಕೆಂದು ಆಜ್ಞಾಪಿಸಿದನು. ನೀನು ನನಗೆ ಮಾಡುವ ಮಾಂಗಲೋತ್ಸವಗಳನ್ನು ಮಾಡು. ಸೀತೆಗೂ ಕಾಲೋಚಿತವಾದ ಆಲಂಕಾರಗಳನ್ನು ಮಾಡು ಎಂದು ನುಡಿದನು. ಕೌಸಲ್ಯಾದೇವಿಯು ತನ್ನ ಮನಸ್ಸಿನಲ್ಲಿದ್ದ ಇಷ್ಟಾರ್ಥವು ಸಂದಿತೆಂದು ಅತಿಹರ್ಷಪಟ್ಟು ಶ್ರೀರಾಮನನ್ನು ಕುರಿತು ರಾಮ, ನೀನು ಆಯುಷ್ಮಂತನಾಗಿರು. ನಿನ್ನ ಸಮಸ್ತ ಶತ್ರುಗಳೂ ಲಯವಾಗಲಿ. ಸುಮಿತ್ರಾದೇವಿಯ ಕುಮಾರನಾದ ಲಕ್ಷ್ಮಣನೂ ನೀನೂ ಶುಭನಕ್ಷತ್ರ ಶುಭಲಗ್ನದಲ್ಲಿ ಜನಿಸಿದಿರಿ. ಲಕ್ಷ್ಮಣನು ನಿನಗೆ ಸಮಾನವಾದ ಐಶ್ವರವನ್ನು ಪಡೆಯಲಿ. ನಿಮ್ಮ ತಂದೆಯಾದ ವನರಥರಾಯನು ನಿಮ್ಮ ಸದ್ಗುಣಗಳಿಂದ ಅತ್ಯಂತ ಸಂತುಷ್ಟನಾದನು. ಮಹಾತ್ಮನಾದ ಆ ರಾಯನ ವಾಕ್ಯವು ವ್ಯರ್ಥವಾಗದು. ಇಕ್ಷ್ವಾಕುವಂಶದ ರಾಯರ ಸಮಗ್ರ ಸಂಪತ್ತುಗಳೂ ನಿನ್ನಲ್ಲಿ ಸೇರುವುವು ಎಂದು ಆಶೀರ್ವಾದವನ್ನು ಮಾಡಿದಳು.

ಮುಂದುವರಿಯುವುದು...

# ದ .ರಾ.ಬೇಂದ್ರೆಯವರ ಕಿರು ಪರಿಚಯ



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ದ.ರಾ.ಬೇಂದ್ರೆ ರವರು 31 ನೇ ಜನವರಿ 1896 ರಂದು ಕರ್ನಾಟಕದ ಧಾರವಾಡದಲ್ಲಿ ಜನಿಸಿದರು ನವೋದಯ ಅಥವಾ ಕನ್ನಡ ಕಾವ್ಯದ ಹೊಸ ಅಲೆಯು ಕನ್ನಡಿಗರಿಗೆ ಸುವರ್ಣ ಕಾಲವಾಗಿತ್ತು ಏಕೆಂದರೆ ಈ ಸಮಯದಲ್ಲಿ, ಬ್ರಿಟಿಷ್ ಆಡಳಿತದ ಸಂಕೋಲೆಯಲ್ಲಿ ಸಿಲುಕಿದ್ದ ಸುಪ್ತ ಕಾವ್ಯ ಪರಾಕ್ರಮವನ್ನು ನವೀಕರಿಸಲು ಅವರಿಗೆ ಅವಕಾಶ ಸಿಕ್ಕಿತು.

ಭಾಷೆಯ ಸೌಂದರ್ಯ ಮತ್ತು ಅದರ ಕಾವ್ಯವು ಹೊಸ ಎತ್ತರವನ್ನು ತಲುಪಿದ ಈ ಅವಧಿ, ದಬ್ಬಾಳಿಕೆ ಮತ್ತು ಉದಾಸೀನತೆಯ ಬೂದಿಯಿಂದ ಫೀನಿಕ್ಸ್‌ನಂತೆ ಏರಿತು. ಈ ಯುಗದ ಪ್ರಸಿದ್ಧ ಕವಿಗಳೆಂದರೆ ಶ್ರೀಕಂಠಯ್ಯ, ಕುವೆಂಪು, ಬೇಂದ್ರೆ, ಕಾರಂತರು ಮತ್ತು ಅನೇಕರು.


ಅವರು ಸಾಂಪ್ರದಾಯಿಕ ಮತ್ತು ಸಾಂಪ್ರದಾಯಿಕ ಕವಿಗಳಿಂದ ಸಾಹಿತ್ಯದ ಮೇಲೆ ಹೇರಲಾದ ಮಿತಿಗಳನ್ನು ಮುರಿದರು ಮತ್ತು ತಮ್ಮದೇ ಆದ ರೀತಿಯಲ್ಲಿ ಧಾರ್ಮಿಕ ಮಹಾಕಾವ್ಯಗಳನ್ನು ಹೇಳಲು ಪ್ರಾರಂಭಿಸಿದರು, ಅದೇ ಸಮಯದಲ್ಲಿ ಸಮಕಾಲೀನ ಅಥವಾ ಐತಿಹಾಸಿಕ ಭಾರತೀಯ ಸಮಾಜವನ್ನು ಮೀರಿ ಮತ್ತು ಇತರ ಸಂಸ್ಕೃತಿಗಳಿಂದ ಅಂಶಗಳನ್ನು ವಶಪಡಿಸಿಕೊಂಡರು. ಆರಂಭಿಕ ಜೀವನ ಹುಟ್ಟಿನಿಂದ ಚಿತ್ಪಾವನ ಬ್ರಾಹ್ಮಣರಾದ . ಅವರ ಕುಟುಂಬವು ವಿಶೇಷವಾಗಿ ಸಂಸ್ಕೃತ ಭಾಷೆಯ ಅನೇಕ ವಿದ್ವಾಂಸರನ್ನು ಹೊಂದಿತ್ತು. ಬೇಂದ್ರೆ, ತಮ್ಮ ಸ್ನಾತಕೋತ್ತರ ಕೋರ್ಸ್ ಅನ್ನು ಪುಣೆಯ ಫರ್ಗುಸನ್ ಕಾಲೇಜಿನಲ್ಲಿ ಮಾಡಿದರು. ನಂತರ ಅವರು ಧಾರವಾಡದ ವಿಕ್ಟೋರಿಯಾ ಪ್ರೌಢ ಶಾಲೆಯಲ್ಲಿ ಶಿಕ್ಷಕರಾದರು ಮತ್ತು ನಂತರ ಕಲೆಯಲ್ಲಿ ಸ್ನಾತಕೋತ್ತರ ಪದವಿ ಪಡೆದರು.

ವಿಕ್ಟೋರಿಯಾ ಮತ್ತು ನಂತರ ಡಿ.ಎ.ವಿ. ಸೊಲ್ಲಾಪುರದ ಕಾಲೇಜು. ನಂತರ ಅವರು ಆಲ್ ಇಂಡಿಯಾ ರೇಡಿಯೋದಲ್ಲಿ ಸಲಹೆಗಾರರಾದರು. ನಂತರ ಅವರ ಜೀವನದಲ್ಲಿ ದತ್ತಾತ್ರೇಯರು ಗೆಳೆಯರ ಗುಂಪು ಎಂಬ ಗುಂಪನ್ನು ಆರಂಭಿಸಿದರು, ಇದು ಕರ್ನಾಟಕದಾದ್ಯಂತ ಅನೇಕ ಕವಿಗಳನ್ನು ಆಕರ್ಷಿಸಿತು.

**ಕೆಲಸ ಮತ್ತು ಸಾಧನೆಗಳು :** ದತ್ತಾತ್ರೇಯರು ಅಂಬಿಕಾತನಯದತ್ತ ಎಂಬ ಹೆಸರಿನಲ್ಲಿ ಬರೆದಿದ್ದಾರೆ, ಇದನ್ನು ಅಂಬಿಕೆಯ ಮಗನಾದ ದತ್ತನಿಗೆ ಅನುವಾದಿಸಲಾಗಿದೆ. ಅವನು ತನ್ನ ತಾಯಿಯ ಗೌರವಾರ್ಥವಾಗಿ ಹೆಸರನ್ನು ತೆಗೆದುಕೊಂಡನು. ಅವರ ಹಿಂದಿನ ಕೃತಿಗಳು ಸರಳವಾಗಿದ್ದವು ಮತ್ತು ಆಡುಮಾತಿನಲ್ಲಿ ಬಳಸುವ ಭಾಷೆಯಾಗಿದ್ದವು, ಆದರೆ ನಂತರ ಅವರು ಸಮಾಜ ಮತ್ತು ಮಾನವ ತತ್ವಶಾಸ್ತ್ರಗಳ ಬಗ್ಗೆ ಆಳವಾದ ಒಳನೋಟಗಳನ್ನು ತೆಗೆದುಕೊಳ್ಳಲು ಪ್ರಾರಂಭಿಸಿದರು.

ಬೇಂದ್ರೆಯವರು ಆಧುನಿಕ ಕನ್ನಡ ಕಾವ್ಯ ಕ್ಷೇತ್ರದ ಆರಂಭಿಕ ಕವಿಗಳಲ್ಲಿ ಒಬ್ಬರಾಗಿದ್ದರು ಮತ್ತು ಅವರು ಬಹುತೇಕ ತಂದೆಯಂತಿದ್ದರು. ಅವರ ಕಾವ್ಯವು ಜಾನಪದ ಕಥೆಗಳನ್ನು ಹೇಳುವುದರಲ್ಲಿ ಮತ್ತು ಸ್ತುತಿಗೀತೆಗಳು ಮತ್ತು ಪಠಣಗಳಲ್ಲಿ ಇನ್ನೂ ವ್ಯಾಪಕವಾಗಿ ಹರಡಿರುವ ಕಲೆಯಾಗಿದೆ. ಅವರು ಕವಿತೆಗಳನ್ನು ಬರೆಯುವಾಗ ಅನೇಕ ದೃಷ್ಟಿಕೋನಗಳು ಮತ್ತು ಚಿಂತನೆಯ ಸಾಲುಗಳನ್ನು ಬಳಸಿದರು. ಅವರ ಪ್ರಸಿದ್ಧ ಕಾವ್ಯ ಕೃತಿಗಳಲ್ಲಿ ಒಂದು ನಾಡ ಲೀಲಾ. ಈ ಕವನ ಸಂಕಲನದಲ್ಲಿ ಅವರು ದೇಶಭಕ್ತಿ, ಸುಧಾರಣೆ, ಸಂಪ್ರದಾಯಗಳು, ಭಾರತೀಯ ಸಂಸ್ಕೃತಿ ಮತ್ತು ಇತರ ಹಲವು ಅಂಶಗಳನ್ನು ಸೇರಿಸಿದರು. ಪಾತರಗಿತ್ತಿ ಅಥವಾ ಮೂಡಲಮನೆಯಂತಹ ಕವಿತೆಗಳಲ್ಲಿ, ಅವರು ತಮ್ಮ ಪ್ರಾಸಬದ್ಧವಾದ ಸಾಲು ಗಳನ್ನು ಬರೆಯುವಾಗ ವಿಭಿನ್ನ ಸಂಕೇತಗಳು ಮತ್ತು ಭಾಷಾ ವೈಶಿಷ್ಟ್ಯಗಳ ಬಳಕೆಯನ್ನು ಹೊರತಂದರು. ಬೇಂದ್ರೆಯವರು ಸಂಖ್ಯೆಗಳೊಂದಿಗೆ ಸ್ಥಿರೀಕರಣವನ್ನು ಹೊಂದಿದ್ದರು, ಅದು ಅವರ ಪುಸ್ತಕವಾದ ವಿಶ್ವಧಾರಣಸೂತ್ರದ ಭಾಗವಾಯಿತು.

ಸಾಹಿತ್ಯಕ್ಕೆ ನೀಡಿದ ಕೊಡುಗೆಗಾಗಿ ಅವರು ಆರು ಪ್ರಶಸ್ತಿಗಳನ್ನು ಗೆದ್ದಿದ್ದಾರೆ, ಮತ್ತು 1974 ರಲ್ಲಿ ಅವರು ನಾಕು ತಂತಿ ಎಂಬ ಕಾವ್ಯ ಸಂಗ್ರಹಕ್ಕಾಗಿ ಜ್ಞಾನಪೀಠವನ್ನು ಗೆದ್ದರು. ಅದಕ್ಕೂ ಮೊದಲು ಅವರು 1968 ರಲ್ಲಿ ಪದ್ಮಶ್ರೀ, ಕೇಳ್ಕರ್ ಪ್ರಶಸ್ತಿ ಮತ್ತು ಸಾಹಿತ್ಯ ಅಕಾಡೆಮಿಯ ಫೆಲೋಶಿಪ್ ಗಳಿಸಿದರು.




### ಕವನ ಸಂಕಲನಗಳು

ಕೃಷ್ಣ ಕುಮಾರಿ , ಗರಿ , ಮೂರ್ತಿ, ಕಾಮಕಸ್ತೂರಿ , ಸಖೀಗೀತ , ಉಯ್ಯಾಲೆ , ನಾದಲೀಲೆ , ಮೇಘದೂತ , ಹಾಡು-ಪಾಡು , ಗಂಗಾವತರಣ , ಅರಳು-ಮರಳು , ವಿನಯ , ನಾಕುತಂತಿ , ಹೃದಯ ಸಮುದ್ರ, ಮರ್ಯಾದ , ಒಲವೆ ನನ್ನ ಬದುಕು , ಚೈತನ್ಯದ ಪೂಜೆ , ಮುಗಿಲಮಲ್ಲಿಗೆ , ತಾಲೆಕ್ಕಣಿ , ಕೆತುದೌತಿ , ಪ್ರತಿಬಿಂಬಗಳು .

### ಪ್ರಶಸ್ತಿ, ಪುರಸ್ಕಾರ

- 1943ರಲ್ಲಿ ಶಿವಮೊಗ್ಗದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.
- 1958ರಲ್ಲಿ 'ಅರಳು ಮರಳು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
- 1964ರ ಮೈಸೂರು ದಸರಾ ಕಾರ್ಯಕ್ರಮದಲ್ಲಿ ಬೇಂದ್ರೆಯವರಿಗೆ ಸನ್ಮಾನ
- 1965ರಲ್ಲಿ ಮರಾಠಿಯಲ್ಲಿ ರಚಿಸಿದ ''ಸಂವಾದ'' ಎಂಬ ಕೃತಿಗೆ ಕೇಳ್ಕರ್ ಬಹುಮಾನ
- 1968ರಲ್ಲಿ 'ಪದ್ಮಶ್ರೀ' ಪ್ರಶಸ್ತಿ ಲಭಿಸಿತು
- 1973ರಲ್ಲಿ 'ನಾಕುತಂತಿ' ಕೃತಿಗೆ ಜ್ಞಾನಪೀಠಪ್ರಶಸ್ತಿ
- ಕಾಶಿ ವಿದ್ಯಾಪೀಠ, ವಾರಣಾಸಿ, ಮೈಸೂರು ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳ ಗೌರವ ಡಾಕ್ಟರೇಟ್
- ಕೇಂದ್ರ ಸಾಹಿತ್ಯ ಅಕಾಡೆಮಿಯ ಫೆಲೋಷಿಪ್ ಪಡೆದರು

**ಪರಂಪರೆ ಮತ್ತು ಅವನತಿ:** ನವೋದಯ ಕಾಲದ ಇಂತಹ ಗಮನಾರ್ಹ ಕವಿಯಾಗಿ, ಬೇಂದ್ರೆಯವರಿಗೆ ವರಕವಿ, ಅಥವಾ ಪ್ರತಿಭಾನ್ವಿತ ಕವಿ ಎಂಬ ಬಿರುದನ್ನು ನೀಡಲಾಯಿತು. ಅವರು ಏಳು ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡ ಲೇಖಕರಲ್ಲಿ ಎರಡನೆಯವರು. ಉಡುಪಿ ಅದಮಾರು ಮಠವು ಅವರಿಗೆ ಕರ್ನಾಟಕ ಕುಲ ತಿಲಕ ಎಂಬ ಬಿರುದನ್ನು ನೀಡಿತು. ಬೇಂದ್ರೆಯವರು ನಾಡ-ಹಬ್ಬದ ಸಂಪ್ರದಾಯದೊಂದಿಗೆ ಬಂದರು, ಇದು ಎಲ್ಲಾ ಭೂಮಿ ಮತ್ತು ಅದರ ಉತ್ಪನ್ನಗಳನ್ನು ಆಚರಿಸುವ ಹಬ್ಬವಾಗಿದೆ, ಮತ್ತು ಇದನ್ನು ಈಗಲೂ ಆಚರಣೆಯಲ್ಲಿದೆ. ಅವರು ನರ ಬಲಿ ಅಥವಾ ನರಬಲಿ ಪುಸ್ತಕವನ್ನು ಬರೆದ ನಂತರ ಅವರಿಗೆ ಜೈಲು ಶಿಕ್ಷೆ ವಿಧಿಸಲಾಯಿತು.

ಆ ಪುಸ್ತಕವನ್ನು ಬರೆದ ನಂತರ ಅವರನ್ನು ದೇಶದ್ರೋಹದ ಗಂಭೀರ ಆರೋಪದ ಮೇಲೆ ಬಂಧಿಸಲಾಯಿತು. ಗಿರೀಶ್ ಕಾರ್ನಾಡ್ ಅವರು ಬೇಂದ್ರೆಯವರ ಜೀವನದ ಕುರಿತು ಸಾಕ್ಷ್ಯಚಿತ್ರವನ್ನು ಮಾಡಿದರು, ಏಕೆಂದರೆ ಅವರನ್ನು ಕರ್ನಾಟಕದ ಕವಿಗಳಲ್ಲಿ ಒಬ್ಬರೆಂದು ಸುಲಭವಾಗಿ ಪರಿಗಣಿಸಲಾಗುತ್ತದೆ. ಅವರು ಅಕ್ಟೋಬರ್ 21, 1981 ರಂದು ನಿಧನರಾದರು.

**ನಾಟಕ:** ತಿರುಕನ ಪಿಡುಗು , ಉದ್ಧಾರ , ನಗೆಯ ಹುಗೆ , ಹುಚ್ಚಾಟಗಳು , ಹೊಸ ಸಂಸಾರ ಮತ್ತು ಇತರ ನಾಟಕಗಳು ,

**ಕಥಾಸಂಕಲನ/ಪ್ರಬಂಧ:** ನಿರಾಭರಣ ಸುಂದರಿ , ಮಾತೆಲ್ಲ ಜ್ಯೋತಿ .

**ವಿಮರ್ಶಾ/ಕಾವ್ಯಮಿಮಾಂಸೆ:** ಸಾಹಿತ್ಯ ಮತ್ತು ವಿಮರ್ಶೆ , ಸಾಹಿತ್ಯ ಸಂಶೋಧನೆ ವಿಚಾರ ಮಂಜರಿ , ಮಹಾರಾಷ್ಟ್ರ ಸಾಹಿತ್ಯ ಕಾಮೋದ್ಯೋಗ , ಸಾಹಿತ್ಯದ ವಿರಾಟ ಸ್ವರೂಪ ನಾಯಕ ,ಕನ್ನಡ ಸಾಹಿತ್ಯದ ನಾಲ್ಕು ರತ್ನಗಳು , ಕುಮಾರವ್ಯಾಸ ಮತಧರ್ಮ ಮತ್ತು ಆಧುನಿಕ ಮಾನವ. **ಸಂಪಾದನೆ :** ನನ್ನದು ಈ ಕನ್ನಡ ಹಾಡು ಹಕ್ಕಿ ಹಾರುತಿದೆ , ಚಂದ್ರಹಾಶ ಹೊಸಗನ್ನಡ ಕಾವ್ಯ ಶ್ರೀ ಕನಕದಾಸ ಚತುಶಿತ ಮನೋತ್ಸವ

**ದ ರಾ ಬೇಂದ್ರೆ ಅವರ ಪ್ರಶಸ್ತಿಗಳು :** ನಾಕುತಂತಿ , ಜ್ಞಾನಪೀಠ ಪ್ರಶಸ್ತಿ , ಅರಳು-ಮರಳು-ಕೇಂದ್ರ ಸಾಹಿತ್ಯ ಅಕಾಡೆಮಿ , ವರಕವಿ ಬಿರುದು,

**ಅನುವಾದ :** ಉಪನಿಷತ್ ರಹಸ್ಯ , ಭಾರತೀಯ ನವಜನ್ಮ , ಗುರು ಗೋವಿಂದ ಸಿಂಗ್ , ನೂರೊಂದು ಕವವ , ಕಬೀರ ವಚನಾವಳಿ.

# ಮುಖದ ಮೇಲಿರುವ ಅನಗತ್ಯ ಕೂದಲಿಗೆ ನೋವಿಲ್ಲದೆ ಮುಕ್ತಿ

• ಉದಯವಾಹಿನಿ ಬೆಂಗಳೂರು

ಮುಖದ ಕೂದಲನ್ನು ತೆಗೆದುಹಾಕಲು ಹಲವಾರು ನೈಸರ್ಗಿಕ ಮಾರ್ಗಗಳಿವೆ, ಅವು ಪರಿಣಾಮಕಾರಿ ಮಾತ್ರವಲ್ಲದೆ ನೋವುರಹಿತವೂ ಆಗಿರುತ್ತವೆ. ನೈಸರ್ಗಿಕ ವಿಧಾನಗಳನ್ನು ಬಳಸುವ ಪ್ರಯೋಜನವೆಂದರೆ ಅವು ಹೆಚ್ಚಾಗಿ ಸುಲಭವಾಗಿ ಲಭ್ಯವಿರುತ್ತವೆ. ಕೆಲವು ಹೆಣ್ಮಕ್ಕಳ ಮುಖದ ಮೇಲೆ ಅನಗತ್ಯ ಕೂದಲು ಬೆಳೆಯುತ್ತದೆ, ಅನೇಕ ಮಹಿಳೆಯರು ತಮ್ಮ ಮುಖದಲ್ಲಿನ ಅನಗತ್ಯ ಕೂದಲನ್ನು ತೆಗೆದುಹಾಕಲು ಬ್ಯೂಟಿ ಪಾರ್ಲರ್‌ಗೆ ಹೋಗಿ ವ್ಯಾಕ್ಸಿಂಗ್ , ಥ್ರೆಡ್ಡಿಂಗ್ ಅಥವಾ ಶೇವಿಂಗ್‌ನಂತಹ ವಿಧಾನವನ್ನು ಮುಖ ಮಾಡುತ್ತಾರೆ ಆದರೆ ಈ ವಿಧಾನವು ನೋವಿನಿಂದ ಕೂಡಿರುತ್ತದೆ. ನಿಮಗೆ ನೋವಿಲ್ಲದೆ ನಿಮ್ಮ ಮನೆಯಲ್ಲೇ ಸುಲಭವಾಗಿ ನಿಮ್ಮ ಮುಖದ ಮೇಲಿನ ಕೂದಲನ್ನು ನಿವಾರಿಸಬೇಕೆಂದಿದ್ದರೆ ಇಲ್ಲಿದೆ ಟಿಪ್ಸ್.ವ್ಯಾಕ್ಸಿಂಗ್ ವಿಪರೀತ ನೋವಿನಿಂದ ಕೂಡಿರುವ ಕಾರಣಕ್ಕೆ ಬಹಳಷ್ಟು ಮಹಿಳೆಯರು ವ್ಯಾಕ್ಸಿಂಗ್ ಮಾಡಿಸಿಕೊಳ್ಳಲು ಹಿಂಜರಿಯುತ್ತಾರೆ. ಅದರ ಬದಲು ಈ ನೈಸರ್ಗಿಕ ವಿಧಾನವನ್ನು ಬಳಸಿದರೆ ಸುಲಭವಾಗಿ ನೋವಿಲ್ಲದೆ ಕೂದಲನ್ನು ನಿವಾರಿಸಬಹುದು. ನೀವೂ ಕೂಡಾ ಕೂದಲು ಮುಕ್ತ ಚರ್ಮವನ್ನು ಪಡೆಯಲು ಬಯಸಿದರೆ ಇಲ್ಲಿದೆ 5 ನೋವುರಹಿತ ನೈಸರ್ಗಿಕ ಮಾರ್ಗಗಳು.

### ಸಕ್ಕರೆ ಮತ್ತು ನಿಂಬೆ ವ್ಯಾಕ್ಸ್

ಮುಖದ ಕೂದಲನ್ನು ತೆಗೆಯಲು ಅತ್ಯಂತ ಪರಿಣಾಮಕಾರಿ ಮತ್ತು ನೈಸರ್ಗಿಕ ವಿಧಾನವೆಂದರೆ ಸಕ್ಕರೆ ಮತ್ತು ನಿಂಬೆ ರಸದ ಪೇಸ್ಟ್ ಬಳಸುವುದು. ಈ ವಿಧಾನವು ಸಾಂಪ್ರದಾಯಿಕ ವ್ಯಾಕ್ಸಿಂಗ್ ಅನ್ನು ಅನುಕರಿಸುತ್ತದೆ ಆದರೆ ಮೃದುವಾದ ವಿಧಾನದೊಂದಿಗೆ, ಇದಕ್ಕೆ ಯಾವುದೇ ಕಠಿಣ ರಾಸಾಯನಿಕಗಳು ಅಥವಾ ಬಿಸಿ ಮೇಣದ ಅಗತ್ಯವಿಲ್ಲ.

### ಮೊಟ್ಟೆಯ ಮಾಸ್ಕ್

ಮೊಟ್ಟೆಯ ಬಿಳಿಭಾಗವನ್ನು ವ್ಯಾಕ್ಸಿಂಗ್‌ಗೆ ನೈಸರ್ಗಿಕ ಪರ್ಯಾಯವಾಗಿ ಬಳಸಬಹುದು. ಅವುಗಳ ಜಿಗುಟಾದ ಸ್ಥಿರತೆಯು ಒಣಗಿದಾಗ ಮತ್ತು ಸಿಪ್ಪೆ ಸುಲಿದ ನಂತರ ಚರ್ಮದಿಂದ ಕೂದಲನ್ನು ತೆಗೆಯಲು ಸಹಾಯ ಮಾಡುತ್ತದೆ, ಕೂದಲು ತೆಗೆಯುವ ಸುಲಭ ಮತ್ತು ನೋವು ಮುಕ್ತ ವಿಧಾನ ಇದಾಗಿದೆ.





**ಕಡಲೆಹಿಟ್ಟು ಅರಿಶಿನ ಫೇಸ್‌ಪ್ಯಾಕ್:** ಕಡಲೆಹಿಟ್ಟು ಹಿಟ್ಟು ಚರ್ಮದಿಂದ ಕೂದಲನ್ನು ಸಡಿಲಗೊಳಿಸುವ ಸೌಮ್ಯವಾದ ಸ್ಕಬ್ ಆಗಿ ಕಾರ್ಯನಿರ್ವಹಿಸುತ್ತದೆ. ಅರಿಶಿನವು ಚರ್ಮಕ್ಕೆ ಹೊಳಪು ನೀಡುವುದು ಮಾತ್ರವಲ್ಲದೆ, ಚರ್ಮವ ಕೂದಲನ್ನು ಶಮನಗೊಳಸಲು ಕೆಲಸ ಮಾಡುತ್ತದೆ. **ಅರಿಶಿನದ ಪೇಸ್ಟ್:** ಅರಿಶಿನವನ್ನು ಪೇಸ್ಟ್ ರೀತಿ ಮಾಡಿ ಅದನ್ನು ಮುಖಕ್ಕೆ ಹಚ್ಚೋದರಿಂದ ಮುಖದ ಕೂದಲು ಕಿರುಚೀಲಗಳನ್ನು ಒಡೆಯಲು ಸಹಾಯ ಮಾಡುತ್ತದೆ. ಕಾಲಾನಂತರದಲ್ಲಿ ಮುಖದ ಕೂದಲಿನ ಬೆಳವಣಿಗೆಯನ್ನು ನಿಧಾನಗೊಳಿಸುತ್ತದೆ. ಫಲಿತಾಂಶಗಳು ಕಾಣಿಸಿಕೊಳ್ಳಲು ಸ್ವಲ್ಪ ಸಮಯ ತೆಗೆದುಕೊಳ್ಳಬಹುದು ಆದರೆ ಇದು ಸಂಪೂರ್ಣವಾಗಿ ನೈಸರ್ಗಿಕ ಮತ್ತು ಸೌಮ್ಯವಾದ ಆಯ್ಕೆಯಾಗಿದೆ. **ಅಲೋವೆರಾ ಮತ್ತು ಪಪ್ಪಾಯಿ ಪೇಸ್ಟ್:** ಅಲೋವೆರಾವು ಅದರ ಹಿತವಾದ ಮತ್ತು ಆರ್ಧ್ರಕ ಗುಣಲಕ್ಷಣಗಳಿಗೆ ಹೆಸರುವಾಸಿಯಾಗಿದೆ. ಪಪ್ಪಾಯಿಯು ಪಪ್ಪೈನ್ ಅನ್ನು ಹೊಂದಿರುತ್ತದೆ, ಇದು ಕೂದಲು ಕಿರುಚೀಲಗಳನ್ನು ಒಡೆಯುವ ಮತ್ತು ಕೂದಲಿನ ಬೆಳವಣಿಗೆಯನ್ನು ಕಡಿಮೆ ಮಾಡುವ ಕಿಣ್ವವಾಗಿದೆ.

### ಸಾಮಾಜಿಕ ಕಳಕಳಿ



ಹೆಚ್.ಎಸ್ .ಪ್ರತಿಮಾ ಹಾಸನ್
ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ

## ದಿನಕ್ಕೊಂದು ಮುಕ್ತಕ :78



• ಉದಯವಾಹಿನಿ, ವಿಶೇಷ

ಜೋಳದಲಿ ರೊಟ್ಟಿಯನು ಮಾಡತಲಿ ಸೇವಿಸುತ
ಜೋಳಿಗೆಯ ಒಡ್ಡುತಲಿ ಬರುತಿರಲೆಲ
ಕೋಳಿಯದು ಮುಂಜಾನೆ ಕೂಗುತಿರೆ ನೋಡುತಲಿ
ಗೋಳವದು ಭೂಮಿಯೂ ಲಕ್ಷ್ಮಿದೇವಿ......

ಜೋಳದಲ್ಲಿ ಹಿಟ್ಟಿನಿಂದ ರೊಟ್ಟಿಯನ್ನು ಮಾಡುತ್ತಾರೆ ಎಂಬುದು ಎಲ್ಲರಿಗೂ ತಿಳಿದಿದೆ. ಅದನ್ನು ಸವಿಯುವಾಗ ರುಚಿಯನ್ನು ನೀಡಿ ದೇಹಕ್ಕೆ ಶಕ್ತಿಯನ್ನು ನೀಡುತ್ತದೆ. ಅದೇ ರೀತಿ ಜೋಳಿಗೆಯನ್ನು ಒಡ್ಡುತ್ತಾ ಜೋಗಿಯೂ ಎಲ್ಲರ ಮನೆಯ ಮುಂದೆ ಬಂದು ದಾನ ಕೇಳುವುದು ಹಿಂದಿನಿಂದ ಬಂದಂತಹ ಪ್ರತೀತಿಯಾಗಿದೆ. ಮುಂಜಾನೆ ಪೋಲಿಯೋ ಕೂಗಿ ಬೆಳಗಾಗಿದೆ ಎಂದು ಸೂಚಿಸುವುದನ್ನು ಸರ್ವೇಸಾಮಾನ್ಯವಾಗಿ ಎಲ್ಲರೂ ತಿಳಿದಿರುತ್ತಾರೆ. ಅದೇ ರೀತಿ ಭೂಮಿಯು ಸಹ ಗೋಳವಾಗಿದೆ ಎಂಬುದು ಎಲ್ಲರಿಗೂ ತಿಳಿದಿದೆ.

# ಭಾರತ 'ಹಿಂದೂ ರಾಷ್ಟ್ರ'ವೆಂದು ಘೋಷಿಸಲು ಒಕ್ಕೊರಲಿನ ಆಗ್ರಹ

## ಅಖಿಲ ಭಾರತೀಯ ಧರ್ಮಸಂಘ, ಹಿಂದೂ ಜನಜಾಗೃತಿ ಸಮಿತಿಯಿಂದ 'ಹಿಂದೂ ರಾಷ್ಟ್ರ ಅಧಿವೇಶನ' ಸಂಪನ್ನ

• ಉದಯವಾಹಿನಿ ಪ್ರಯಾಗರಾಜ

ಭಾರತದ ಸಂಸ್ಕೃತಿ, ಪರಂಪರೆ, ಧರ್ಮದ ರಕ್ಷಣೆಗಾಗಿ ಮತ್ತು ಭಾರತದ ಉಜ್ವಲ ಭವಿಷ್ಯಕ್ಕಾಗಿ, ಭಾರತವನ್ನು ಧರ್ಮಾಧಾರಿತ ಹಿಂದೂ ರಾಷ್ಟ್ರವೆಂದು ಘೋಷಿಸಬೇಕೆಂದು ಮಹಾಕುಂಭಮೇಳದಲ್ಲಿ ಆಯೋಜಿಸಲಾಗಿದ್ದ 'ಹಿಂದೂ ರಾಷ್ಟ್ರ ಅಧಿವೇಶನದಲ್ಲಿ ಪಾಲ್ಗೊಂಡಿದ್ದ ಸಂತ-ಮಹಂತರು, ಹಿಂದೂ ಸಂಘಟನೆಗಳು ಒಟ್ಟಾಗಿ ಆಗ್ರಹಿಸಿದ್ದಾರೆ. ಅಖಿಲ ಭಾರತೀಯ ಧರ್ಮಸಂಘ ಮತ್ತು ಹಿಂದೂ ಜನಜಾಗೃತಿ ಸಮಿತಿ ಜಂಟಿ ಆಶ್ರಯದಲ್ಲಿ 31 ಜನವರಿಯಂದು ಈ ಅಧಿವೇಶನ ಪ್ರಯಾಗರಾಜ್‌ನ ಮೋರಿ-ಸಂಗಮ್ ಲೋವರ್ ಮಾರ್ಗ್ ಚೌರಾಹದಲ್ಲಿ ನಡೆಯಿತು.

ಈ ಅಧಿವೇಶನದಲ್ಲಿ ಬಾಂಗ್ಲಾದೇಶ ಮತ್ತು ಪಾಕಿಸ್ತಾನದ ಹಿಂದೂಗಳ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳು, ಬಾಂಗ್ಲಾದೇಶ-ರೋಹಿಂಗ್ಯಾ ನುಸುಳುಕೋರರಿಂದ ಭಾರತದ ಆಂತರಿಕ ಭದ್ರತೆಗೆ ಅಪಾಯ, ಕಾಶಿ-ಮಥುರಾ ಮತ್ತು ಇತರ ದೇವಾಲಯಗಳ ಮುಕ್ತಿಗಾಗಿ ಕಾನೂನು ಹೋರಾಟ, ಹಿಂದೂ ದೇವಾಲಯಗಳ ಸರ್ಕಾರೀಕರಣ, ಧಾರ್ಮಿಕ ಹಬ್ಬಗಳ ಸಂದರ್ಭದಲ್ಲಿ ಹಿಂದೂಗಳ ಮೇಲಾಗುತ್ತಿರುವ ದಾಳಿ, ಲವ್ ಜಿಹಾದ್, ಮತಾಂತರ, ಭಯೋತ್ಪಾದನೆ, ಗಲಭೆ ಮುಂತಾದ ಸಮಸ್ಯೆಗಳ ಬಗ್ಗೆ ಗಂಭೀರ ಚರ್ಚೆ ನಡೆಯಿತು. ಸಂತರು ಮತ್ತು ಧರ್ಮನಿಷ್ಠ ಹಿಂದೂ ಸಂಘಟನೆಗಳು ಹಿಂದೂ ಸಮಾಜವನ್ನು ಒಟ್ಟುಗೂಡಿಸುವ ಅಗತ್ಯವನ್ನು ಒತ್ತಿಹೇಳಿದರು ಮತ್ತು ಹಿಂದೂ ರಾಷ್ಟ್ರವನ್ನು ಸ್ಥಾಪಿಸುವ ಪ್ರಯತ್ನಗಳನ್ನು ವೇಗಗೊಳಿಸುವ ಅಗತ್ಯವನ್ನು ತಿಳಿಸಿದರು.


ಉದಯವಾಹಿನಿ ಚಿತ್ರ

ಭಾರತದಲ್ಲಿ ಹಿಂದೂ ರಾಷ್ಟ್ರದ ಸ್ಥಾಪನೆ

ಹಿಂದೂ ಜನಜಾಗೃತಿ ಸಮಿತಿಯ ರಾಷ್ಟ್ರೀಯ ಮಾರ್ಗದರ್ಶಕರಾದ ಸದ್ಗುರು (ಡಾ.) ಚಾರುದತ್ತ ಪಿಂಗಳೆ ಇವರು ಮಾತನಾಡಿ, ''ಸಂವಿಧಾನದಿಂದ 'ಜಾತ್ಯತೀತ' ಎಂಬ ಪದವನ್ನು ತೆಗೆದುಹಾಕುವ ಮೂಲಕ ಭಾರತವನ್ನು ಹಿಂದೂ ರಾಷ್ಟ್ರವೆಂದು ಘೋಷಿಸಬೇಕು. ಅಲ್ಲದೆ, ಜನಸಂಖ್ಯೆ ನಿಯಂತ್ರಣ, ಮತಾಂತರ ನಿಷೇಧ, ಗೋಹತ್ಯೆ ನಿಷೇಧದಂತಹ ಕಾನೂನುಗಳನ್ನು ಜಾರಿಗೊಳಿಸಬೇಕು. ಸಂವಿಧಾನದಲ್ಲಿ ಅಲ್ಪಸಂಖ್ಯಾತರಿಗೆ ನೀಡಿರುವ ವಿಶೇಷ ಅವಕಾಶಗಳನ್ನು ರದ್ದುಪಡಿಸಬೇಕು. ಇತರ ಧರ್ಮ ಆಧಾರಿತ ದೇಶಗಳಲ್ಲಿ, ಬಹುಸಂಖ್ಯಾತರ ಹಿತಾಸಕ್ತಿಗಳಿಗೆ ಆದ್ಯತೆ ನೀಡಲಾಗುತ್ತದೆ, ಆದರೆ ಭಾರತದಲ್ಲಿ, ಹಿಂದೂಗಳು ಬಹುಸಂಖ್ಯಾತರಾಗಿದ್ದರೂ, ಅವರ ಹಿತಾಸಕ್ತಿಗಳನ್ನು ನಿರ್ಲಕ್ಷಿಸಲಾಗಿದೆ. ಹಿಂದೂಗಳಿಗೆ ಅನ್ಯಾಯವಾಗುತ್ತಿದ್ದು ತಾರತಮ್ಯ ಮಾಡಲಾಗುತ್ತಿದೆ. ಆದ್ದರಿಂದ, ಭಾರತದಲ್ಲಿ ಹಿಂದೂ ರಾಷ್ಟ್ರದ ಸ್ಥಾಪನೆಯು ಆವಶ್ಯಕವಾಗಿದೆ. ಹಿಂದೂ ರಾಷ್ಟ್ರದ ಸಿದ್ಧಾಂತವು 'ವಸುಧೈವ ಕುಟುಂಬಕಮ್' ಅಂದರೆ ಎಲ್ಲರನ್ನೂ ಒಳಗೊಳ್ಳುತ್ತದೆ, ಇದು ಇಡೀ ಮನುಕುಲದ ಕಲ್ಯಾಣ ಮಾಡುತ್ತದೆ ಎಂದರು.

ಹಿಂದೂ ಜನಜಾಗೃತಿ ಸಮಿತಿಯ ಪೂರ್ವೋತ್ತರ ಭಾರತದ ಮಾರ್ಗದರ್ಶಕರಾದ ಸದ್ಗುರು ನೀಲೇಶ ಸಿಂಗಬಾಳ ಇವರು ಮಾತನಾಡಿ, ನಮ್ಮ ಹಿಂದೂ ಸಮಾಜದ ಮೇಲೆ ಶತಮಾನಗಳಿಂದ ಆಕ್ರಮಣಗಳು ನಡೆಯುತ್ತಿವೆ, ಆದರೆ ಈಗ ಪುನರುಜ್ಜೀವನದ ಸಮಯ ಬಂದಿದೆ.

> ಮಂದಿರ ಮಹಾಸಂಘದ ರಾಷ್ಟ್ರೀಯ ಸಂಘಟಕ ಶ್ರೀ. ಸುನೀಲ್ ಘನವಟ ಇವರು ಮಾತನಾಡಿ, ''ಭಾರತದ ಜಾತ್ಯತೀತ ಸರ್ಕಾರಗಳು ಕೇವಲ ಹಿಂದೂ ದೇವಾಲಯಗಳನ್ನು ಸ್ವಾಧೀನಪಡಿಸಿಕೊಳ್ಳುತ್ತದೆ ಮತ್ತು ಅದರ ಆಸ್ತಿಯನ್ನು ಕಬಳಿಸಲು ಪ್ರಯತ್ನಿಸುತ್ತದೆ, ಆದರೆ ಮಸೀದಿ ಅಥವಾ ಚರ್ಚ್‌ಗಳನ್ನು ಸ್ವಾಧೀನಪಡಿಸಿಕೊಳ್ಳುವುದಿಲ್ಲ. ಆದ್ದರಿಂದ, ಎಲ್ಲಾ ಹಿಂದೂಗಳು ಒಗ್ಗೂಡಿ ದೇವಾಲಯಗಳನ್ನು ಸರ್ಕಾರದ ನಿಯಂತ್ರಣದಿಂದ ಮುಕ್ತಗೊಳಿಸಬೇಕು. ಆಗ ಮಾತ್ರ ನಮ್ಮ ಸಂಸ್ಕೃತಿ ರಕ್ಷಣೆಯಾಗುತ್ತದೆ. ಅಲ್ಲದೆ, ದೇವಸ್ಥಾನದ ಸಂಪತ್ತನ್ನು ಧಾರ್ಮಿಕ ಉದ್ದೇಶಗಳಿಗೆ ಮಾತ್ರ ಬಳಸಬೇಕು ಎಂದರು.

ಕಾಶಿ-ಮಥುರಾ ಮುಕ್ತಿಯ ಬೇಡಿಕೆಯು ವೇಗವನ್ನು ಪಡೆಯುತ್ತಿದೆ. ಸಂಭಾಲ್‌ನಲ್ಲಿ ಧ್ವಂಸಗೊಂಡಿರುವ ಹಿಂದೂ ದೇವಾಲಯಗಳ ಜೀರ್ಣೋದ್ಧಾರಕ್ಕೆ ಬೇಡಿಕೆ ಇದೆ, ಇದು ನ್ಯಾಯಯುತ ಬೇಡಿಕೆಯಾಗಿದೆ. ಈಗ ಹಿಂದೂಗಳು ಲವ್ ಜಿಹಾದ್ ಜೊತೆಗೆ ಲ್ಯಾಂಡ್ ಜಿಹಾದ್ ವಿರುದ್ಧ ಹೋರಾಡಬೇಕಾಗಿದೆ ಎಂದರು.

# ಭೂಮಿ ಲೀಜ್ ಪಡೆಯದೆ ಅಕ್ರಮ ಗಣಿಗಾರಿಕೆ: ಅಧಿಕಾರಿಗಳ ಜಾಣಕುರುಡು

● ಮೈನ್ಸ್ ಅಧಿಕಾರಿಗಳ ಮತ್ತು ತಾಲ್ಲೂಕಾಡಳಿತ ನಿರ್ಲಕ್ಷ್ಯ: ಅಕ್ರಮ ಸವಳು ಸುದ್ಧ ಮಣ್ಣಿನ ಗಣಿಗಾರಿಕೆ

**ಉದಯವಾಹಿನಿ ವಿಶೇಷ ವರದಿ**

• ಮಹೇಬೂಬಶಾ ಅಣವಾರ
• ಉದಯವಾಹಿನಿ ಚಿಂಚೋಳಿ


ಉದಯವಾಹಿನಿ ಚಿತ್ರ

ಚಿಂಚೋಳಿ ಮತ್ತು ಕಾಳಗಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಅಕ್ರಮ ಸವಳು ಸುದ್ಧ ಮಣ್ಣು ಎಗ್ಗಿಲದೇ ಸಾಗುತ್ತಿದೆ ಎಂದು ಸಾರ್ವಜನಿಕರಿಂದ ಆರೋಪಗಳು ಬಲುವಾಗಿ ಕೇಳಿ ಬರುತ್ತಿವೆ. ತಾಲ್ಲೂಕಿನ ಸುಲೇಪೇಟೆ, ಯಾಕಾಪೂರ, ಕೆರೋಳ್ಳಿ, ಹೊಡೆ ಬೀರನಳ್ಳಿ ಹಾಗೂ ಕಾಳಗಿ ತಾಲ್ಲೂಕಿನ ಗಡಿಕೇಶ್ವಾರ, ರಾಮನಗರ ತಾಂಡಾ, ಕೋರವಿ, ಕುಡಹಳ್ಳಿ, ಸುಗೂರ, ವಜೀರಗಾಂವ ಇತರೆ ತಾಂಡ ಹಾಗೂ ಗ್ರಾಮಗಳಲ್ಲಿ ಎಗ್ಗಿಲ್ಲದೆ ಅಕ್ರಮವಾಗಿ ಸವಳು ಸುದ್ಧ ಮಣ್ಣಿನ ಗಣಿಗಾರಿಕೆ ನಡೆಸುತ್ತಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಸೇರಬೇಕಾದ ಲಕ್ಷಾಂತರ ರೂಪಾಯಿ ಸರ್ಕಾರ ನಷ್ಟ ಸಂಭವಿಸುತ್ತಿದೆ. ಎಷ್ಟು ಜನರು ಭೂಮಿ ಲೀಜ್ ಪಡೆದಿದ್ದಾರೆ ಎಂಬ ನಿಖರ ಮಾಹಿತಿ ದೊರುಕುತ್ತಿಲ್ಲ, ಕೆಲವರು ಒಂದು ಕಡೆ ಲೀಜ್ ಪಡೆದು ಸುಮಾರು ಕಡೆ ಅಕ್ರಮ ಗಣಿಗಾರಿಕೆ ಮಾಡಿದರೆ ಇನ್ನೂ ಕೆಲವರು ಯಾವುದೇ ಭೂಮಿ ಲೀಜ್ ಪಡೆಯದೆ ಅಕ್ರಮವಾಗಿ ಬೆಳಿಗ್ಗೆ ಸಾಯಂಕಾಲ ರಾತ್ರಿಯಲ್ಲಿ ಸಾಲು ಸಾಲು ಟಿಪ್ಪರ್ ಲಾರಿ ಮೂಲಕ ಓವರ್ ಲೋಡ್ ತುಂಬಿಕೊಂಡು ಹೊಗುವುರಿಂದ ಸವಳು ಮಣ್ಣು ಟಿಪ್ಪರ ದಿಂದ ಡಾಂಬರಿಕರಣ ರಸ್ತೆಯ ಮೇಲೆ ಬೀಳುತ್ತಿದೆ, ಇದರಿಂದ ಅನೇಕ ವಾಹನ ಸವಾರರು ಕಳಗಡೆ ಬಿದ್ದು ಕೈಕಾಲು ಮುರಿದುಕೊಂಡಿದ ಉದ್ಧಾರಣೆ ಕೂಡಯಿವೆ. ಆರ್.ಟಿ.ಓ.ಅಧಿಕಾರಿಗಳು ನಾಮಕೆವಾಸ್ತೆ ತಿಂಗಳಿಗೊಮ್ಮೆ ಅವರಿಗೆ ಬೇಕಾಗುವವರಿಗೆ ಮಾತ್ರ ಭೇಟಿ ನೀಡಿ ಹೋಗುತ್ತಾರೆ, ಅಕ್ರಮ ಸವಳುದಿಂದ ಅನೇಕರಿಗೆ ತಲೆ ನೋವಾಗಿದೆ ಅಕ್ರಮವಾಗಿ ತಾಲ್ಲೂಕಿನಾದ್ಯಂತ ನಡೆಯುತ್ತಿರುವ ಸವಳು ಸುದ್ಧ ಮಣ್ಣಿನ ಗಣಿಗಾರಿಕೆಯನ್ನು ತಾಲ್ಲೂಕಾಡಳಿತ, ಮೈನ್ಸ್ ಇಲಾಖೆ, ಪೋಲಿಸ್ ಇಲಾಖೆ, ಆರ್.ಟಿ.ಓ ಇಲಾಖೆ ತಡೆಗಟ್ಟಬೇಕು, ಇಲ್ಲದಿದ್ದರೆ ಅಕ್ರಮವಾಗಿ ನಡೆಯುತ್ತಿರುವ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಬೇಕು ಗೊತ್ತಾಗುತ್ತದೆ.

ಸ್ಥಳಕ್ಕೆ ಭೇಟಿನೀಡದೆ ಯಾವ ಆಧಾರದ ಮೇಲೆ ಅಧಿಕಾರಿಗಳು ಲೀಜ್ ನೀಡಿದ್ದಾರೆ ಎಂಬುವುದು ಯಕ್ಷಪ್ರೇಶ್ನೆಯಾಗಿದೆ ಫಲವತ್ತಾದ ಭೂಮಿಯಲ್ಲಿ ಸವಳು ಸುದ್ಧ ಮಣ್ಣು ಅಗೆಯುವುದು ಹೇಗೆ ಪರವಾನಿಗೆ ನೀಡುತ್ತಾರೆ ಎಂಬುವುದೆ ಸಾರ್ವಜನಿಕರ ಪ್ರೇಶ್ನೆಯಾಗಿದೆ. ಈಗಾಲಾದರೂ ಅಕ್ರಮವಾಗಿ ಗಣಿಗಾರಿಗೆ ನಡೆಸುತ್ತಿರುವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುತ್ತಾರೆಯೋ ಇಲ್ಲವೋ ಎಂಬುದನ್ನು ಕಾದುನೋಡಬೇಕಾಗಿದೆ.

**ಸರ್ಕಾರದ ಬೊಕ್ಕಸಕ್ಕೆ ನಷ್ಟ**



ಕಾಳಗಿ ತಾಲ್ಲೂಕಿನಲ್ಲಿ ಸವಳು (ಸುದ್ದ) ಲೀಜ್ ಪಡೆದವರು ಕನಿಷ್ಠ 15ರಿಂದ 20ಜನ ಪಡೆದುಕೊಂಡಿದ್ದಾರೆ, ಸವಳು ಅಕ್ರಮ ಸಾಗಾಣಿಕೆ ತಡೆಯುವ ಕೆಲಸ ಕೂಡ ಮೈನ್ಸ್ ಇಲಾಖೆಯವರು ಮಾಡಬೇಕು, ಸವಳು (ಸುದ್ದ) ಲೀಜ್ ಪಡೆಯಲು ಮೈನ್ಸ್ ಇಲಾಖೆಗೆ ಅರ್ಜಿ ಸಲ್ಲಿಕೆ ಮಾಡುತ್ತಾರೆ ಮೈನ್ಸ್ ಇಲಾಖೆಯವರು ತಹಶೀಲ್ ಕಛೇರಿಗೆ ಪತ್ರ ಬರೆದು ವಿವರ ಕೇಳುತ್ತಾರೆ ನಾವು ಭೂಮಿಯನ್ನು ಸರ್ವೆ ನಡೆಸಿ ಸವಳು ತೆಗೆಯಲು ಅರ್ಹವಿದೆಯೋ ಇಲ್ಲಾವೋ ಎಂಬುವುದು ಪರಿಶೀಲಿಸಿ ವಿಎ, ಆರ್,ಐ ಮತ್ತು ತಹಸೀಲ್ದಾರ್ ಕೂಡ ಸ್ಥಳಕ್ಕೆ ಹೋಗಿ ಪರಿಶೀಲಿಸಿ ವರದಿ ಮೈನ್ಸ್ ಇಲಾಖೆಯವರಿಗೆ ನೀಡುತ್ತೇವೆ ಫಲವತ್ತಾದ ಭೂಮಿಗೆ ಪರವಾನಿಗೆ ನೀಡಲು ಬರುವುದಿಲ್ಲ **- ಘಾಮಾವತಿ ರಾಠೋಡ್, ತಹಶೀಲ್ದಾರ್ ಕಾಳಗಿ.**



ಚಿಂಚೋಳಿ ತಾಲ್ಲೂಕಿನಲ್ಲಿ ಸವಳು (ಸುದ್ದ)ಮಣ್ಣಿನ ಲೀಜ್ ಪಡೆದಿದ್ದು ತಹಶೀಲ್ ಕಛೇರಿಯಲ್ಲಿ ಮಾಹಿತಿ ಸಿಗಲ್ಲ, ಗಣಿ ಮತ್ತು ಭೂ ಇಲಾಖೆ ಕಛೇರಿಯಲ್ಲಿ ಮಾಹಿತಿ ಸಿಗುತ್ತೆ, ನಮಗೂ ಸವಳು ಮಣ್ಣಿನ ಪರವಾನಿಗೆಗೂ ಸಂಬಂಧವಿಲ್ಲ. **- ಸುಬ್ಬಣ್ಣ ಜಮಖಂಡಿ, ತಹಸೀಲ್ದಾರ್ ಚಿಂಚೋಳಿ.**

---

## ಬಸ್ ನಿಲುಗಡೆ ಸ್ಥಳ ಬದಲಾವಣೆಗೆ ಆಕ್ಷೇಪ

• ಉದಯವಾಹಿನಿ ಕೊಪ್ಪ

ಬಸ್ ನಿಲ್ದಾಣದಲ್ಲಿ ಎರಡು ದಶಕಗಳ ಹಿಂದೆ ನಿಗದಿಪಡಿಸಿದ್ದ ಬಸ್ ನಿಲುಗಡೆ ಸ್ಥಳವನ್ನು (ಪ್ಲಾಟ್ ಫಾರಂ) ಏಕಾಏಕಿ ಬದಲಾವಣೆ ಮಾಡಿರುವುದಕ್ಕೆ ಸಾರ್ವಜನಿಕರಿಂದ ಆಕ್ಷೇಪ ವ್ಯಕ್ತವಾಗದೆ. ಪಟ್ಟಣ ಪಂಚಾಯಿತಿ ಅಧಿಕಾರಿಗಳು ಖಾಸಗಿ ಸಹಭಾಗಿತ್ವದಲ್ಲಿ ಎರಡು ದಿನಗಳ ಹಿಂದೆ ಊರುಗಳ ಹೆಸರಿನ ಹೊಸದಾದ ನಾಮಫಲಕ ಅಳವಡಿಸಿದ್ದಾರೆ.

ಮೊದಲು ನಿಗದಿಪಡಿಸಿದ್ದ ಬಸ್ ನಿಲುಗಡೆ ಸ್ಥಳವನ್ನು ಈಗ ಬದಲಿಸಲಾಗಿದೆ. ಇದರಿಂದ ತೊಂದರೆ ಅನುಭವಿಸುವಂತಾಗಿದೆ ಎಂದು ಪ್ರಯಾಣಿಕರು ದೂರಿದರು. ಬಸ್ ನಿಲುಗಡೆ ಸ್ಥಳವನ್ನು ಬದಲಾಯಿಸಿರುವುದಕ್ಕೆ ಪಟ್ಟಣ ಪಂಚಾಯಿತಿಯು ಸಮರ್ಪಕ ಕಾರಣ ಕೊಟ್ಟಿಲ್ಲ. ಬಸ್ ನಿಲ್ದಾಣ ವ್ಯಾಪ್ತಿಯ ವಾರ್ಡ್ ಸದಸ್ಯರ ಗಮನಕ್ಕೂ ತಂದಿಲ್ಲ. ಏಕಪಕ್ಷೀಯವಾಗಿ ನಿರ್ಧಾರ ಕೈಗೊಂಡು, ರಾತ್ರೋರಾತ್ರಿ ನಾಮಫಲಕ ಬದಲಾವಣೆ ಮಾಡಲಾಗಿದೆ. ಸಂಬಂಧಿಸಿದ ವಾರ್ಡ್ ಸದಸ್ಯರ ಆಕ್ಷೇಪದ ಬಳಿಕ ಪಟ್ಟಣ ಪಂಚಾಯಿತಿಯಲ್ಲಿ ನಿರ್ಣಯ ಅಂಗೀಕರಿಸಲು ತುರ್ತು ಸಭೆ ನಡೆಸಲಾಗಿದೆ ಎಂದು ಆರೋಪಿಸಿದರು. ಬಸ್ ನಿಲ್ದಾಣ ಮಳೆಗಾಲದಲ್ಲಿ ಚಾವಣಿ ಸೋರುತ್ತಿದೆ. ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಇಂತಹ ಹಲವಾರು ಮೂಲ ಸೌಕರ್ಯಗಳ ಕೊರತೆ ನಿವಾರಿಸುವ ಮೊದಲೇ ಬಸ್ ನಿಲುಗಡೆ ಸ್ಥಳವನ್ನು ಬದಲಾಯಿಸಲಾಗಿದೆ. ಶಿವಮೊಗ್ಗ, ಕಡೆಗೆ ಹೆಚ್ಚು ಬಸ್‌ಗಳು ಸಂಚರಿಸುತ್ತಿದ್ದು, ಅವುಗಳಿಗೆ ಪ್ಲಾಟ್ ಫಾರಂ ನಂಬರ್ ಒಂದನ್ನು ನಿಗದಿಪಡಿಸಲಾಗಿತ್ತು. ಇದು ಪ್ರಯಾಣಿಕರಿಗೆ ಅನುಕೂಲವಾಗಿತ್ತು. ಇದೀಗ ನಂಬರ್ 6ಕ್ಕೆ ಸ್ಥಳಾಂತರಿಸಲಾಗಿದೆ.

ಬಸ್ ನಿಲ್ದಾಣದಲ್ಲಿ ಖಾಸಗಿ ವಾಹನಗಳನ್ನು ನಿಲುಗಡೆ ಮಾಡಿಸುತ್ತಿದ್ದು. ಮತ್ತಷ್ಟು ಇಕ್ಕಟ್ಟಿನ ಪರಿಸ್ಥಿತಿಗೆ ಕಾರಣವಾಗಿದೆ ಎಂದು ದೂರಿದರು.


ಉದಯವಾಹಿನಿ ಚಿತ್ರ

ಎಚ್.ಎಸ್.ಗಣಪತಿ ಗುರುಪುರ ನಿವಾಸಿ ಕೊಪ್ಪಪಟ್ಟಣ ಪಂಚಾಯಿತಿ ನಿರ್ಧಾರಗಳು ಜನಪರವಾಗಿರಲಿ. ಬಸ್ ನಿಲ್ದಾಣದಿಂದ ಸಾರ್ವಜನಿಕರಿಗೆ ಅನುಕೂಲವಾಗಬೇಕೆ ಹೊರತು ತೊಂದರೆ ಆಗಬಾರದು ಸುನಿಲಕುಮಾರ್ ಎಸ್. ಬ್ರಹ್ಮಶ್ರೀ ಕಾಫಿವರ್ಕ್ಸ್ ಕೊಪ್ಪಬಸ್ ನಿಲ್ದಾಣದ ಪ್ಲಾಟ್ ಫಾರಂ ಏಕಾಏಕಿ ಬದಲಾವಣೆ ಸರಿಯಲ್ಲ. ತಕ್ಷಣವೇ ಪಟ್ಟಣ ಪಂಚಾತಿ ಇದನ್ನು ಸರಿಪಡಿಸಲಿ **-ಪ್ರಕಾಶ್ ಸಿ.ಎಚ್, ವರ್ತಕ ಮತ್ತು ಉಪನ್ಯಾಸಕ ಕೊಪ್ಪ.**

ಈ ಬಗ್ಗೆ ಸಾರ್ವಜನಿಕರು ಪಟ್ಟಣ ಪಂಚಾಯಿತಿ ನಿರ್ಧಾರಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದು ಮೊದಲಿನಂತೆಯೇ ಬಸ್ ನಿಲುಗಡೆಗೆ ಅವಕಾಶ ನೀಡಬೇಕು. ಸ್ಥಳೀಯ ಶಾಸಕರು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು. ಇಂತಹ ನಿರ್ಧಾರ ಕೈಗೊಳ್ಳುವ ಮುನ್ನ ಸಾಧಕ ಭಾದಕಗಳನ್ನು ಚರ್ಚಿಸಬೇಕಿತ್ತು' ಎಂದು ಸ್ಥಳೀಯರು ಪಂಚಾಯಿತಿಗೆ ಪತ್ರವನ್ನೂ ಬರೆದಿದ್ದಾರೆ.

---

## ಮಾರುಕಟ್ಟೆಗೆ ಹಸಿ ಕಡಲೆ, ನಾಗಪುರ ಕಿತ್ತಳೆ ಲಗ್ಗೆ

• ಉದಯವಾಹಿನಿ ಕಡೂರು

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಚಳಿ ಹೆಚ್ಚಾಗಿದೆ. ಚಳಿಗಾಲದ ಬೆನ್ನಲ್ಲೇ ಮಾರುಕಟ್ಟೆಗೆ ಬರುವ ಹಸಿ ಕಡಲೆ (ಕಡಲೆ ಗಿಡ) ಮತ್ತು ಕಿತ್ತಳೆ ಹಣ್ಣಿಗೆ ಈ ಬಾರಿ ಹೆಚ್ಚಿನ ಬೇಡಿಕೆ ಇದೆ. ದಶಕಗಳ ಹಿಂದೆ ಕಡೂರು ತಾಲ್ಲೂಕಿನ ಎಮ್ಮೆದೊಡ್ಡಿಯ ಕಿತ್ತಳೆ ಹಣ್ಣು ರಾಜ್ಯದಾದ್ಯಂತ ಪ್ರಸಿದ್ಧಿಯಾಗಿತ್ತು. ಈಗ ತಾಲ್ಲೂಕಿನಲ್ಲಿ ಎಲ್ಲಿಯೂ ಕಿತ್ತಳೆ ಬೆಳೆಯುತ್ತಿಲ್ಲ. ಮಹಾರಾಷ್ಟ್ರದ ನಾಗಪುರದಿಂದ ಬರುವ ಕಿತ್ತಳೆ ಹಣ್ಣು ತಾಲ್ಲೂಕಿನಲ್ಲಿ ಮಾರಾಟವಾಗುತ್ತದೆ.

ಕೊಡಗಿನಲ್ಲಿ ಬೆಳೆಯುವ ಕಿತ್ತಳೆ ಹಣ್ಣು ಸಿಹಿಯಾಗಿರುತ್ತದೆ. ಆದರೆ, ನಾಗಪುರದ ಕಿತ್ತಳೆ ಹುಳಿ–ಸಿಹಿ ಮಿಶ್ರಿತವಾಗಿರುವುದರಿಂದ ಜನರು ಹೆಚ್ಚಾಗಿ ಅದನ್ನೇ ಇಷ್ಟಪಟ್ಟು ಖರೀದಿಸುತ್ತಾರೆ.

ಪಟ್ಟಣದ ಹಣ್ಣಿನ ಅಂಗಡಿಗಳಲ್ಲಿ ಒಂದು ಕೆಜಿ ಕಿತ್ತಳೆ 80 ರಿಂದ 100 ದರದಲ್ಲಿ ಸಿಗುತ್ತಿದೆ. ಹಾಸನ ಮತ್ತಿತರ ಕಡೆಯಿಂದ ಬರುವ ವ್ಯಾಪಾರಿಗಳು ವಾಹನದಲ್ಲಿ ಕಿತ್ತಳೆ ತುಂಬಿಕೊಂಡು ಬಂದು ರಸ್ತೆಯಂಚಿನಲ್ಲಿ ಒಂದೂವರೆ ಕೆ.ಜಿ ಹಣ್ಣನ್ನು 100 ದರದಲ್ಲಿ ಮಾರುತ್ತಾರೆ. ಸಂತೆಯಲ್ಲಿ 1 ಕೆ.ಜಿ ಕಿತ್ತಳೆ ಹಣ್ಣಿಗೆ 80 ದರವಿತ್ತು. ಕಿತ್ತಳೆ ಹಣ್ಣನ್ನು ನಾಗಪುರದಿಂದ ತರಿಸುತ್ತೇವೆ. ಭಾರಿ ಅಲ್ಲದಿದ್ದರೂ ತೃಪ್ತಿಕರ ಲಾಭವಿದೆ' ಎನ್ನುತ್ತಾರೆ ಹಣ್ಣಿನ ವ್ಯಾಪಾರಿ ರಾಮಚಂದ್ರ. ಹಸಿ ಕಡಲೆ ಕೂಡ ಹೆಚ್ಚಾಗಿ ಮಾರಾಟವಾಗುತ್ತಿದೆ. ವ್ಯಾಪಾರಿಗಳು ಒಂದು ಕೆಜಿ ಕಡಲೆ ಗಿಡವನ್ನು ರೈತರಿಂದ ಸರಾಸರಿ 30 ದರದಲ್ಲಿ ಖರೀದಿಸಿ, ಅದನ್ನು 150 ದರದಲ್ಲಿ ಮಾರಾಟ ಮಾಡುತ್ತಾರೆ. ಕಡೂರು ತಾಲ್ಲೂಕಿನಲ್ಲಿ 500 ಹೆಕ್ಟೇರ್‌ಗೂ ಹೆಚ್ಚಿನ ಪ್ರದೇಶದಲ್ಲಿ ಕಡಲೆ ಬೆಳೆಯಲಾಗಿದೆ. ರೈತರ ಬಳಿ ವ್ಯಾಪಾರಸ್ಥರು ಒಂದು ಎಕರೆಗೆ ಇಂತಿಷ್ಟು ಅಂತ ಮೊತ್ತ ನಿಗದಿ ಮಾಡಿ ಇಡೀ ಬೆಳೆಯನ್ನೂ ಖರೀದಿಸುತ್ತಾರೆ.


ಉದಯವಾಹಿನಿ ಚಿತ್ರ

---

## ಬೆಂಗಳೂರು-ಮಂಗಳೂರು ಬಸ್ಸು ತಡೆದು ಮಾರಕಾಸ್ತ್ರದಿಂದ ಹಲ್ಲೆ: ಪುಡಿ ರೌಡಿಯ ಕಾಲಿಗೆ ಗುಂಡೇಟು, ಅರೆಸ್ಟ್

• ಉದಯವಾಹಿನಿ ಹಾಸನ

ಬೆಂಗಳೂರಿನಿಂದ ಮಂಗಳೂರಿಗೆ ತೆರಳುತ್ತಿದ್ದ ಖಾಸಗಿ ಬಸ್ ತಡೆದು ಲಾಂಗ್‌ನಿಂದ ಹಲ್ಲೆ ಮಾಡಿ ಅಟ್ಟಹಾಸ ಮೆರೆದಿದ್ದ ಪುಡಿರೌಡಿಯ ಕಾಲಿಗೆ ಪೊಲೀಸರು ಗುಂಡು ಹಾರಿಸಿದ ಘಟನೆ ಶಾಂತಿಗ್ರಾಮ ಬಳಿ ನಡೆದಿದೆ. ಒಂದು ಕೊಲೆ, ಮೂರು ಕೊಲೆ ಯತ್ನ ಪ್ರಕರಣಗಳ ಆರೋಪಿಯಾಗಿರುವ ಮನುವನ್ನು (23) ಬೆಂಗಳೂರಿನಲ್ಲಿ ಬಂಧಿಸಿ ನಗರ ಠಾಣೆ ಪೊಲೀಸರು ಹಾಸನಕ್ಕೆ ಕರೆ ತರುತ್ತಿದ್ದರು. ಈ ವೇಳೆ ಮೂತ್ರ ವಿಸರ್ಜನೆಗೆ ಅನುಮತಿ ನೀಡಬೇಕೆಂದು ಕೇಳಿದ್ದಾನೆ.

ಶಾಂತಿಗ್ರಾಮ ಬಳಿ ರಸ್ತೆ ಬದಿ ಜೀಪ್ ನಿಲ್ಲಿಸಿ ಮೂತ್ರ ವಿಸರ್ಜನೆಗೆ ಅವಕಾಶ ನೀಡಿದಾಗ ಪೊಲೀಸರ ಮೇಲೆಯೇ ಕಲ್ಲಿನಿಂದ ಹಲ್ಲೆ ನಡೆಸಿ ಪರಾರಿಯಾಗಲು ಮನು ಯತ್ನಿಸಿದ್ದಾನೆ.

ಈ ಸಂದರ್ಭದಲ್ಲಿ ಹಾಸನ ನಗರಠಾಣೆ ಇನ್ಸ್‌ಪೆಕ್ಟರ್ ಮೋಹನ್‌ಕೃಷ್ಣ ಆತ್ಮರಕ್ಷಣೆಗಾಗಿ ಆರೋಪಿ ಕಾಲಿಗೆ ಗುಂಡು ಹಾರಿಸಿದ್ದಾರೆ. ನಂತರ ಸಬ್‌ಇನ್ಸ್‌ಪೆಕ್ಟರ್ ಕುಮಾರ್ ಆರೋಪಿಯನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ.

ಬುಧವಾರ ನಸುಕಿನ ಜಾವ 2 ಗಂಟೆಗೆ ಬೈಪಾಸ್ ರಸ್ತೆಯ ದೇವರಾಯಪಟ್ಟಣದ ಬಳಿ ಬೆಂಗಳೂರಿನಿಂದ ಮಂಗಳೂರಿಗೆ ಖಾಸಗಿ ಬಸ್ ಸಂಚರಿಸುತ್ತಿತ್ತು. ಈ ಸಂದರ್ಭದಲ್ಲಿ ಕೆಎ 51 ಎಂವಿ 8912 ನಂಬರ್‌ನ ಸ್ವಿಫ್ಟ್ ಕಾರನ್ನು ಬಸ್ಸಿನ ಮುಂದೆ ಮನು ಅಡ್ಡ ಹಾಕಿ ನಿಲ್ಲಿಸಿದ್ದ. ಕಾರಿನಿಂದ ಇಳಿದ ಬಳಿಕ ಗಲಾಟೆ ಮಾಡಿ ಬಸ್ಸಿನ ಗ್ಲಾಸನ್ನು ಒಡೆದು ಹಾಕಿದ್ದ. ಪುಡಿ ರೌಡಿ ಮನುವಿನ ಹುಚ್ಚಾಟ ಬಸ್ಸಿನಲ್ಲಿದ್ದವರ ಮೊಬೈಲಿನಲ್ಲಿ ಸೆರೆಯಾಗಿತ್ತು.


ಉದಯವಾಹಿನಿ ಚಿತ್ರ

---

## 13ನೇ ಒಣಮೆಣಸಿನಕಾಯಿ ಮೇಳಕ್ಕೆ ಶಾಸಕ ಪ್ರಸಾದ ಅಬ್ಬಯ್ಯ ಚಾಲನೆ

• ಉದಯವಾಹಿನಿ ಹುಬ್ಬಳ್ಳಿ

ಮೆಣಸಿನಕಾಯಿ ಬೆಳೆಗಾರರಿಗೆ ಬಿತ್ತನೆ ಬೀಜ ಆಯ್ಕೆಯಿಂದ ಒಣ ಮೆಣಸಿನಕಾಯಿ ಮಾರಾಟದವರೆಗೆ ತರಬೇತಿ ನೀಡಲು ತರಬೇತಿ ಕೇಂದ್ರದ ಅವಶ್ಯವಿದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಸಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿಯ ಅಧಿಕಾರಿಗಳು ಪ್ರಸ್ತಾವ ಸಲ್ಲಿಸಿದರೆ, ಕೇಂದ್ರ ಆರಂಭಿಸಲು ಕ್ರಮವಹಿಸಲಾಗುವುದು' ಎಂದು ಶಾಸಕ ಪ್ರಸಾದ ಅಬ್ಬಯ್ಯ ಹೇಳಿದರು.

ಇಲ್ಲಿನ ಅಮರಗೋಳದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವಿವಿಧೋದ್ದೇಶ ವಸ್ತು ಪ್ರದರ್ಶನದ ಆವರಣದಲ್ಲಿ ಕರ್ನಾಟಕ ರಾಜ್ಯ ಸಂಬಾರು ಪದಾರ್ಥ ಗಳ ಅಭಿವೃದ್ಧಿ ಮಂಡಳಿ, ತೋಟಗಾರಿಕೆ ಇಲಾಖೆ ವತಿಯಿಂದ ಜ.31ರಿಂದ ಫೆ.2ರ ವರೆಗೆ ಆಯೋಜಿಸಿರುವ 13ನೇ ಒಣಮೆಣಸಿನಕಾಯಿ ಮಾರಾಟ ಮೇಳಕ್ಕೆ ಚಾಲನೆ ನೀಡಿ, ಮಾತನಾಡಿದರು. ಬೆಳೆಗಾರರಿಗೆ ತರಬೇತಿ ನೀಡುವ ಕೇಂದ್ರ ಹಾಗೂ ಬೆಳೆ ಸಂಶೋಧನೆ, ಪ್ರಯೋಗಾಲಯವು ಕೇರಳದ ಕೊಚ್ಚಿಯಲ್ಲಿದೆ. ನಮ್ಮ ರಾಜ್ಯದಲ್ಲಿಲ್ಲ. ರಾಜ್ಯದ ಬೆಳೆಗಾರರಿಗೂ ಬೆಳೆಯ ಬಗ್ಗೆ ಸಂಪೂರ್ಣ ಮಾಹಿತಿಯ ಅವಶ್ಯವಿದೆ.

ಈ ಬಗ್ಗೆ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿ, ಕೇಂದ್ರ ಸ್ಥಾಪನೆಗೆ ಕ್ರಮಕೈಗೊಳ್ಳಲಾಗುವುದು' ಎಂದರು. 'ಏಷ್ಯಾದ ಎರಡನೇ ಅತಿದೊಡ್ಡ ಎಪಿಎಂಸಿ ಇದಾಗಿದ್ದು, ಇಲ್ಲಿಯೇ ರೈಲ್ವೆ ಪಾಯಿಂಟ್ ತೆರೆಯಲು ರಾಜ್ಯ ಹಾಗೂ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿವೆ. ಇದರಿಂದ ಸರಕು ಸಾಗಟಕ್ಕೆ ಅನುಕೂಲವಾಗಲಿದೆ. ಇಲ್ಲಿನ ಎಪಿಎಂಸಿ ಇನ್ನೂ ಹೆಚ್ಚು ಬಲವರ್ಧನೆಯಾಗಲಿದೆ' ಎಂದರು.

ಮೇಳದಲ್ಲಿ 100 ಸ್ಟಾಲ್‌ಗಳನ್ನು ತೆರೆಯಲಾಗಿದ್ದು, ಧಾರವಾಡ ಜಿಲ್ಲೆ ಸೇರಿದಂತೆ ಹಾವೇರಿ, ಗದಗ, ಬಳ್ಳಾರಿ ಜಿಲ್ಲೆಯ ಬೆಳೆಗಾರರು ಭಾಗವಹಿಸಿದ್ದಾರೆ. ವಿವಿಧ ತಳಿಯ ಬ್ಯಾಡಗಿ, ಗುಂಟೂರು, ಡಬ್ಬಿ ಒಣ ಮೆಣಸಿನಕಾಯಿ ಮಾರಾಟವಿದ್ದು ಕನಿಷ್ಠ 250ರಿಂದ 500ರ ತನಕ ಮಾರಾಟ ನಡೆಯುತ್ತಿದೆ.

ಇದರೊಂದಿಗೆ ಒಣ ಮೆಣಸಿನಕಾಯಿ ಪುಡಿ. ಅರಿಶಿನ ಪುಡಿಯ ಮಾರಾಟವೂ ಇದೆ. ಹೇಳಿದರು. ಕಳದ ವರ್ಷ ಸುಮಾರು 447 ಕ್ವಿಂಟಲ್ ಒಣಮೆಣಸಿನ ಕಾಯಿ ಮಾರಾಟ ಮಾಡುವ ಮೂಲಕ 1.37 ಕೋಟಿ ವಹಿ ವಾಟು ನಡೆಸಲಾಗಿತ್ತು. ಈ ಬಾರಿ ಇನ್ನೂ ಹೆಚ್ಚಿನ ವಹಿವಾಟು ನಡೆಯುವ ನಿರೀಕ್ಷೆ ಇದೆ' ಎಂದರು.


ಉದಯವಾಹಿನಿ ಚಿತ್ರ

**ಹೆಚ್ಚಿನ ವಹಿವಾಟು ನಡೆಯುವ ನಿರೀಕ್ಷೆ**

ಬೆಳೆಗಾರರು ಹಾಗೂ ಗ್ರಾಹಕರನ್ನು ಒಂದೇ ವೇದಿಕೆಯಡಿಯಲ್ಲಿ ಸೇರಿಸಲಾಗುತ್ತಿದೆ. ದಲ್ಲಾಳಿಗಳಿಗೆ ಪ್ರವೇಶವಿಲ್ಲ. ಗ್ರಾಹಕರು ನೇರವಾಗಿ ಒಣಮೆಣಸಿನಕಾಯಿ ಖರೀದಿಸಬಹುದು' ಎಂದು ಕರ್ನಾಟಕ ರಾಜ್ಯ ಸಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿಯ ಪ್ರಧಾನ ವ್ಯವಸ್ಥಾಪಕ ಎಚ್.ಆರ್.ನಾಯ್ಕ

---

### ಆಂಧ್ರ ಕೋಟಾದಡಿ ರಾಜ್ಯಸಭೆ ಪ್ರವೇಶಿಸಲು ಶ್ರೀರಾಮುಲು ಪ್ಲಾನ್
## ರೆಡ್ಡಿ ಜತೆಗಿನ ಮುನಿಸನ್ನೇ ಲಾಭವಾಗಿಸಿಕೊಳ್ಳಲು ತಂತ್ರ

• ಉದಯವಾಹಿನಿ ಬಳ್ಳಾರಿ

ಶಾಸಕ ಜನಾರ್ದನ ರೆಡ್ಡಿನ ಜತೆಗಿನ ಮುನಿಸಿನಿಂದ ಸದ್ಯ ಕರ್ನಾಟಕ ರಾಜಕಾರಣದಲ್ಲಿ ಅದರಲ್ಲೂ ಬಿಜೆಪಿಯಲ್ಲಿ ಹೆಚ್ಚು ಚರ್ಚಿತರಾಗಿರುವ ಶ್ರೀರಾಮುಲು ಇದನ್ನೇ ಮುಂದಿಟ್ಟುಕೊಂಡು ರಾಜ್ಯಸಭೆ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ ಎನ್ನಲಾಗಿದೆ. ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಯಲ್ಲಿ ಸೋಲನುಭವಿಸಿರುವ ರಾಮುಲುಗೆ ಸದ್ಯ ಬಿಜೆಪಿಯಲ್ಲಿ ಯಾವುದೇ ಹುದ್ದೆ ಇಲ್ಲದೆ ಖಾಲಿ ಇದ್ದಾರೆ. ಇದೇ ಸಂದರ್ಭದಲ್ಲಿ ಹೈಕಮಾಂಡ್‌ನಿಂದ ಭೇಟಿಗೆ ಕರೆ ಬಂದಿದ್ದು, ರಾಜ್ಯಸಭೆ ಸ್ಥಾನದ ಬಗ್ಗೆ ವರಿಷ್ಠರ ಭೇಟಿ ವೇಳೆ ಪ್ರಸ್ತಾಪಿಸುವ ಸಾಧ್ಯತೆ ಇದೆ. ಈಗಾಗಲೇ ಜನಾರ್ದ ರೆಡ್ಡಿ ಹಾಗೂ ಶ್ರೀರಾಮುಲು ಮುನಿಸನ್ನು ತಣ್ಣಗಾಗಿಸಲು ಹೈಕಮಾಂಡ್‌ನಿಂದ ಇಬ್ಬರಿಗೂ ಬುಲಾವ್ ಬಂದಿದೆ. ದೆಹಲಿ ಚುನಾವಣೆ ಮುಗಿದ ಬಳಿಕ ದೆಹಲಿಗೆ ಬರುವಂತೆ ಶ್ರೀರಾಮುಲುಗೆ ವರಿಷ್ಠರು ಸೂಚನೆ ನೀಡಿದ್ದಾರೆ. ಈ ಸಂದರ್ಭ ದಲ್ಲಿ ರೆಡ್ಡಿ ಜತೆಗಿನ ಮುನಿಸನ್ನೇ ತಮಗೆ ಲಾಭ ಆಗುವ ರೀತಿ ಬಳಕೆ ಮಾಡಿಕೊಳ್ಳಲು ರಾಮುಲು ಯತ್ನಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಾಜ್ಯಸಭೆ ಸದಸ್ಯನಾಗಿ ಆಯ್ಕೆ ಮಾಡುವಂತೆ ಶ್ರೀರಾಮುಲು ಹೈಕಮಾಂಡ್ ಭೇಟಿ ವೇಳೆ ಮನವಿ ಮಾಡುವ ಸಾಧ್ಯತೆ ಇದೆ. ರಾಜ್ಯದಲ್ಲಿ ಮತ್ತೊಮ್ಮೆ ಸಕ್ರಿಯರಾಗಿ ಪಕ್ಷ ಕಟ್ಟಲು ತಮ್ಮನ್ನು ರಾಜ್ಯಸಭೆ ಸದಸ್ಯರನ್ನಾಗಿ ಮಾಡಬೇಕು ಎಂದು ಅವರು ವರಿಷ್ಠರ ಬಳಿ ಅಹವಾಲು ತೋಡಿಕೊಳ್ಳುವ ನಿರೀಕ್ಷೆ ಇದೆ. ಆಂಧ್ರ ಪ್ರದೇಶ ಕೋಟಾದಿಂದ ರಾಜ್ಯಸಭೆ ಸದಸ್ಯರಾಗಿ ಆಯ್ಕೆಯಾಗಿದ್ದ ವೈಎಸ್ ಆರ್‌ಪಿ ವಿಜಯ ಸಾಯಿರೆಡ್ಡಿ ಕೆಲವು ದಿನಗಳ ಹಿಂದೆ ರಾಜೀನಾಮೆ ನೀಡಿದ್ದಾರೆ.

ಹೀಗಾಗಿ ಆ ಸ್ಥಾನ ತೆರವಾಗಿದೆ. ಅವರ ಅವಧಿ ಇನ್ನೂ ನಾಲ್ಕು ವರ್ಷ ಬಾಕಿ ಇದೆ. ಹೀಗಾಗಿ ಆಂಧ್ರ ಕೋಟಾದಡಿ ರಾಜ್ಯಸಭೆಗೆ ಆಯ್ಕೆ ಮಾಡುವಂತೆ ರಾಮುಲು ಮನವಿ ಮಾಡಲಿದ್ದಾರೆ ಎನ್ನಲಾಗಿದೆ.

ಈ ಬಗ್ಗೆ ಈಗಾಗಲೇ ರಾಮುಲು ಸೂಕ್ಷ್ಮವಾಗಿ ರಾಜ್ಯ ಮುಖಂಡ ಮೂಲಕ ಸಂದೇಶ ಕಳುಹಿಸಿದ್ದಾರೆ ಎಂದೂ ಹೇಳಲಾಗುತ್ತಿದೆ. ಒಟ್ಟಿನಲ್ಲಿ, ರಾಮುಲು ದೆಹಲಿ ಭೇಟಿ ವೇಳೆ ಮಹತ್ವದ ಬೇಡಿಕೆ ಇಡುವ ಸಾಧ್ಯತೆ ಇದೆ.



---

## ರೈಲಿನಿಂದ ನದಿಗೆ ಬಿದ್ದು ಬದುಕಿ ಬಂದ ಗಟ್ಟಿಗ

• ಉದಯವಾಹಿನಿ ಹಾಸನ

ಚಲಿಸುತ್ತಿದ್ದ ರೈಲಿನಿಂದ ಆಯತಪ್ಪಿ ನದಿಗೆ ಬಿದ್ದು ಪವಾಡ ಸದೃಶವಾಗಿ ಯುವಕನೋರ್ವ ಬದುಕಿ ಬಂದಿರೊ ಘಟನೆ ಹಾಸನ ಜಿಲ್ಲೆಯ ಹೊಳೆನರಸೀಪುರದಲ್ಲಿ ನಡೆದಿದೆ. ಆಯಾನ್ ಬದುಕಿ ಬಂದ ಯುವಕ ಮುಜಾಮಿಲ್ ಎಂಬುವರ ಪುತ್ರ ಅಯಾನ್ ಹಾಸನದ ಖಾಸಗಿ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಓದುತ್ತಿದ್ದಾರೆ.

ಮಂಗಳವಾರ ರಾತ್ರಿ ಕೆ.ಆರ್. ನಗರದಿಂದ ಹಾಸನಕ್ಕೆ ಪೋಷಕರ ಜೊತೆ ರೈಲಿನಲ್ಲಿ ತೆರಳುತ್ತಿದ್ದರು. ರೈಲಿನಲ್ಲಿ ಬಾಗಿಲು ಬಳಿ ನಿಂತಿದ್ದ ಆಯನ್ ಆಯತಪ್ಪಿ ಹೇಮಾವತಿ ನದಿಗೆ ಬಿದ್ದಿದ್ದಾರೆ. ಆಯನ್ ನದಿಗೆ ಬಿದ್ದಿದ್ದನ್ನು ಕಂಡ ಪೋಷಕರು ಪೋಷಕರು ಕೂಗಾಡಿ, ರೈಲು ನಿಲ್ಲಿಸಿದ್ದಾರೆ. ರೈಲು ನಿಂತ ಬಳಿಕ ಕೂಡಲೆ ನದಿಗೆ ಇಳಿದ ಜನರು ಆಯಾನ್‌ನನ್ನು ರಕ್ಷಣೆ ಮಾಡಿದ್ದಾರೆ. ನದಿಯಲ್ಲಿ ನೀರು ಕೂಡ ಕಡಿಮೆ ಇದ್ದುದರಿಂದ ಯಾವುದೇ ಅಪಾಯವಾಗಿಲ್ಲ.

ಕೂಡಲೆ ಹೊಳೆನರಸೀಪುರ ನಗರ ಠಾಣೆ ಪೊಲೀಸರಿಗು ಮಾಹಿತಿ ನೀಡಲಾಗಿದ್ದು ಪೊಲೀಸರು ಕೂಡ ಸ್ಥಳಕ್ಕೆ ಬಂದು ಮಾಹಿತಿ ಪಡೆದಿದ್ದಾರೆ.

ಚಲಿಸುತ್ತಿದ್ದ ರೈಲಿನಿಂದ ಬಿದ್ದರೂ ಪವಾಡ ಸದೃಶವಾಗಿ ಬದುಕಿ ಬಂದ ಆಯಾನ್‌ನನ್ನು ಪೋಷಕರ ಜೊತೆ ಕಳಿಸಲಾಗಿದೆ.


ಉದಯವಾಹಿನಿ ಚಿತ್ರ

---

# ಕಾನನವಾಗುತ್ತಿದೆ ಕಲ್ಲಿನ ಕೋಟೆ: ಕುಸಿಯಿತು ಗೋಡೆ

### ಮರಗಿಡಗಳ ಬೇರುಗಳು ಕೋಟೆಯನ್ನು ಶಿಥಿಲಗೊಳಿಸುತ್ತಿವೆ, ನಿರ್ವಹಣೆಯ ಕೊರತೆಯಿಂದ ಕೋಟೆಯ ಗೋಡೆಗಳು ಕುಸಿತ ಕಂಡಿವೆ

• ಉದಯವಾಹಿನಿ ಚಿತ್ರದುರ್ಗ

ನಗರದಲ್ಲಿರುವ ಐತಿಹಾಸಿಕ ಕಲ್ಲಿನಕೋಟೆ ಗಟ್ಟಿತನಕ್ಕೆ ಹೆಸರುವಾಸಿ. ಆದರೆ, ಸದ್ಯ ಕಲ್ಲಿನಕೋಟೆ ಕಾನನವಾಗಿ ಪರಿವರ್ತನೆಗೊಂಡಿದ್ದು ಮರಗಿಡಗಳ ಬೇರುಗಳು ಕೋಟೆಯನ್ನು ಶಿಥಿಲಗೊಳಿಸುತ್ತಿವೆ. ಸಮರ್ಪಕ ನಿರ್ವಹಣೆಯ ಕೊರತೆಯಿಂದ ಕೋಟೆಯ ಗೋಡೆ, ಬುರುಜು, ಬತ್ತೇರಿಗಳು ಕುಸಿತ ಕಂಡಿವೆ.

ಏಳುಸುತ್ತಿನ ಕೋಟೆ ಇಂದಿಗೂ ಸದೃಢತೆಯ ಸಂಕೇತವಾಗಿದೆ. ಆದರೆ ಆವರಣದಲ್ಲಿ ಬೆಳೆದಿರುವ ಮರಗಳ ಬೇರುಗಳು ಕೋಟೆಯ ಗೋಡೆಗಳನ್ನು ಮೀಟುತ್ತಿದ್ದು, ಕೋಟೆಯ ಗಟ್ಟಿತನಕ್ಕೆ ಧಕ್ಕೆಯುಂಟಾಗಿದೆ. ಗಿಡ–ಗಂಟಿ ಹಾವಳಿಯಿಂದ ಕೋಟೆಯ ಸೌಂದರ್ಯವೂ ಕುಸಿಯುತ್ತಿದೆ. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಅಧಿಕಾರಿಗಳ ಅಸಮರ್ಪಕ ನಿರ್ವಹಣೆಯಿಂದಾಗಿ ಕೋಟೆ ಹಾಳಾಗುತ್ತಿದೆ ಎಂದು ಸ್ಥಳೀಯರು ಆರೋಪಿಸುತ್ತಾರೆ. ಆಲ, ಅರಳಿ, ಹೆಬ್ಬೇವು, ನೀಲಗಿರಿ ಸೇರಿದಂತೆ ಬೃಹತ್ ಗಿಡ–ಮರಗಳು ಕೋಟೆಯೊಳಗೆ ಬೆಳೆದುಕೊಂಡಿವೆ.

**ದುರಸ್ತಿ ಕಂಡಿಲ್ಲ**

ಗೋಡೆಗಳೇ ಮರೆಯಾಗಿದ್ದು, ಅರಣ್ಯದಂತೆ ಕಾಣುತ್ತವೆ. ಪ್ರವೇಶದ್ವಾರ 'ಕಾಮನ ಬಾಗಿಲು' ಸೇರಿದಂತೆ ವಿವಿಧೆಡೆ ಗೋಡೆಯ ಮೇಲೆ ಗಿಡಗಳು ಚಿಗುರಿವೆ. ಒನಕೆ ಓಬವ್ವ ಕಿಂಡಿಯ ಹಿಂಭಾಗ, ಹನುಮನ ಬಾಗಿಲು, ಕೋಟೆಯ ಪಶ್ಚಿಮ ಭಾಗದ ಗೋಡೆಗಳೂ ಕುಸಿದಿವೆ. ಹಂಸ ಬತ್ತೇರಿ ಭಾಗದ ಗೋಡೆ ಕೂಡ ಕುಸಿದಿದ್ದು ದುರಸ್ತಿ ಕಂಡಿಲ್ಲ.'ಎಲ್ಲಿ ಬೇಕಾದರೂ ಕಾಡು ಬೆಳೆಸಬಹುದು.

ಆದರೆ ಕೋಟೆ ಕಟ್ಟಲು ಸಾಧ್ಯವಿಲ್ಲ. ಸಮೀಪದಲ್ಲೇ ಜೋಗಿಮಟ್ಟಿ ಅರಣ್ಯ ಪ್ರದೇಶವಿದ್ದು, ಅಲ್ಲಿ ಅರಣ್ಯ ಅಭಿವೃದ್ಧಿಗೊಳಿಸಬಹುದು.

ಮುಂದಿನ ಪೀಳಿಗೆಗೆ ಕೋಟೆ ರಕ್ಷಿಸಬೇಕು. ಸಂರಕ್ಷಣೆ ಆಗದಿದ್ದರೆ ಕೋಟೆಯೇ ನಾಶವಾಗುವ ಅಪಾಯವಿದೆ' ಎಂದು ಇತಿಹಾಸ ಸಂಶೋಧಕ ಮಹಾಂತೇಶ್ ಹೇಳಿದರು. ಒಂಟಿಕಲ್ಲು ಬಸವಣ್ಣ, ಬನಶಂಕರಿ ಗುಡಿ ಮುಂಭಾಗದ ಬತ್ತೇರಿ, ಮದ್ದು ಬೀಸುವ ಕಲ್ಲಿನ ಬಳಿಯ ಬತ್ತೇರಿ ಕೂಡ ಕುಸಿಯುವ ಸ್ಥಿತಿ ತಲುಪಿವೆ. ಬೇರು ಹೊರ ಚಾಚಿರುವ ಕಾರಣ ಗೋಡೆ ಬಿರುಕು ಬಿಡುತ್ತಿದೆ. ಗೋಡ ಬಿಗಿಗೊಳಿಸಲು ಹಿಂದೆಯೇ ಹಾಕಿರುವ ಸುಣ್ಣದ ಗಾರೆ ಕೂಡ ಕಿತ್ತು ಹೋಗಿದೆ. ಪ್ರವಾಸಿಗರಿಗೆ ಹಾಕಲಾಗಿರುವ ಕಲ್ಲು ಬೆಂಚುಗಳು ಗಿಡಗಳ ನಡುವೆ ಮುಳುಗಿ ಹೋಗಿವೆ.

ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಬಾಟಲಿಗಳು ಚೆಲ್ಲಾಡುತ್ತಿವೆ. ಶೌಚಾಲಯಗಳು ಇದ್ದರೂ ಅವುಗಳ ಬೀಗ ತೆಗೆದಿಲ್ಲ. ಕೋಟ ಆವರಣದಲ್ಲಿ ಅಳವಡಿಸಲಾಗಿದ್ದ ಸಿಸಿಟಿವಿ ಕ್ಯಾಮೆರಾಗಳು ಕೂಡ ಹಾಳಾಗಿವೆ.

3 ವರ್ಷಗಳ ಹಿಂದೆ ನಿರ್ಮಾಣ ಮಾಡಲಾಗಿರುವ ಮಾಹಿತಿ ಕೇಂದ್ರ, ಗ್ರಂಥಾಲಯ, ಟಿಕೆಟ್ ಕೌಂಟರ್ ಕಟ್ಟಡಗಳಿಗೆ ಬಿಡುಗಡೆ ಭಾಗ್ಯ ಬಂದಿಲ್ಲ. ನಾವು ಮೊದಲು ಕಹಳೆ ಬತ್ತೇರಿ, ನೆಲ್ಲಿಕಾಯಿ ಸಿದ್ದಪ್ಪನ ಬತ್ತೇರಿವರೆಗೂ ಚಾರಣ ಮಾಡುತ್ತಿದ್ದೆವು. ಆದರೆ ಈಗ ಗಿಡ–ಗಂಟೆಯಿಂದಾಗಿ ಚಾರಣದ ಹಾದಿಯೇ ಮಾಯವಾಗಿದೆ. ಕ್ರಿಮಿಕೀಟಗಳ ಹಾವಳಿ ಹೆಚ್ಚಾಗಿದ್ದು ಚಾರಣ ಸ್ಥಗಿತಗೊಳಿಸಿದ್ದೇವೆ' ಎಂದು ಚಾರಣಪ್ರಿಯ ಸಿ.ರಾಘವ್ ಹೇಳಿದರು.

ಕೋಟೆಯ ಮೇಲೆ ಗಿಡಗಳು ಬೆಳೆದುಕೊಂಡಿರುವುದು ಚಿತ್ರ ಚಂದ್ರಪ್ಪ ವಿಪಿ.ಸುಧೀರ್ ಸಂರಕ್ಷಣಾಧಿಕಾರಿ ಭಾರತೀಯ ಪುರಾತತ್ವ ಕೋಟೆ ಕುಸಿದಿರುವ ಬಗ್ಗೆ ಪರಿಶೀಲಿಸಿ ದುರಸ್ತಿ ಮಾಡಲಾಗು ವುದು. ಆವರಣದಲ್ಲಿ ಬೆಳೆದಿರುವ ಗಿಡ ಗಳ ತೆರವು ಕಾರ್ಯಾಚರಣೆ ಈಗಾಗಲೇ ಆರಂಭವಾಗಿದ್ದು ಹಂತಹಂತವಾಗಿ ಕೆಲಸ ಮಾಡುತ್ತಿದ್ದೇವೆ.

ಹಾವು ಚೇಳುಗಳ ಭಯ ಕೋಟೆಯ ಆವರಣದಲ್ಲಿ ಸ್ಥಳೀಯರು ಬೆಳಿಗ್ಗೆ ಮತ್ತು ಸಂಜೆ ವಿಹಾರ ನಡೆಸುತ್ತಾರೆ. 'ಕೋಟೆ ವಾಯು ವಿಹಾರಿಗಳ ಸಂಘ' ರಚಿಸಲಾಗಿದೆ. ವಿಹಾರ ಮಾರ್ಗದಲ್ಲಿ ಗಿಡಗಂಟೆ ಬೆಳೆದಿದ್ದು ಹಾವು ಚೇಳುಗಳು ಕಾಣಿಸಿಕೊಳ್ಳುತ್ತಿವೆ. ಈಚೆಗೆ ಹೆಬ್ಬಾವು ಕಾಣಿಸಿಕೊಂಡ ನಂತರ ವಿಹಾರಿಗಳ ಸಂಖ್ಯೆ ಕುಸಿದಿದೆ.


ಉದಯವಾಹಿನಿ ಚಿತ್ರ

ಹಲವು ಸಂದರ್ಭಗಳಲ್ಲಿ ವಿಹಾರಿಗಳ ಸಂಘದಿಂದಲೇ ಗಿಡಗಂಟಿ ತೆರವುಗೊಳಿಸಿದ್ದೇವೆ. ಪ್ರವಾಸಿಗರು ಹಾಗೂ ವಿಹಾರಿಗಳ ಸುರಕ್ಷತೆ ದೃಷ್ಟಿಯಿಂದ ಎಎಸ್‌ಐ ಅಧಿಕಾರಿಗಳು ಆಗಿಂದಾಗ್ಗೆ ಕೋಟೆ ಆವರಣ ಸ್ವಚ್ಛಗೊಳಿಸಬೇಕು' ಎಂದು ವಾಯುವಿಹಾರಿಗಳ ಸಂಘದ ಅಧ್ಯಕ್ಷ ಸತ್ಯಪ್ಪ ಒತ್ತಾಯಿಸಿದರು.

**ಕೋಟೆಯೇ ನಾಶವಾಗುವ ಅಪಾಯವಿದೆ**

---

## ಮಿನಿ ನ್ಯೂಸ್

### ಸ್ನೇಹಮಯಿ ಕೃಷ್ಣ, ಗಂಗರಾಜುಗಾಗಿ ಪ್ರಾಣಿಬಲಿ, ರಕ್ತಾಭಿಷೇಕ

• ಉದಯವಾಹಿನಿ ಮಂಗಳೂರು

ಕಳೆದ ಒಂದು ವಾರದ ಹಿಂದೆ ಮಂಗಳೂರಿನ ಮಸಾಜ್ ಪಾರ್ಲರ್ ಮೇಲೆ ಪೊಲೀಸರು ದಾಳಿ ನಡೆಸಿ, ರಾಮಸೇನೆ ಮುಖಂಡ ಪ್ರಸಾದ್ ಅತ್ತಾವರ ಎಂಬುವವರನ್ನು ಬಂಧಿಸಿದ್ದರು. ಆತನ ಮೊಬೈಲ್ ಕೂಡ ಸೀಜ್ ಮಾಡಿದ್ದರು. ಇಂತಹ ಮೊಬೈಲ್ ನಲ್ಲಿ ಹೋರಾಟಗಾರರಿಗೆ ಶಕ್ತಿ ತುಂಬೋ ಸಲುವಾಗಿ ಸ್ನೇಹಮಯಿ ಕೃಷ್ಣ, ಗಂಗರಾಜುಗಾಗಿ ಪ್ರಾಣಿ ಬಲಿ ನಡೆಸಿ, ರಕ್ತಾಭಿಷೇಕ ಮಾಡಿರುವ ಶಾಕಿಂಗ್ ವಿಡಿಯೋ ಪತ್ತೆಯಾಗಿದೆ.

ಈ ಬಗ್ಗೆ ಮಾಹಿತಿ ನೀಡಿರುವಂತ ಮಂಗಳೂರು ಕಮೀಷನರ್ ಮಸಾಜ್ ಪಾರ್ಲರ್ ಕೇಸಲ್ಲಿ ಬಂಧಿತ ಆರೋಪಿಯಾಗಿದ್ದಂತ ಪ್ರಸಾದ್ ಅತ್ತಾವರ ಅವರ ಮೊಬೈಲ್ ಅನ್ನು ಪರಿಶೀಲಿಸಲಾಗಿ ಅದರಲ್ಲಿ ಸ್ಫೋಟಕ ವಿಡಿಯೋಗಳು ಪತ್ತೆಯಾಗಿವೆ.

ದೇವರ ಮುಂದೆ ಪ್ರಾಣಿಬಲಿ ಕೊಟ್ಟು ಮುಡಾ ಹಗರಣದ ದೂರುದಾರ ಸ್ನೇಹಮಯಿ ಕೃಷ್ಣ, ಗಂಗರಾಜು ಫೋಟೋ ಇರಿಸಿ ರಕ್ತಾಭಿಷೇಕ ಮಾಡಿರೋ ವೀಡಿಯೋ ಕೂಡ ಪತ್ತೆಯಾಗಿರುವುದಾಗಿ ತಿಳಿಸಿದ್ದಾರೆ. ಅಂದಹಾಗೇ ಐದು ಕುರಿಗಳನ್ನು ಸ್ನೇಹಮಯಿ ಕೃಷ್ಣ ಹಾಗೂ ಗಂಗರಾಜು ಫೋಟೋ ಇರಿಸಿ ಬಲಿಕೊಡಲಾಗಿದೆ. ಆ ಬಳಿಕ ಆ ಫೋಟೋಗಳಿಗೆ ರಕ್ತಾಭಿಷೇಕವನ್ನು ಮಾಡಲಾಗಿದೆ. ಈ ಹಿನ್ನಲೆಯಲ್ಲಿ ಪ್ರಸಾದ್ ಅತ್ತಾವರ ಹಾಗೂ ಅನಂತ್ ಭಟ್ ಎಂಬುವರ ವಿರುದ್ಧ ಎಫ್‌ಐಆರ್ ಕೂಡ ದಾಖಲಾಗಿದೆ.

### ಸೌಹಾರ್ದ ಸಂಕಲ್ಪ ದಿನ

• ಉದಯವಾಹಿನಿ ರಾಯಚೂರು

ಸೌಹಾರ್ದ ಕರ್ನಾಟಕ ವೇದಿಕೆ ವತಿಯಿಂದ ಮಹಾತ್ಮ ಗಾಂಧಿಜೀ ಹುತಾತ್ಮ ದಿನದ ಪ್ರಯುಕ್ತ ಇಲ್ಲಿಯ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಸೌಹಾರ್ದ ಸಂಕಲ್ಪ ದಿನ ಆಚರಿಸಲಾಯಿತು.

ಜಿಲ್ಲಾ ಕ್ರೀಡಾಂಗಣ ಸಮೀಪದ ಮಹಾತ್ಮ ಗಾಂಧಿಜೀಯವರ ಪುತ್ಥಳಿಗೆ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗಾಂಧಿ ಪುತ್ಥಳಿ ಹತ್ತಿರ ಎರಡು ನಿಮಿಷ ಮೌನಚರಣೆ ಮಾಡಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ನಂತರ ಅಂಬೇಡ್ಕರ್ ವೃತ್ತದಲ್ಲಿ ಮಾನವ ಸರಪಳಿ ನಡೆಸಿ ದೇಶದಬಹುತ್ವ. ಬಹುಸಂಸ್ಕೃತಿ. ಪ್ರಜಾಪ್ರಭುತ್ವ ರಕ್ಷಣೆ ಗಾಗಿ ಪ್ರತಿಜ್ಞೆ ಸ್ವೀಕಾರ ಮಾಡಲಾಯಿತು. ಸಾಹಿತಿ ಅಂಜಿನೇಯ ಜಾಲಿಬೆಂಚಿ ಪ್ರತಿಜ್ಞಾವಿಧಿ ಭೋದಿಸಿ ಮಾತನಾಡಿ, 'ದೇಶದಲ್ಲಿ ಕೋಮುವಾದಿ ಶಕ್ತಿಗಳು ಅದರಲ್ಲಿ ಬಹು ಸಂಖ್ಯಾತರ ಧರ್ಮ ಹಾಗೂ ಜನರ ಐಕ್ಯತೆಯನ್ನು ಒಡೆಯಲು ಪ್ರಯತ್ನಿಸುತ್ತಿವೆ. ಕೋಮುವಾದಿಗಳು ಧರ್ಮದ ಹೆಸರಿನಲ್ಲಿ ದೇಶದಲ್ಲಿ ಅಶಾಂತಿಯನ್ನು ಉಂಟು ಮಾಡುತ್ತಿದ್ದಾರೆ. ನಾವೆಲ್ಲ ಗಾಂಧಿಯವರ ಆಸೆಯಂತೆ ಎಲ್ಲಾ ಧರ್ಮಗಳನ್ನು ಗೌರವಿಸಬೇಕಿದೆ. ದೇಶದ ಐಕ್ಯತೆಯನ್ನು ಕಾಪಾಡಬೇಕಾಗಿದೆ' ಎಂದು ಸಲಹೆ ನೀಡಿದರು.

### ಇಬ್ಬರು ಅಧಿಕಾರಿಗಳ ಮನೆಗಳ ಮೇಲೆ ಲೋಕಾಯುಕ್ತ ದಾಳಿ

• ಉದಯವಾಹಿನಿ ಬೆಳಗಾವಿ

ಬೆಳಗಾವಿ ಉತ್ತರ ಸಬ್ ರಿಜಿಸ್ಟ್ರಾರ್ ಸಚಿನ್ ಮಂಡೇದ ಹಾಗೂ ರಾಯಬಾಗ ಪಶು ವೈದ್ಯಾಧಿಕಾರಿ ಸಂಜಯ ದುರ್ಗನ್ನವರ ಮೇಲೆ ಮನೆಗಳ ಮೇಲೆ, ಲೋಕಾಯುಕ್ತರು ಶುಕ್ರವಾರ ದಾಳಿ ಮಾಡಿದ್ದಾರೆ. ಇಬ್ಬರು ಅಧಿಕಾರಿಗಳು ಅಕ್ರಮ ಆಸ್ತಿ ಸಂಪಾದನೆ ಮಾಡಿದ ಆರೋಪದಡಿ ದಾಳಿ ಮಾಡಲಾಗಿದೆ. ಲೋಕಾಯುಕ್ತ ಎಸ್ಪಿ ಹನುಮಂತರಾಯ ನೇತೃತ್ವದಲ್ಲಿ ದಾಳಿ ನಡೆದಿದೆ.

ನಗರದ ಅನಗೋಳ, ಹಾರೋಗೇರಿ, ಬೆಲ್ಲದ ಬಾಗೇವಾಡಿ ಸೇರಿ ಮೂರು ಕಡೆಗಳಲ್ಲಿ ದಾಳಿ ನಡೆದಿದ್ದು, ಅನಗೋಳದಲ್ಲಿ ಲೋಕಾಯುಕ್ತ ಸಿಪಿಐ ನಿರಂಜನ ಪಾಟೀಲ ನೇತೃತ್ವದಲ್ಲಿ ದಾಳಿ ಮಾಡಲಾಗಿದೆ. ಅಧಿಕಾರಿಗಳು ದಾಖಲೆ ಪರಿಶೀಲನೆ ನಡೆಸುತ್ತಿದ್ದಾರೆ.

### ಪಠ್ಯ ಕೈಬಿಟ್ಟರಷ್ಟೇ ಸಾಲದು, ಆ ಲೇಖಕನಿಗೆ ಗುಂಡು ಹೊಡೆಯಬೇಕು: ಮುತಾಲಿಕ್

• ಉದಯವಾಹಿನಿ ಧಾರವಾಡ

ಧಾರವಾಡದ ಪ್ರತಿಷ್ಠಿತ ಕರ್ನಾಟಕ ವಿಶ್ವವಿದ್ಯಾಲಯದ ಬಿಎ ಪದವಿ ಪುಸ್ತಕದಲ್ಲಿನ ಪಠ್ಯ ಕೈಬಿಟ್ಟರಷ್ಟೇ ಸಾಲದು, ಸಂಬಂಧಿಸಿದವರ ಮೇಲೆ ಕ್ರಮ ಆಗಬೇಕು. ಆ ಲೇಖಕನಿಗೆ ಗುಂಡು ಹೊಡೆಯಬೇಕು.

ಭಾರತ ಮಾತೆಯ ಬಗ್ಗೆ ಅಪಮಾನ ಮಾಡಿದವರಿಗೆ ಕ್ಷಮೆ ಇಲ್ಲ. ಅಕ್ಷಮ್ಯ ಅಪರಾಧ ಆಗಿದೆ. ಹೀಗಾಗಿ ಕ್ರಮ ಆಗಲೇಬೇಕು. ಇಲ್ಲದೇ ಹೋದಲ್ಲಿ ಹೋರಾಟ ಮುಂದುವರೆಯುತ್ತದೆ ಎಂದು ಶ್ರೀರಾಮ ಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ವಾಗ್ದಾಳಿ ಮಾಡಿದ್ದಾರೆ.

ಕವಿವಿಯಲ್ಲಿ ನಡೆದ ಪುಷ್ಪ ನಮನ ಕಾರ್ಯಕ್ರಮ ಬಳಿಕ ಮಾತನಾಡಿದ ಅವರು, ಕವಿವಿಯಲ್ಲಿ ಅತ್ಯಂತ ಅವಮಾನಕರ ಘಟನೆ ಆಗಿದೆ. ಇದೊಂದು ಕಳಂಕದ ರೀತಿಯ ಘಟನೆ. ಬೆಳಗು–1 ರ ಪಠ್ಯ ವಿವಾದ ಆಗಿದೆ. ಭಾರತ ಮಾತಾ ಕೀ ಜೈ ಶಬ್ದಕ್ಕೆ ಅಪನಂಬಿಕೆ ಮೂಡಿಸುವ ಪಾಠ ಹಾಕಿದ್ದಾರೆ. ನಾನು ಈ ಸಂಬಂಧ ವಿಸಿ ಅವರಿಗೂ ಮನವಿ ಕೊಟ್ಟಿದ್ದೇನ ಎಂದಿದ್ದಾರೆ. ಪಾಠಗಳನ್ನು ನಾಲ್ಕು ಜನ ಪರಿ ಷ್ಕರಣೆ ಮಾಡುತ್ತಾರಂತೆ. ಸಂಪಾದಕೀಯ ಮಂಡಳಿ ಇದೆ.

ಆ ನಾಲ್ಕು ಜನರ ಕಣ್ಣಿಗೆ ಇದು ಗೊತ್ತಾಗಲಿಲ್ಲವಾ ಈ ರೀತಿಯ ಅಪಚಾರ ಮಹಾಅಪರಾಧ. ಇದು ದೇಶದ್ರೋಹಕ್ಕೆ ಸಮಾನವಾಗಿರೋದು. ಇದು ತುಕಡೆ ಗ್ಯಾಂಗ್‌ನ ಕೆಲಸ. ಎಲ್ಲಾ ವಿವಿಗಳಲ್ಲಿ ತುಕಡೆ ಗ್ಯಾಂಗ್‌ನವರು ಇದ್ದಾರೆ. ಎಲ್ಲಾ ಕಡೆ ಈ ರೀತಿಯ ವಿಕೃತವಾದಿಗಳು ಇದ್ದಾರೆ. ಅಂತಹ ಒಬ್ಬ ಮಾತ್ರವಲ್ಲ, ಒಂದು ತಂಡ ಕವಿವಿದಲ್ಲಿಯೂ ಇದೆ. ಇವರದ್ದು ಚೀನಾ ಡಿಎನ್‌ಎ. ಇವರ ಮಾನಸಿಕತೆ ಕಂಡು ಹಿಡಿಯಬೇಕು ಎಂದು ಕಿಡಿಕಾರಿದ್ದಾರೆ. ಭಾರತ ಮಾತಾ ಕೀ ಜೈ ಅಂದರೆ ಏಕತೆ. ಇದು ಯಾವುದೇ ಜಾತಿ ಸೂಚಕ ಅಲ್ಲ. ಯಾವುದೇ ಭಾಷಾ ಸೂಚಕ ಅಲ್ಲ. ತಾಯಿ ಬಗ್ಗೆಯೇ ಅಪನಂಬಿಕೆಯಾ ತಾಯಿ ಬಗ್ಗೆಯೇ ಅಪಪ್ರಚಾರವಾ ಇದು ಬಹಳ ದೊಡ್ಡ ಅಪರಾಧ. ರಾಜ್ಯಪಾಲರಿಗೂ ಕ್ರಮಕ್ಕೆ ಆಗ್ರಹಿಸುತ್ತೇವೆ ಎಂದು ಹೇಳಿದ್ದಾರೆ.

ಯತೀಂದ್ರ ಇನ್ನೂ ಬಚ್ಚಾ ಹಿಂದೂ ಮೂಲಭೂತವಾದಿಗಳು ಉಗ್ರರೆಂದು ಯತೀಂದ್ರ ಹೇಳಿಕೆ ವಿಚಾರವಾಗಿ ಮಾತನಾಡಿದ್ದು ಸಿದ್ಧರಾಮಯ್ಯನವರ ಮಗ ಡಾ.ಯತೀಂದ್ರ ಕರ್ನಾಟಕಕ್ಕೆ ಇನ್ನೂ ಬಚ್ಚಾ ಹಿಂದೂ, ಹಿಂದೂತ್ವದ ಬಗ್ಗೆ ಏನೂ ಗೊತ್ತಿಲ್ಲದ ಬಚ್ಚಾ ಈಗ ಹಿಂದೂ ಮೂಲಭೂತವಾದಿಗಳ ಬಗ್ಗೆ ಪದ ಬಳಕೆ ಮಾಡಿದ್ದಾರೆ. ಅದನ್ನು ವಾಪಸ್ ಪಡೆಯಬೇಕು. ಹಿಂದೂ ಎಂದೂ ಉಗ್ರವಾದಿಯಾಗಲು ಸಾಧ್ಯವಿಲ್ಲ, ಎಂದಿಗೂ ಉಗ್ರವಾದಿ ಆಗಿಲ್ಲ. ಮುಂದೆಯೂ ಆಗುವುದಿಲ್ಲ ಎಂದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ಇಂದು ಕೈಗೊಂಡ ಧರ್ಮಾರ್ಥ ಕಾರ್ಯವು ಮಾನಸಿಕ ಶಾಂತಿ ಮತ್ತು ಆರಾಮ ತರುತ್ತದೆ. ನಿಮ್ಮ ಖರ್ಚುಗಳನ್ನು ನಿಯಂತ್ರಿಸಲು ಮತ್ತು ಕೇವಲ ಅಗತ್ಯವಾದ ವಸ್ತುಗಳ ಮಾತ್ರ ಇಂದು ಖರೀದಿಸಲು ಪ್ರಯತ್ನಿಸಿ.

**ವೃಷಭ** ತೊಂದರೆಯಲ್ಲಿರುವ ಯಾರಿಗಾದರೂ ಸಹಾಯ ಮಾಡಲು ನಿಮ್ಮ ಚೈತನ್ಯವನ್ನು ಬಳಸಿ. ಲೋಕೋಪಕಾರಕ್ಕಾಗಲ್ಲದಿದ್ದಲ್ಲಿ ಈ ನಶ್ವರ ದೇಹದ ಉಪಯೋಗವಾದರೂ ಏನು.

**ಮಿಥುನ** ಕೆಲಸದ ಒತ್ತಡ ಮತ್ತು ಮನೆಯಲ್ಲಿ ಅಪಶ್ರುತಿ ಸ್ವಲ್ಪ ಉದ್ವೇಗ ತರಬಹುದು. ನಿಮಗೆ ಆಕರ್ಷಕವಾಗಿ ತೋರುವ ಯಾವುದೇ ಹೂಡಿಕೆಯ ಯೋಜನೆಯ ಬಗ್ಗೆ ಹೆಚ್ಚು ಕಂಡುಹಿಡಿಯಲು ಮೇಲ್ಮೈಗಿಂತ ಕೆಳಗೆ ಆಳವಾಗಿ ಕೆದಕಿ.

**ಕರ್ಕಾಟಕ** ದ್ವೇಷ ಪ್ರೀತಿಗಿಂತ ಹೆಚ್ಚು ಶಕ್ತಿಶಾಲಿಯಾಗಿದ್ದು ನಿಮ್ಮ ದೇಹದ ಮೇಲೆ ಪ್ರಾಣಾಂತಿಕ ಪರಿಣಾಮ ಬೀರುವದರಿಂದ ನಿಮ್ಮ ದ್ವೇಷವನ್ನು ಸಾಯಿಸಲು ಒಂದು ಸಮರಸದ ಸ್ವಭಾವವನ್ನು ರೂಪಿಸಿಕೊಳ್ಳಿ.

**ಸಿಂಹ** ಸಂತೋಷದಿಂದ ತುಂಬಿದ ಒಳ್ಳೆಯ ದಿನ. ಸಂಶಯಾಸ್ಪದ ಹಣ ಕಾಸು ವ್ಯವಹಾರಗಳಲ್ಲಿ ಸಿಲುಕಿಕೊಳ್ಳದಂತೆ ಎಚ್ಚರಿಕೆ ವಹಿಸಿ. ನೀವು ಅಪರೂಪಕ್ಕೆ ಭೇಟಿ ಮಾಡುವ ಜನರನ್ನು ಸಂಪರ್ಕಿಸಲು ಒಳ್ಳೆಯ ದಿನ.

**ಕನ್ಯಾ** ನೀವು ಇತರರೊಡನೆ ನಿಮ್ಮ ಖುಷಿಯ ಕ್ಷಣಗಳನ್ನು ಹಂಚಿಕೊಳ್ಳುತ್ತಿದ್ದಂತೆ ನಿಮ್ಮ ಆರೋಗ್ಯ ಅರಳುತ್ತದೆ. ಆದರೆ ಇದನ್ನು ನಿರ್ಲಕ್ಷಿಸುವುದು ನಿಮಗೆ ತೊಂದರೆ ತರುತ್ತದೆ.

**ತುಲಾ** ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ. ನಿಮ್ಮ ತಾಯಿ ಅಥವಾ ತಂದೆಯ ಆರೋಗ್ಯಕ್ಕಾಗಿ ನೀವು ಇಂದು ಸಾಕಷ್ಟು ಹಣವನ್ನು ಖರ್ಚು ಮಾಡಬೇಕಾಗಬಹುದು. ಇದು ನಿಮ್ಮ ಹಣಕಾಸಿನ ಸ್ಥಿತಿಯನ್ನು ಹದಗೆಡಿಸುತ್ತದೆ.

**ವೃಶ್ಚಿಕ** ಇಂದು ನೀವು ನಿಜವಾಗಿಯೂ ಲಾಭ ಪಡೆಯಬಯಸಿದರೆ ಇತರರು ನೀಡಿದ ಸಲಹೆಯನ್ನು ಕೇಳಿ. ನಿಮ್ಮ ದಿನದ ಯೋಜನೆ ನಿಮ್ಮ ಸಂಗಾತಿಯ ತುರ್ತು ಕೆಲಸದಿಂದಾಗಿ ಹಾಳಾಗಬಹುದು.

**ಧನಸ್ಸು** ಸರಿಯಾದ ಸಂಭಾಷಣೆ ಮತ್ತು ಸಹಕಾರ ಸಂಗಾತಿಯ ಜೊತೆಗಿನ ಸಂಬಂಧವನ್ನು ಉತ್ತಮಗೊಳಿಸುತ್ತದೆ. ಈ ದಿನ ಒಂದು ಸುಂದರ ಸಂದೇಶದೊಂದಿಗೆ ಆನಂದ ಮತ್ತು ಸಂತೋಷದಿಂದ ತುಂಬಿದೆ.

**ಮಕರ** ದ್ವೇಷ ಪ್ರೀತಿಗಿಂತ ಹೆಚ್ಚು ಶಕ್ತಿಶಾಲಿಯಾಗಿದ್ದು ನಿಮ್ಮ ದೇಹದ ಮೇಲೆ ಪ್ರಾಣಾಂತಿಕ ಪರಿಣಾಮ ಬೀರುವದರಿಂದ ನಿಮ್ಮ ದ್ವೇಷವನ್ನು ಸಾಯಿಸಲು ಒಂದು ಸಮರಸದ ಸ್ವಭಾವವನ್ನು ರೂಪಿಸಿಕೊಳ್ಳಿ.

**ಕುಂಭ** ನಿಮ್ಮ ಪ್ರಚಂಡ ಪ್ರಯತ್ನ ಹಾಗೂ ಕುಟುಂಬದ ಸದಸ್ಯರ ಸಕಾಲಿಕ ಬೆಂಬಲ ಬಯಸಿದ ಫಲಿತಾಂಶಗಳು ತರುತ್ತದೆ. ಆದರೆ ಪ್ರಸ್ತುತ ಚೇತನವನ್ನು ಕಾಯ್ದುಕೊಳ್ಳಲು ಶ್ರಮಿಸುತ್ತಿರಿ.

**ಮೀನ** ನಿಮ್ಮ ಭರವಸೆ ಒಂದು ಸೂಕ್ಷ್ಮ ಪರಿಮಳಯುಕ್ತ ಮತ್ತು ಬೆರಗುಗೊಳಿಸುವ ಹೂವಿನ ಹಾಗೆ ಅರಳುತ್ತದೆ. ಹಣದ ಚಲನೆ ದಿನವಿಡೀ ಮುಂದುವರಿಯುತ್ತದೆ ಮತ್ತು ದಿನದ ಅಂತ್ಯದ ನಂತರ ನೀವು ಉಳಿಸಲು ಸಾಧ್ಯವಾಗುತ್ತದೆ.

## ಕುಂಭಮೇಳದ ಕಾಲ್ತುಳಿತದಲ್ಲಿ ಚಿತ್ರದುರ್ಗ ಮೂಲದ ನಾಗಾಸಾಧು ದುರಂತ ಅಂತ್ಯ

• ಉದಯವಾಹಿನಿ ಚಿತ್ರದುರ್ಗ

ಕಳೆದ ಕೆಲವು ದಿನಗಳ ಹಿಂದೆ ಉತ್ತರ ಪ್ರದೇಶದಲ್ಲಿ ನಡೆಯುತ್ತಿರುವ ಪ್ರಯಾಗ್ ರಾಜ್ ನಲ್ಲಿ ಕಾಲ್ತುಳಿತ ದುರಂತ ಸಂಭವಿಸಿತು. ಈ ಒಂದು ಕಾಲ್ತುಳಿತದಲ್ಲಿ ಬೆಳಗಾವಿ ಮೂಲದ ನಾಲ್ವರು ಸಾವನ್ನಪ್ಪಿದ್ದರು ಇದೀಗ ಚಿತ್ರದುರ್ಗ ಜಿಲ್ಲೆಯ ನಾಗಾಸಾಧು ಒಬ್ಬರು ಈ ಒಂದು ಕಾಲ್ತುಳಿತದಲ್ಲಿ ಸಾವನಪ್ಪಿದ್ದಾರೆ ಎಂದು ವರದಿಯಾಗಿದೆ. ಹೌದು ಕಾಲ್ತುಳಿತದಿಂದ ನಾಗ ಸಾಧು ರಾಜೇನಾಥ್ ಮಹಾರಾಜ್ (49) ಎನ್ನುವವರು ಸಾವನ್ನಪ್ಪಿದ್ದಾರೆ ಎಂದು ತಿಳಿದುಬಂದಿದೆ. ಇವರು ಚಿತ್ರದುರ್ಗದ ಬಂಡಾರ ಗುರುಪೀಠದ ನಿಲ್ಲಿಸಿದ್ದರು ಎಂದು ಹೇಳಲಾಗುತ್ತಿದೆ. ಕಳೆದ 7 ವರ್ಷಗಳಿಂದ ಬಂಜಾರ ಗುರು ಪೀಠದಲ್ಲಿ ಈ ಒಂದು ನಾಗಸಾಧು ನೆಲ್ಲಿಸಿದ್ದರು. 15 ದಿನದ ಕುಂಭಮೇಳಕ್ಕೆ ರಾಜೇನಾಥ ಮಹಾರಾಜ್ ತೆರಳಿದ್ದರು. ಆದರೆ ಕಾಲ್ತುಳಿತದಲ್ಲಿ ಅವರು ಸಾವನಪ್ಪಿದ್ದಾರೆ ಎಂದು ವರದಿಯಾಗಿದೆ.

## ಅಗ್ನಿ ದುರಂತ : ಎಲೆಕ್ಟ್ರಿಕ್ ಬೈಕ್‌ಗೆ ಆಕಸ್ಮಿಕ ಬೆಂಕಿ : 4 ಬೈಕ್‌ಗಳು ಸುಟ್ಟು ಭಸ್ಮ

• ಉದಯವಾಹಿನಿ ರಾಯಚೂರು

ರಾಯಚೂರಲ್ಲಿ ಇಂದು ಬೆಳಗಿನ ಜಾವ ಅಗ್ನಿ ದುರಂತವೊಂದು ಸಂಭವಿಸಿದ್ದು, ಎಲೆಕ್ಟ್ರಿಕ್ ಬೈಕ್ ಗೆ ಆಕಸ್ಮಿಕ ಬೆಂಕಿ ತಗುಲಿದ್ದರಿಂದ ಅದರ ಪಕ್ಕದಲ್ಲಿದ್ದ 4 ಬೈಕ್ ಗಳಿಗೂ ಬೆಂಕಿ ವ್ಯಾಪಿಸಿ ಸುಟ್ಟು ಭಸ್ಮವಾಗಿರುವ ಘಟನೆ ರಾಯಚೂರು ನಗರದಲ್ಲಿ ನಡೆದಿದೆ. ರಾಯಚೂರು ನಗರದ ಆಶಾಪುರ ರಸ್ತೆಯಲ್ಲಿರುವ ಗೋವಿಂದ ಎಂಬವರಿಗೆ ಸೇರಿದ್ದ ಬೈಕ್ ಚಾರ್ಜಿಂಗ್ ಇಟ್ಟಿದಾಗ ಘಟನೆ ನಡೆದಿದೆ ಎನ್ನಲಾಗಿದೆ. ಪಶ್ಚಿಮ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ಪರಿಶೀಲನೆ ನಡೆಸಿದರು. ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದರೆ.

## ವಿಚಾರಣೆಗೆ ಹೆದರಿ ಯುವಕ ಆತ್ಮಹತ್ಯೆಗೆ ಶರಣು

• ಉದಯವಾಹಿನಿ ವಿಜಯಪುರ

ಪೊಲೀಸ್ ವಿಚಾರಣೆಗೆ ಹೆದರಿ ಯುವಕನೊಬ್ಬ ಆತ್ಮಹತ್ಯೆಗೆ ಶರಣಾಗಿರುವ ಘಟನೆ ವಿಜಯಪುರ ಜಿಲ್ಲೆಯ ನಿಡಗುಂದಿ ತಾಲ್ಲೂಕಿನ ಹೆಬ್ಬಾಳ ಗ್ರಾಮದಲ್ಲಿ ನಡೆದಿದೆ. ಮೃತ ಯುವಕನನ್ನು ಮೌನೇಶ್ ಅಬ್ಬಿಹಾಳ್ ಎಂದು ಗುರುತಿಸಲಾಗಿದೆ. ಹೌದು ಮೌನೇಶ್ ನ ಸೋದರಮಾವ ಬಸವರಾಜ್ ಎನ್ನುವವರು ಕಳೆದ ಕೆಲವು ದಿನಗಳ ಹಿಂದೆ ಕಾಣೆಯಾಗಿದ್ದರು. ಈ ಸಂಬಂಧ ನಿಡಗುಂದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಹಿನ್ನೆಲೆ ಮೌನೇಶ್‌ನನ್ನು ಠಾಣೆಗೆ ಕರೆಸಿ ಪೊಲೀಸರು ವಿಚಾರಣೆ ನಡೆಸಿದ್ದರು. ಗುರುವಾರ ಸಹ ಮತ್ತೆ ವಿಚಾರಣೆಗೆ ಬರುವಂತೆ ಹೇಳಿದ್ದರು. ಆದರೆ ವಿಚಾರಣೆಗೆ ಹೆದರಿ ಯುವಕ ಜಮೀನಿನಲ್ಲಿ ನೇಣಿಗೆ ಶರಣಾಗಿದ್ದಾನೆ ಎಂದು ಯುವಕನ ಕುಟುಂಬಸ್ಥರು ಆರೋಪಿಸಿದ್ದಾರೆ. ಯುವಕ ಆತ್ಮಹತ್ಯೆ ಮಾಡಿಕೊಂಡಿರುವುದು ಹಲವಾರು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ.

## ಬಸ್ ಡಿಕ್ಕಿಯಾಗಿ ಇಬ್ಬರು ಬೈಕ್ ಸವಾರರು ಸಾವು

• ಉದಯವಾಹಿನಿ ದಾವಣಗೆರೆ

ಬೈಕ್ ಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಬೈಕ್ ಸವಾರರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ದಾವಣಗೆರೆಯಲ್ಲಿ ನಡೆದಿದೆ. ದಾವಣಗೆರೆ ಜಿಲ್ಲೆಯ ಹದಡಿ ಗ್ರಮದ ರಾಜು (38) ಹಾಗೂ ರಾಮಪ್ಪ (40) ಮೃತರು. ಬೈಕ್ ನಲ್ಲಿ ಮದುವೆಗೆಂದು ತೆರಳುತ್ತಿದ್ದರು. ಈ ವೇಳೆ ಹದಡಿ ಗ್ರಮದಿಂದ ಚನ್ನಗಿರಿಯತ್ತ ವೇಗವಾಗಿ ಬಂದ ಬಸ್ ಬೈಕ್ ಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರರು ಸ್ಥಳದಲ್ಲೇ ಸಾವನ್ನಪ್ಪಿದದರೆ. ನಿಯಂತ್ರಣದ ತಪ್ಪಿದ ಬಸ್ ರಸ್ತೆ ಪಕ್ಕದಲ್ಲಿ ಮನೆಗೆ ನುಗ್ಗಿದೆ. ಮನೆಯ ಗೋಡೆ ಕುಸಿದು ಮನೆಯಲ್ಲಿದ್ದವರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

# ನೀರಿನ ಸಂರಕ್ಷಣೆಗೆ ಕೃಷಿಭಾಗ್ಯ ಯೋಜನೆ ಸದ್ಬಳಕೆ ಮಾಡಿಕೊಳ್ಳಿ

### ಭೂ ಹೊದಿಕೆ, ಕಡಿಮೆ ನೀರು ಬೇಡುವ ಬೆಳೆಗಳನ್ನು ಬೆಳೆಯುವುದು ಮತ್ತು ಬೆಳೆ ಪರಿವರ್ತನೆಗೆ ಆದ್ಯತೆ ನೀಡಿ: ಡಾ.ಬಿ.ಎನ್.ಪ್ರಭಾಕರ್

• ಉದಯವಾಹಿನಿ ಚಿತ್ರದುರ್ಗ

ರೈತರು ನೀರಿನ ಸಂರಕ್ಷಣೆಗೆ ಕೃಷಿಭಾಗ್ಯ ಯೋಜನೆಯ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಚಳ್ಳಕೆರೆ ವಿಭಾಗದ ಉಪಕೃಷಿ ನಿರ್ದೇಶಕ ಡಾ.ಬಿ.ಎನ್. ಪ್ರಭಾಕರ್ ಹೇಳಿದರು.

ಹಿರಿಯೂರು ತಾಲ್ಲೂಕಿನ ಬಬ್ಬೂರು ಫಾರಂನ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ರೈತರಿಗೆ ಅಟಲ್ ಭೂ ಜಲ ಯೋಜನೆಯಡಿ ಸಮುದಾಯ ಸಹಭಾಗಿತ್ವದೊಂದಿಗೆ ಅಂತರ್ಜಲ ನಿರ್ವಹಣೆ, ಜಲ ಭದ್ರತಾ ಯೋಜನೆ ಸಿದ್ದಪಡಿಸುವುದು ಮತ್ತು ನೀರಿನ ಬೇಡಿಕೆ ಕಡಿಮೆ ಮಾಡುವ ಸೂಕ್ಷ್ಮ ನೀರಾವರಿ ತಾಂತ್ರಿಕತೆಗಳ ಕುರಿತು ಆಯೋಜಿಸಲಾದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಭೂ ಹೊದಿಕೆ, ಕಡಿಮೆ ನೀರು ಬೇಡುವ ಬೆಳೆಗಳನ್ನು ಬೆಳೆಯುವುದು ಮತ್ತು ಬೆಳೆ ಪರಿವರ್ತನೆಗೆ ಆದ್ಯತೆ ನೀಡಲು ತಿಳಿಸಿದ ಅವರು, ಸಮುದಾಯದ ಸಹಭಾಗಿತ್ವದಲ್ಲಿ ಅಂತರ್ಜಲ ಸಂಗ್ರಹಣೆ ಮತ್ತು ಅಂತರ್ಜಲವನ್ನು ಮರುಪೂರಣ ಮಾಡಲು ಅಟಲ್ ಭೂಜಲ ಯೋಜನೆಯು ಹೆಚ್ಚಿನ ಪ್ರಾಮುಖ್ಯತೆವಹಿಸಿ ಎಂದರು.

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ಹೊರತುಪಡಿಸಿ ಉಳಿದ ಐದು ತಾಲೂಕಿನಲ್ಲಿ ಅಂತರ್ಜಲವನ್ನು ಅತಿ ಹೆಚ್ಚು ಬಳಕೆ ಮಾಡುತ್ತಿದ್ದು ನೀರಿನ ಮಿತ ಬಳಕೆ ಮಾಡಿ ಉತ್ಪಾದಕತೆ ಹೆಚ್ಚಿಸಲು ಕೃಷಿ ಇಲಾಖೆಯಿಂದ ಅಟಲ್ ಭೂಜಲ ಯೋಜನೆ ಅಡಿ ಸಹಾಯಧನದಡಿ ರೈತರಿಗೆ ಸ್ಪ್ರಿಂಕ್ಲರ್ ಘಟಕಗಳನ್ನು ವಿತರಣೆ ಮಾಡಲಾಗುತ್ತಿದೆ ಎಂದು ಹೇಳಿದರು. ರಾಜ್ಯ ಕಾರ್ಯಕ್ರಮ ನಿರ್ವಹಣೆ ಘಟಕ, ಅಟಲ್ ಭೂಜಲ ಯೋಜನೆ ಬೆಂಗಳೂರಿನ ಕೇಂದ್ರ ಕಚೇರಿಯ ಸಾಮಾಜಿಕ ಅಭಿವೃದ್ಧಿ ತಜ್ಞ ಪ್ರವೀಣ್ ಮಾತನಾಡಿ, ನೀರಿನ ಲಭ್ಯತೆ ಹಾಗೂ ಪ್ರಾಮುಖ್ಯತೆ, ಮೇಲ್ಮೈ ನೀರು ಮತ್ತು ಅಂತರ್ಜಲ, ಭಾರತ ಹಾಗೂ ಕರ್ನಾಟಕದಲ್ಲಿ ಅಂತರ್ಜಲ ನೀರಿನ ಅತಿಯಾದ ಬಳಕೆಯ ಇಂದಿನ ಸ್ಥಿತಿಗತಿ, ಅಂತರ್ಜಲ ನಿರ್ವಹಣೆಗೆ ಪೂರಕವಾದ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಯೋಜನೆಗಳು, ಅಟಲ್ ಭೂಜಲ ಯೋಜನೆಯಡಿ ಅಂತರ್ಜಲ ನಿರ್ವಹಣೆಗೆ ಸಮುದಾಯದಲ್ಲಿ ಅರಿವು ಮೂಡಿಸುವು ಅಗತ್ಯತೆ ಮತ್ತು ಸಮುದಾಯದ ಸಹಭಾಗಿತ್ವದ ಪಾತ್ರ ಮನವರಿಕೆ ಮಾಡಿಕೊಟ್ಟರು

> ಕೃಷಿ ಇಲಾಖೆಯ ವಿವಿಧ ಯೋಜನೆಗಳು ಹಾಗೂ ಕೃಷಿ ಭಾಗ್ಯ ಯೋಜನೆಯಡಿ ಬಿದ್ದ ಮಳೆ ನೀರನ್ನು ಸಮರ್ಪಕವಾಗಿ ಸಂಗ್ರಹಣೆ ಮಾಡಲು ಕಂದಕದೊಂದಿಗೆ ಬದು, ಕೃಷಿ ಹೊಂಡ ನಿರ್ಮಾಣ ಕುರಿತು ಮಾಹಿತಿ ನೀಡುತ್ತಾ ಕೃಷಿ ಹೊಂಡದಲ್ಲಿ ಸಂಗ್ರಹಣೆ ಆದ ನೀರನ್ನು ಬೆಳೆಗಳ ಸಂದಿಗ್ಧ ಹಂತದಲ್ಲಿ ನೀರನ್ನು ಹಾಯಿಸಲು ಸ್ಪ್ರಿಂಕ್ಲರ್ ಸೆಟ್ ಮತ್ತು ಡೀಸೆಲ್ ಪಂಪ್ಸೆಟ್ ಬಳಸಿಕೊಂಡು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಲು ಕೋರಿದರು
> -ಎಂ.ವಿ. ಮಂಜುನಾಥ್, ಹಿರಿಯೂರು ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕ


ಉದಯವಾಹಿನಿ ಚಿತ್ರ

**ಅಟಲ್ ಭೂಜಲ ಯೋಜನೆಗೆ ಪ್ರಾಮುಖ್ಯತೆ**

ನೀರಿನ ಮಿತ ಬಳಕೆ ಮಾಡಿ ಉತ್ಪಾದಕತೆಯನ್ನು ಹೆಚ್ಚಿಸಲು ಅಟಲ್ ಭೂಜಲ ಯೋಜನೆಯಡಿ ಸಹಾಯಧನದಡಿ 2022–23ನೇ ಸಾಲಿನಿಂದ ಸ್ಪ್ರಿಂಕ್ಲರ್ ಘಟಕ ವಿತರಿಸಲು ಕೃಷಿ ಇಲಾಖೆಯಿಂದ ಅನುಷ್ಠಾನ ಮಾಡಲಾಗುತ್ತಿದೆಂದರು.

ಕೃಷಿ ಹೊಂಡದ ಸುತ್ತ ತಂತಿ ಬೇಲಿಯನ್ನು ಹಾಕಿ ಅವಘಡಗಳನ್ನು ತಡೆಯಬಹುದು ಹಾಗೂ ಹೆಚ್ಚಿನ ಮಾಹಿತಿಗಾಗಿ ತಮ್ಮ ಹತ್ತಿರದ ರೈತ ಸಂಪರ್ಕ ಕೇಂದ್ರಕ್ಕೆ ಸಂಪರ್ಕಿಸಲು ಕೋರಿದರು. ನೆಟಾಫಿಮ್ ಸಂಸ್ಥೆಯ ಬೇಸಾಯ ಶಾಸ್ತ್ರಜ್ಞ ಆಂಜಿನಪ್ಪ ಅವರು ಕೃಷಿ ಹಾಗೂ ತೋಟಗಾರಿಕಾ ಬೆಳಗಳಲ್ಲಿ ನೀರಿನ ಮಿತ ಬಳಕೆ ಹಾಗೂ ಉತ್ಪಾದಕತೆ ಹೆಚ್ಚಿಸಲು ಸ್ಪ್ರಿಂಕ್ಲರ್ ಮತ್ತು ಹನಿ ನೀರಾವರಿ ತಾಂತ್ರಿಕತೆ, ರಸಾವರಿ ತಂತ್ರಜ್ಞಾನ ಮತ್ತು ಅವುಗಳ ನಿರ್ವಹಣೆ ಕುರಿತು ವಿಷಯ ಮಂಡನೆ ಮಾಡಿದರು.

ಫೈಲೊ ಸಂಸ್ಥೆಯ ಪ್ರತಿನಿಧಿ ಡಾ.ಬಿ.ಎಂ.ಕಿರಣ್ ಕೃಷಿಯಲ್ಲಿ ಅಂತರ್ಜಾಲ ಆಧಾರಿತ ಸಾಧನಗಳು, ಕೃತಕ ಬುದ್ಧಿಮತ್ತೆ, ಸಂವೇದಕ ಹಾಗೂ ಬೆಳೆ ವಿಜ್ಞಾನಗಳನ್ನು ಬಳಸಿ ಅಭಿವೃದ್ಧಿಪಡಿಸಿದ ಉಪಕರಣದ ಕುರಿತು ಮಾಹಿತಿ ನೀಡಿದರು. ಈ ಉಪಕರಣ ಬಳಕೆಯಿಂದ ಮಣ್ಣಿನಲ್ಲಿ ನೀರಿನ ಅವಶ್ಯಕತೆಯನ್ನು ನಿರಂತರವಾಗಿ ಪರಿಶೀಲಿಸಿ, ಬೆಳೆ ಮತ್ತು ಅದರ ಹಂತವನ್ನು ಆಧರಿಸಿ, ಬೆಳೆಯ ನೀರಿನ ಅವಶ್ಯಕತೆಯನ್ನು ಎಲ್ಲಾ ಸಮಯದಲ್ಲೂ ನಿಖರವಾಗಿ ಪೂರೈಸಲು ಮಾಹಿತಿ ನೀಡುತ್ತದೆ.

ಈ ಮೂಲಕ 40 ರಿಂದ 60 ಪ್ರತಿಶತ ನೀರಿನ ಬಳಕೆಯನ್ನು ಕಡಿಮೆ ಮಾಡಬಹುದು. ಮುಂದಿನ 7 ದಿನಗಳವರೆಗಿನ ಕೃಷಿ ಸಂಬಂಧಿತ ನಿರ್ಧಿಷ್ಟ ಸೂಕ್ಷ್ಮ ಹವಾಮಾನದ ಮುನ್ಸೂಚನೆ ಒದಗಿಸುವ ಮೂಲಕ ಭವಿಷ್ಯದ ಹವಾಮಾನ ಬದಲಾವಣೆಗಳ ಅಡ್ಡಪರಿಣಾಮದಿಂದ ಬೆಳೆಗಳನ್ನು ರಕ್ಷಿಸಲು ತಮ್ಮ ಸಂಸ್ಥೆಯ ಉಪಕರಣಗಳಿಂದ ಸಹಾಯವಾಗುತ್ತದೆ. ಈ ತಂತ್ರಜ್ಞಾನವು ನೀರು ಮತ್ತು ಕೀಟನಾಶಕವನ್ನು ಬೆಳೆಗಳಿಗೆ ನೀಡುವ ಸೂಕ್ತ ಸಮಯದ ಬಗ್ಗೆ ಮಾಹಿತಿಯನ್ನು ನೀಡುವ ಮೂಲಕ ಸಂಪನ್ಮೂಲದ ಸಮರ್ಪಕ ಬಳಕೆ ಹಾಗೂ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುತ್ತದೆ ಎಂದರು.

ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಮುಖ್ಯಸ್ಥ ರಜನೀಕಾಂತ ಮಾತನಾಡಿ, ಜಿಲ್ಲಾ ಕೃಷಿ ತರಬೇತಿ ಕೇಂದ್ರದಿಂದ ರೈತರಿಗೆ ಕೃಷಿ ಮತ್ತು ಕೃಷಿ ಸಂಬಂಧಿತ ವಿಷಯಗಳ ಕುರಿತು ಸಾಂಸ್ಥಿಕ, ಹೊರಾಂಗಣ, ಅಂತರಜಾಲ ಮತ್ತು ಯುಟ್ಯೂಬ್ ಮೂಲಕ ತಾಂತ್ರಿಕ ಮಾಹಿತಿಯನ್ನು ನೀಡುತ್ತಿದ್ದು, ಈ ತರಬೇತಿಯ ಸದುಪಯೋಗ ಪಡೆದುಕೊಳ್ಳುವಂತೆ ರೈತರಿಗೆ ಮನವಿ ಮಾಡಿದರು.

> ಅಟಲ್ ಭೂಜಲ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಜಿಲ್ಲಾ ಅನುಷ್ಠಾನ ಸಂಸ್ಥೆಗಳ ಪಾತ್ರ, ಗ್ರಾಮ ಪಂಚಾಯಿತಿ ಮತ್ತು ಅಂತರ್ಜಲ ನಿರ್ವಹಣಾ ಸಮಿತಿಯ ಪಾತ್ರ, ಈ ಯೋಜನೆಯಲ್ಲಿ ವಿವಿಧ ಸಂಸ್ಥೆಗಳ ಕಾರ್ಯನಿರ್ವಹಣೆ, ಜಲಭದ್ರತಾ ಯೋಜನೆ ತಯಾರಿಕೆ, ಅಂತರ್ಜಲ ಮಿತ ಬಳಕೆ ಕ್ರಮಗಳಾದ ತುಂತುರು ಹಾಗೂ ಹನಿ ನೀರಾವರಿ ಪದ್ಧತಿಗಳ ಬಳಕೆ, ಭೂ ಹೊದಿಕೆ ಹಾಗೂ ಬೆಳೆ ಪರಿವರ್ತನೆ, ಕಡಿಮೆ ನೀರು ಬೇಡುವ ಬೆಳೆಗಳು ಇತ್ಯಾದಿ, ಅಂತರ್ಜಲ ಸಂಗ್ರಹ ಮತ್ತು ಮರುಪೂರಣ ಕ್ರಮಗಳಾದ ತಡೆಹಣೆ, ಕಂದಕದೊಂದಿಗೆ ಬದು, ಕೃಷಿ ಹೊಂಡ, ನೀರು ಇಂಗು ಗುಂಡಿ, ಗೋಕಟ್ಟೆ, ಜಿನುಗು ಕೆರೆ ಕುರಿತು ಮಾಹಿತಿ ನೀಡಿದರು
> -ಡಿ.ರವಿಕುಮಾರ್, ಜಿಲ್ಲಾ ಕಾರ್ಯಕ್ರಮ ನಿರ್ವಹಣೆ ಘಟಕ, ಅಟಲ್ ಭೂಜಲ ಯೋಜನೆ ಚಿತ್ರದುರ್ಗ ಕಚೇರಿ

## ಗ್ರಾಮ ಪಂಚಾಯಿತಿಗಳಿಗೆ ಜಿ.ಪಂ ಸಿಇಒ ದಿಢೀರ್ ಭೇಟಿ, ಪರಿಶೀಲನೆ

• ಉದಯವಾಹಿನಿ ಚಿತ್ರದುರ್ಗ

ಚಿತ್ರದುರ್ಗ ತಾಲ್ಲೂಕಿನ ಕಾಲ್ಗೆರೆ ಹಾಗೂ ಇಸ್ಸಾಮುದ್ರ ಗ್ರಾಮ ಪಂಚಾಯಿತಿಗಳಿಗೆ ಗುರುವಾರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಜೆ.ಸೋಮಶೇಖರ್ ಧಿಡೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕಾಲ್ಗೆರೆ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಕಡತ ಪರಿಶೀಲಿಸಿದರು. ನಂತರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಜಾದ್ ನಗರದ ಚಾಲನೆಯಲ್ಲಿರುವ ಬೂದು ನಿರ್ವಹಣೆ ಕಾಮಗಾರಿ ವೀಕ್ಷಣೆ ಮಾಡಿ, ನರೇಗಾ ಯೋಜನೆಯ ನಿಯಮಾನುಸಾರ ಕಾಮಗಾರಿ ಅನುಷ್ಠಾನಗೊಳಿಸಿ, ಕಾಮಗಾರಿ ಗುಣಮಟ್ಟ ಕಾಪಾಡಿಕೊಳ್ಳಲು ಸೂಚಿಸಿದರು.

ಇಸ್ಸಾಮುದ್ರ ಗ್ರಾಮ ಪಂಚಾಯತಿಗೆ ಧಿಡೀರ್ ಭೇಟಿ ನೀಡಿ, ಗ್ರಾಮ ಪಂಚಾಯಿತಿಯಲ್ಲಿ ಕಂದಾಯ ವಸೂಲಾದ ಬಗ್ಗೆ ಮಾಹಿತಿ ಪಡೆದರು.

ನಂತರ ಸಿಬ್ಬಂದಿಗಳ ಹಾಜರಾತಿ ಪರಿಶೀಲಿಸಿ, ಗ್ರಾಮ ಪಂಚಾಯಿತಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸರಿಯಾದ ಸಮಯಕ್ಕೆ ಕೆಲಸಕ್ಕೆ ಹಾಜರಾಗಿ ಎಲ್ಲಾ ಸಾರ್ವಜನಿಕರೊಂದಿಗೆ ಉತ್ತಮ ಒಡನಾಟದೊಂದಿಗೆ ಯಾವುದೇ ಸಮಸ್ಯೆಗಳು ಬಾರದಂತೆ ಕರ್ತವ್ಯ ನಿರ್ವಹಿಸಬೇಕು ಎಂದು ಸಿಬ್ಬಂದಿಗಳಿಗೆ ಸೂಚಿಸಿದರು. ಅದೇ ರೀತಿಯಾಗಿ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಕಡತ ಪರಿಶೀಲಿಸಿ, ಎಲ್ಲಾ ಕಡತ ನರೇಗಾ ಮಾರ್ಗಸೂಚಿಯಂತೆ ಮತ್ತು ಚೆಕ್ ಲಿಸ್ಟ್ ಪ್ರಕಾರ ನಿರ್ವಹಿಸಲು ಸೂಚಿಸಿದರು.

ನಂತರ ಅದೇ ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ ಮಕ್ಕಳ ಹಾಜರಾತಿ, ಆರೈಕೆ,ಆರೋಗ್ಯ ಗುಣಮಟ್ಟದ ಆಹಾರದ ಬಗ್ಗೆ ಪರಿಶೀಲಿಸಿದರು. ಮಕ್ಕಳ ಹಾಜರಾತಿ ಸರಿಯಾಗಿ ನಿರ್ವಹಿಸುವಂತೆ ಅಂಗನವಾಡಿ ಕಾರ್ಯಕರ್ತರಿಗೆ ಸೂಚಿಸಿದರು.


ಉದಯವಾಹಿನಿ ಚಿತ್ರ

**ಮಕ್ಕಳೊಂದಿಗೆ ಬಿಸಿಯೂಟ**

ಸರ್ಕಾರಿ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ, ಮಕ್ಕಳ ಹಾಜರಾತಿ, ಮಕ್ಕಳ ವಿದ್ಯಾಭ್ಯಾಸ, ಫಲಿತಾಂಶಗಳ ಬಗ್ಗೆ ಮಾಹಿತಿ ಪಡೆದರು. ಶಿಕ್ಷಕರೊಂದಿಗೆ ಹಾಗೂ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಅಡುಗೆ ಕೋಣೆಗೆ ಭೇಟಿ ನೀಡಿ ಆಹಾರದ ಗುಣಮಟ್ಟದ ಬಗ್ಗೆ ಪರಿಶೀಲನೆ ನಡೆಸಿ, ಮಕ್ಕಳೊಂದಿಗೆ ಬಿಸಿಯೂಟ ಸವಿದರು.

ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ ಕೆ.ತಿಮ್ಮಪ್ಪ, ಚಿತ್ರದುರ್ಗ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ವೈ.ರವಿಕುಮಾರ್, ಜಿಲ್ಲಾ ಪಂಚಾಯಿತಿಯ ನರೇಗಾ ಯೋಜನೆಯ ಎಡಿಪಿಸಿ ಮೋಹನ್ ಕುಮಾರ್, ಕಾಲ್ಗೆರೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ದಿಲೀಪ್ ಕುಮಾರ್ ಸೇರಿದಂತೆ ಗ್ರಾಮ ಪಂಚಾಯಿತಿ ಸದಸ್ಯರು ಇದ್ದರು.

## ಮೊಟ್ಟೆ ದರ ಹೆಚ್ಚಳ: ಶಿಕ್ಷಕರಿಗೆ ಹೊರೆ

• ಉದಯವಾಹಿನಿ ಹುಮನಾಬಾದ್

ಮಾರುಕಟ್ಟೆಯಲ್ಲಿ ಮೊಟ್ಟೆ ದರ ಹೆಚ್ಚಳವಾಗಿದ್ದರಿಂದ ಪ್ರಾಥಮಿಕ ಮತ್ತು ಪ್ರೌಢಶಾಲಾ ಮುಖ್ಯ ಶಿಕ್ಷಕರಿಗೆ ಹೊರೆಯಾಗಿ ಪರಿಣಮಿಸಿದೆ. 1ನೇ ತರಗತಿಯಿಂದ 10ನೇ ತರಗತಿ ವರೆಗಿನ ಸರ್ಕಾರಿ ಹಾಗೂ ಅನುದಾನಿತ ಶಾಲೆಯ ಮಕ್ಕಳಿಗೆ ಬಿಸಿಯೂಟದ ಜೊತೆಗೆ ಬೇಯಿಸಿದ ಮೊಟ್ಟೆ ವಿತರಣೆ ಮಾಡಬೇಕು ಎಂಬ ಸರ್ಕಾರದ ಆದೇಶ ಇದೆ.

ಶಾಲೆಗಳಿಗೆ ಸರ್ಕಾರದಿಂದ ನೀಡುತ್ತಿರುವ ಅನುದಾನ ಸಾಕಾಗದೇ ಮುಖ್ಯಶಿಕ್ಷಕರು ತಮ್ಮ ಸ್ವಂತ ಹಣ ನೀಡುವ ಪರಿಸ್ಥಿತಿ ಬಂದಿದೆ. ಶಾಲಾಭಿವೃದ್ಧಿ ಸಮಿತಿ ಹಾಗೂ ಮುಖ್ಯಶಿಕ್ಷಕರ ಜಂಟಿ ಬ್ಯಾಂಕ್ ಖಾತೆಗೆ ಸರ್ಕಾರದಿಂದ ಹಣ ತುಂಬಲಾಗುತ್ತಿದೆ.

ಒಂದು ಮೊಟ್ಟೆಗೆ ಸರ್ಕಾರ 6 ರೂಪಾಯಿ ನೀಡುತ್ತಿದೆ. ಇದರಲ್ಲಿ ಮೊಟ್ಟೆ ಸುಲಿಯುವುದಕ್ಕೆ 30ಪೈಸೆ, ಸರಬರಾಜು ಮಾಡುವುದಕ್ಕೆ 20ಪೈಸೆ ಹಾಗೂ ಬೇಯಿಸಲು 30ಪೈಸೆ ಬಳಸಬೇಕಾಗಿದೆ. ಇನ್ನುಳಿದ 5.20ರಲ್ಲಿಯೇ ಮೊಟ್ಟೆ ಖರೀದಿಸುವ ಪರಿಸ್ಥಿತಿ ಇವರದ್ದಾಗಿದೇ. ಸದ್ಯ ಮಾರುಕಟ್ಟೆಯಲ್ಲಿ ಒಂದು ಮೊಟ್ಟೆಗೆ 7.50 ಪೈಸೆ ಇದೆ. ದಿನದಿಂದ ದಿನಕ್ಕೆ ಮೊಟ್ಟೆ ಬೆಲೆ ವಿಭಿನ್ನವಾಗಿರುತ್ತದೆ. ಹೀಗಾಗಿ ಸರ್ಕಾರದಿಂದ ನೀಡುತ್ತಿರುವ ಅನುದಾನದಲ್ಲಿ ಮೊಟ್ಟೆ ಖರೀದಿ ಮಾಡುವುದು ಕಷ್ಟವಾಗುತ್ತಿದೆ ಎಂದು ಹೆಸರು ಹೇಳಲು ಇಚ್ಚಿಸದ ತಾಲ್ಲೂಕಿನ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರೊಬ್ಬರು ಹೇಳುತ್ತಾರೆ. 'ಸರ್ಕಾರದಿಂದ ವಾರದಲ್ಲಿ ಎರಡು ದಿನ ಮೊಟ್ಟೆ ವಿತರಣೆ ಮಾಡಲಾಗುತ್ತಿತ್ತು. ಈಗ ಅಜೀಂ ಪ್ರೇಮ್‌ಜಿ ಫೌಂಡೇಷನ್ ನೆರವಿನಿಂದ ವಾರದಲ್ಲಿ 6 ದಿನವೂ ಮೊಟ್ಟೆ ವಿತರಿಸಲಾಗುತ್ತಿದೆ. ಒಂದು ಮೊಟ್ಟೆಗೆ 7 ಕೊಟ್ಟರೆ ಮುಖ್ಯ ಶಿಕ್ಷಕರಿಗೆ ಹೊರೆ ಆಗುವುದಿಲ್ಲ' ಎಂದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಮುರುಘೇಂದ್ರ ಸಜ್ಜನಶೆಟ್ಟಿ ತಿಳಿಸಿದ್ದಾರೆ.ಮೊಟ್ಟೆ ಸೇವಿಸದ ಮಕ್ಕಳಿಗೆ ಬಾಳೆಹಣ್ಣು ಕೊಡಬೇಕು. ಈಗ ಮಾರುಕಟ್ಟೆಯಲ್ಲಿ ಬಾಳೆಹಣ್ಣಿನ ಬೆಲೆಯೂ ಹೆಚ್ಚಾಗಿದೆ. ಹೀಗಾಗಿ ಮೊಟ್ಟೆ ವಿತರಣೆಗೆ ಸರ್ಕಾರ ನೀಡುತ್ತಿರುವ ಅನುದಾನ ಹೆಚ್ಚಳ ಮಾಡಬೇಕು ಎಂಬುವುದು ಶಾಲೆಯ ಮುಖ್ಯ ಶಿಕ್ಷಕರ ಒತ್ತಾಯವಾಗಿದೆ.

## ಮೈಕ್ರೋಫೈನಾನ್ಸ್ ಸಿಬ್ಬಂದಿ ಕಿರುಕುಳ ನೀಡಿದರೆ ಸಹಾಯವಾಣಿಗೆ ಕರೆ ಮಾಡಿ, ಮಾಹಿತಿ ನೀಡಿ

• ಉದಯವಾಹಿನಿ ಧಾರವಾಡ

ಕರ್ನಾಟಕ ರಾಜ್ಯದಲ್ಲಿ ಮೈಕ್ರೊಫೈನಾನ್ಸ್ ಕಂಪನಿಗಳು ಸಾಲ ವಸೂಲಾತಿ ನೆಪದಲ್ಲಿ ಸಾಲಗಾರರಿಗೆ ಕಿರುಕುಳ ನೀಡುತ್ತಿರುವ ಪ್ರಕರಣಗಳು ಹೆಚ್ಚುತ್ತಿರುವದರಿಂದ ಮುಖ್ಯ ಮಂತ್ರಿಗಳ ಸೂಚನೆಯಂತೆ ಧಾರವಾಡ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಹಾಯವಾಣಿ ಕೇಂದ್ರವನ್ನು ಸ್ಥಾಪಿಸಲಾಗಿದೆ.

**ವಸೂಲಾತಿ ನೆಪದಲ್ಲಿ ಸಾಲಗಾರರಿಗೆ ಕಿರುಕುಳ**

ನೊಂದವರು ದೂರವಾಣಿ ಸಂಖ್ಯೆ 0836-2445508 ಅಥವಾ ಟೋಲ ಫ್ರೀ ನಂ: 1077 ಗೆ ಕರೆ ಮಾಡಿ ಮಾಹಿತಿ ನೀಡಬಹುದು. ಮಾಹಿತಿದಾರರ ವಿವರಗಳನ್ನು ಗೌಪ್ಯವಾಗಿ ಇಡಲಾಗುವುದೆಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ತಿಳಿಸಿದ್ದಾರೆ.ಈ ಕುರಿತು ಪ್ರಕಟಣೆ ನೀಡಿರುವ ಅವರು, ಮೈಕ್ರೊಫೈನಾನ್ಸ್ ಕಂಪನಿಗಳಿಂದ ಆಗುತ್ತಿರುವ ಕಿರುಕುಳಕ್ಕೆ ಸಂಬಂಧಿಸಿದಂತೆ ಸಹಾಯವಾಣಿ ಕೇಂದ್ರಗಳಲ್ಲಿ ಕರೆಗಳನ್ನು ಸ್ವೀಕರಿಸಲು ವಾರದ ಏಳು ದಿನಗಳಲ್ಲಿ ಹಗಲು ರಾತ್ರಿ ಪಾಳೆಯಲ್ಲಿ (ಮೂರು ಶಿಫ್ಟ್‌ನಲ್ಲಿ) ಅಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ.

ಸಿಬ್ಬಂದಿಯವರು ನಿಗದಿತ ಸಮಯದಲ್ಲಿ ಸಹಾಯವಾಣಿ ಕೇಂದ್ರದಲ್ಲಿ ಹಾಜರಿದ್ದು, ದೂರವಾಣಿಯ ಮೂಲಕ ಸ್ವೀಕರಿಸುವ ಎಲ್ಲ ದೂರು ಮತ್ತು ಮಾಹಿತಿಗಳನ್ನು ಕಾರ್ಯಾಲಯದಲ್ಲಿ ನಿರ್ವಹಣೆ ಮಾಡಿದ ವಹಿಯಲ್ಲಿ ದಾಖಲಿಸಿ, ದೂರಿನ ಸಮಸ್ಯೆ ಅಂಶಗಳ ಬಗ್ಗೆ ಆಯಾ ತಾಲೂಕಿನ ತಹಶೀಲ್ದಾರರಿಗೆ ಮತ್ತು ಪೆಲೀಸ್ ಇಲಾಖೆಗೆ ತಕ್ಷಣ ಮಾಹಿತಿ ನೀಡುವರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿನ ಈ ಸಹಾಯವಾಣಿ ಕೇಂದ್ರ ಮೇಲುಸ್ತುವಾರಿ ಅಧಿಕಾರಿಯನ್ನಾಗಿ ಧಾರವಾಡ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕ ರಮೇಶ ಬಗಲಿ (ದೂರವಾಣಿ ಸಂಖ್ಯೆ: 9148431516) ಅವರನ್ನು ನೇಮಿಸಿ, ಆದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ತಿಳಿಸಿದ್ದಾರೆ.

## 5ನೇ ತಾಲ್ಲೂಕು ಸಾಹಿತ್ಯ ಸಮ್ಮೇಳನ ಲಾಂಛನ ಬಿಡುಗಡೆ

• ಉದಯವಾಹಿನಿ ಮುದ್ದೇಬಿಹಾಳ

ಕನ್ನಡ ಅನ್ನದ ಭಾಷೆ ಕನ್ನಡ ನಮ್ಮ ಆಡಳಿತ ಭಾಷೆ ನಾವು ಕಾಣುವ ಕನಸು ಕನ್ನಡದ್ದಾಗಿದೆ ಕನ್ನಡ ಹೃದಯದ ಭಾಷೆಯಾಗಿದೆ ಈ ಕನ್ನಡದ ಋಣವನ್ನು ಸಾಹಿತ್ಯ ಸಮ್ಮೇಳನದ ಮೂಲಕ ತಿರಿಸಬೇಕಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷ ಹಾಸಿಂಪೀರ ವಾಲಿಕಾರ ಹೇಳಿದರು.

ಪಟ್ಟಣದ ಕಸಾಪ ಕಾರ್ಯಾಲಯ ಆವರಣದಲ್ಲಿ ಫೆ 15 ರಂದು ನಡೆಯಲಿರುವ ಮುದ್ದೇಬಿಹಾಳ ತಾಲೂಕ 5 ನೇ ಸಾಹಿತ್ಯ ಸಮ್ಮೇಳನದ ಲಾಂಛನ ಬಿಡುಗಡೆಗೊಳಸಿ ಅವರು ಮಾತನಾಡಿದರು .

ಕನ್ನಡ ಸಾಹಿತ್ಯ ಪರಿಷತ್ತನ್ನು ನಾಲ್ವಡಿ ಕೃಷ್ಣರಾಜ ಒಡೆಯರು ಅನುಷ್ಠಾನಗೊಳಸಿ 108 ವರ್ಷವಾಗಿದೆ 108 ಸಮ್ಮೇಳನ ಆಗಬೇಕಿತ್ತು ಆದರೆ ಆಗಿಲ್ಲಾ ಎಲ್ಲಿ ನಾವುಗಳು ಎಡವಿದ್ದೇವೆ ಎಂಬ ಚಿಂತನೆ ಮಾಡಬೇಕಿದೆ ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಸರಕಾರದಿಂದ ಅಲ್ಪ ಅನುದಾನ ನೀಡಲಾಗುತ್ತಿದೆ ಹೀಗಾಗಿ ತಾಲ್ಲೂಕ ಸಾಹಿತ್ಯ ಸಮ್ಮೇಳನಕ್ಕೆ ಯಾವುದೇ ಅನುದಾನ ಸಿಗುತ್ತಿಲ್ಲಾ ಸ್ಥಳಿಯ ದಾನಿಗಳ ಸಹಕಾರದೊಂದಿಗೆ ಸಮ್ಮೇಳನವನ್ನು ಅರ್ಥಪೂರ್ಣವಾಗಿಸಬೇಕಿದೆ ಎಂದರು.

ತಾಲ್ಲೂಕ ಕಸಾಪ ಅಧ್ಯಕ್ಷ ಕಾಮರಾಜ ಬಿರಾದಾರ ಸಮ್ಮೇಳನದ ರೂಪುರೇಷೆ ಸಂಘಟನೆ ಬಗ್ಗೆ ವಿವರಿಸಿ ತಾಲೂಕ ಸಾಹಿತ್ಯ ಸಮ್ಮೇಳನದ ಯಶಸ್ವಿಗೆ ಪ್ರತಿಯೊಬ್ಬರು ಶ್ರಮಿಸಬೇಕಿದೆ ಕಾರ್ಡ್‌ನಲ್ಲಿ ಹೆಸರಿದ್ದವರು ಪದಾಧಿಕಾರಿಗಳು ಮಾಡಬೇಕು ಅಂತಿಲ್ಲಾ ಎಲ್ಲರೂ ಪದಾಧಿಕಾರಿಗಳೆಂದು ಭಾವಿಸಿ ಒಂದಾಗಿ ಕನ್ನಡಮ್ಮನ ಜಾತ್ರೆಯನ್ನು ಮಾಡೋಣವೆಂದರು.

ಕಸಾಪ ನಿಕಟಪೂರ್ವ ಅಧ್ಯಕ್ಷ ಎಂ.ಬಿ ನಾವದಗಿ, ಕೆ ವೈ ಬಿರಾದಾರ, ಜಯಶ್ರೀ ಹಿರೇಮಠ,ಸಾನಿಧ್ಯವಹಿಸಿದ್ದ ಮಹಾದೇವಯ್ಯ ಶಾಸ್ತ್ರಿ , ಅಂಬಿಕಾ ಕಳಕಪ್ಪನವರ ಮಾತನಾಡಿದರು.

ರೂಡಗಿ ಗ್ರಾಮದ ಸಂಗಮೇಶ ಹಾರಿವಾಳ ಸಮ್ಮೇಳನಕ್ಕೆ ತಮ್ಮ ಗ್ರಾಮದಿಂದ 2 ಸಾವಿರ ರೊಟ್ಟಿ ನೀಡುವುದಾಗಿ ಹೇಳಿದರು.

ಈ ವೇಳೆ ಶ್ರೀಶೈಲ ಮರೋಳ, ಅಣ್ಣಾಸಾಹೇಬ ನಾಡಗೌಡ, ಹಣಮಂತ ಕುರಿ, ಆರ್ ಡಿ ಶಿವನಗುತ್ತಿ, ಎಸ್ ಬಿ ಚಲವಾದಿ ಮಲ್ಲು ಗಂಗನಗೌಡರ, ಅಶೋಕ ಮಣಿ, ವೈ ಹೆಚ್ ವಿಜಯಕರ, ಹುಸೇನ್ ಮುಲ್ಲಾ ಚಂದ್ರು ಕಲಾಲ, ರಾಜು ಬಳ್ಳೊಳ್ಳಿ ಸೇರಿದಂತೆ ಸಾಹಿತಿಗಳು ಸಮ್ಮೇಳನದ ಸಮಿತಿಯ ಪದಾಧಿಕಾರಿಗಳು ಭಾಗವಹಿಸಿದ್ದರು.


ಉದಯವಾಹಿನಿ ಚಿತ್ರ




> ಹಿರಿಯ ಸಾಹಿತಿ ಬಿ.ಎಂ ಹಿರೇಮಠ ಮಾತನಾಡಿ ಕನ್ನಡ ನಮ್ಮ ಅಸ್ಮಿತೆ ಕನ್ನಡದ ತೇರನ್ನು ಎಲ್ಲರೂ ಸೇರಿ ಎಳೆಯಬೇಕು ಟೀಕೆಗಳನ್ನು ಬದಗಿರಿಸಿ ಸಾಹಿತ್ಯ ಸಮ್ಮೇಳನದ ಯಶಸ್ವನತ್ತ ಮುನ್ನಡೆಯಬೇಕೆಂದ ಅವರು ಮುದ್ದೇಬಿಹಾಳ ಬಸವಣ್ಣನವರ ಮುತ್ತಜ್ಜಿ ಮುದ್ದಬ್ಬೆಯ ಊರು ಇಲ್ಲಿ ರಂಶ್ರೀಮುಗಳಿ,ಹುಯಿಲಗೋಳ ನಾರಾಯಣಸ್ವಾಮಿ ಜನಿಸಿದ್ದಾರೆ ಇಲ್ಲಿನ ಸಾಹಿತ್ಯ ಸಮ್ಮೇಳನದ ಶಿವರಾಮ್ ಕಾರಂತ ಬರಗೂರ ರಾಮಚಂದ್ರಪ್ಪ ಅಧ್ಯಕ್ಷರಾಗಿದ್ದರ ಬಗ್ಗೆ ಸ್ಮರಿಸಿದರು .

ಆರ್ ಜಿ ಕಿತ್ತೂರ ಸ್ವಾಗತಿಸಿದರು, ಪಿ.ಎಸ್ ಬಡಿಗೇರ ಪ್ರಾರ್ಥಿಸಿದರು ಎ.ಬಿ ಗುಡಗುಂಟಿ ನಿರೂಪಿಸಿದರು.

ಸಿದ್ದನಗೌಡ ಬಿಜ್ಜೂರ ವಂದಿಸಿದರು. ಅರ್ಥಪೂರ್ಣ ಲಾಂಛನ; 5 ನೇ ತಾಲ್ಲೂಕ ಸಾಹಿತ್ಯ ಸಮ್ಮೇಳನದ ಲಾಂಛನವನ್ನು ಯರಗಲ್ ಗ್ರಾಮದ ಕಲಾ ಶಿಕ್ಷಕ ಬಸವರಾಜ ಹಡಪದ ರಚನೆ ಮಾಡಿದ್ದು ತಾಲ್ಲೂಕಿನ ಐತಿಹಾಸಿಕ ತಂಗಡಗಿ ನೀಲಮ್ಮ ದೇವಾಲಯ ,ಶರಣ ವೀರೇಶ್ವರರು, ಪವಾಡ ಬಸವೇಶ್ವರ, ಮೂಕಿಹಾಳ ದರ್ಗಾ, ಸರೂರಿನ ಏಳುಗುಡಿ, ಕಾಮದೇನು, ಪಟ್ಟಣದ ಬಸವೇಶ್ವರ ವೃತ್ತ ಅಂಬೇಡ್ಕರ್ ಪ್ರತಿಮೆ ಮತ್ತು ಐದು ಬಗೆಯ ಬೆಳೆಗಳನ್ನು ಒಳಗೊಂಡಿದೆ.

# ಶುಂಠಿ, ಬೆಳ್ಳುಳ್ಳಿ ಬೆಲೆ ಭಾರಿ ಕುಸಿ: ಬೆಳೆಗಾರರು ಕಂಗಾಲು

### ತಿಂಗಳ ಹಿಂದೆ ಪ್ರತಿ ಕೆ.ಜಿ.ಗೆ ಬೆಳ್ಳುಳ್ಳಿ ಬೆಲೆ 500 ಇತ್ತು, ಅದೀಗ 250ಕ್ಕೆ ಕಮ್ಮಿಯಾಗಿದೆ, ಅರ್ಧಕ್ಕರ್ಧ ಬೆಲೆ ಕಡಿಮೆಯಾಗಿದೆ

• ಉದಯವಾಹಿನಿ ಬೀದರ್

ಎಲ್ಲಾ ರೀತಿಯ ತರಕಾರಿ ಬೆಲೆಯಲ್ಲಿ ದಿಢೀರನೆ ಕುಸಿತ ಉಂಟಾಗಿದೆ. ಕಳೆದ ತಿಂಗಳಿದ್ದ ತರಕಾರಿ ಬೆಲೆ ಈಗಿಲ್ಲ. ಎರಡು ತಿಂಗಳ ಹಿಂದೆ ಇದ್ದ ಶುಂಠಿ, ಬೆಳ್ಳುಳ್ಳಿಯ ದರ ಈಗ ಭಾರಿ ಪ್ರಮಾಣದಲ್ಲಿ ಕುಸಿದಿದೆ. ವಾಣಿಜ್ಯ ಬೆಳೆ ಬೆಳೆದವರು ಕಡಿಮೆ ಬೆಲೆಗೆ ಮಾರಾಟ ಮಾಡಿ ಕೈಸುಟ್ಟುಕೊಳ್ಳುತ್ತಿದ್ದಾರೆ.

ತಿಂಗಳ ಹಿಂದೆ ಪ್ರತಿ ಕೆ.ಜಿ.ಗೆ ಬೆಳ್ಳುಳ್ಳಿ ಬೆಲೆ 500 ಇತ್ತು. ಅದೀಗ 250ಕ್ಕೆ ಕಮ್ಮಿಯಾಗಿದೆ. ಅರ್ಧಕ್ಕರ್ಧ ಬೆಲೆ ಕಡಿಮೆಯಾಗಿದೆ. ಅದೇ ರೀತಿ ಶುಂಠಿ ಬೆಲೆ 300ರಿಂದ 50ಕ್ಕೆ ಇಳಿದಿದೆ.

ವಾಣಿಜ್ಯ ಬೆಳೆಗಳ ಜೊತೆಗೆ ಟೊಮೆಟೊ, ಹೀರೇಕಾಯಿ, ಮೆಂತೆ ಸೊಪ್ಪು, ಸೌತೆಕಾಯಿ, ಹಾಗಲಕಾಯಿ, ಬೆಂಡೆಕಾಯಿ, ಬೀನ್ಸ್, ಬೀಟ್ ರೂಟ್ ಸೇರಿದಂತೆ ಇತರೆಲ್ಲ ತರಕಾರಿಗಳ ಬೆಲೆಯೂ ಕಡಿಮೆಯಾಗಿದೆ. ಕಳೆದ ತಿಂಗಳು ಟೊಮೆಟೊ 40 ಕೆ.ಜಿ. ಇತ್ತು ಈಗ 10ರಿಂದ 20ರ ಆಸುಪಾಸಿನಲ್ಲಿ ಮಾರಾಟವಾಗುತ್ತಿದೆ.

> ತರಕಾರಿ ಒಂದು ರೀತಿಯ ಕಚ್ಚಾ ದಂಧೆ. ಇದನ್ನು ಹೆಚ್ಚು ದಿನ ಸ್ಟಾಕ್ ಮಾಡಲು ಆಗಲ್ಲ ಬೇಡಿಕೆ ಕುಸಿದು ಸರಕು ಹೆಚ್ಚು ಬಂದರೆ ದರ ಕುಸಿಯುತ್ತದೆ -ಸಿದ್ರಾಮಪ್ಪ ಆಣದೂರೆ ಜಿಲ್ಲಾಧ್ಯಕ್ಷ ರೈತ ಸಂಘ

ಇನ್ನು, ಸುಗ್ಗಿ ಹಬ್ಬ ಎಳ್ಳ ಅಮಾವಾಸ್ಯೆ ಸಂದರ್ಭದಲ್ಲಿಯೇ ಮೆಂತೆ ಸೊಪ್ಪು ಪ್ರತಿ ಕೆ.ಜಿಗೆ 40ರಿಂದ 50ಕ್ಕೆ ಮಾರಾಟವಾಗಿತ್ತು. ಈಗ ಅದನ್ನು ಯಾರು ಕೇಳುವವರು ಇಲ್ಲದಂತಾಗಿದೆ. 15ರಿಂದ 20ಕ್ಕೆ ಮಾರಾಟ ಮಾಡಲಾಗುತ್ತಿದೆ.ಅದೇ ರೀತಿ ಬೀನ್ಸ್ 120ರಿಂದ 140 ಇತ್ತು ಈಗ ಅದು 60ರಿಂದ 80 ನಡುವೆ ಮಾರಾಟವಾಗುತ್ತಿದೆ. ತರಕಾರಿ ಸಾಮಾನ್ಯವಾಗಿ ಎರಡೂರು ತಿಂಗಳಲ್ಲಿ ಕೈಗೆ ಬರುವ ಬೆಳೆ, ಎರಡೂರು ತಿಂಗಳ ಹಿಂದೆ ತರಕಾರಿ ಬೆಳೆದವರಿಗೆ ಈಗ ಕೈಗೆ ಫಸಲು ಬರುತ್ತಿದೆ. ಹೆಚ್ಚಿನ ಪ್ರಮಾಣದಲ್ಲಿ ಟೊಮೆಟೊ, ಬೀನ್ಸ್, ಶುಂಠಿ, ಮೆಂತೆ ಸೊಪ್ಪು ಬರುತ್ತಿದೆ. ಬೇರೆ ಜಿಲ್ಲೆ, ಬೇರೆ ರಾಜ್ಯದಿಂದಲೂ ತರಕಾರಿ ಹೆಚ್ಚಾಗಿ ಬರುತ್ತಿದೆ. ಇದರಿಂದಾಗಿ ಎಲ್ಲಾ ತರಕಾರಿಗಳ ಬೆಲೆ ಕುಸಿದಿದೆ.


ಉದಯವಾಹಿನಿ ಚಿತ್ರ

> ಶುಂಠಿ ಪ್ರತಿ ಕೆ.ಜಿ ಕನಿಷ್ಠ ?100ಕ್ಕೆ ಮಾರಾಟವಾದರೆ ರೈತರು ಹಾಕಿದ ಬಂಡವಾಳ ಬರುತ್ತೆ. ಇಲ್ಲವಾದರೆ ನಷ್ಟ ಅನುಭವಿಸಬೇಕಾಗುತ್ತದೆ. ಏನೇ ಆದರೂ ರೈತರಿಗೆ ಸಮಸ್ಯೆ
> -ಬಾಬುರಾವ್ ಜೋಳದಾಪಕೆ ಮುಖಂಡ ರೈತ ಸಂಘ

**ಫೆಬ್ರುವರಿ ಕೊನೆತನಕ ಹೀಗೆ**

ಈಗಿರುವ ಟ್ರೆಂಡ್ ಫೆಬ್ರುವರಿ ಕೊನೆಯ ತನಕ ಮುಂದುವರೆಯಲಿದೆ. ಈಗ ಎಲ್ಲಾ ರೀತಿಯ ತರಕಾರಿ ಬರುವುದು ಹೆಚ್ಚಾಗಿದೆ. ಇನ್ನೂ ಕೂಡ ಚಳಿಯ ಪ್ರಮಾಣ ಇದೆ. ಮಂಜಿನಿಂದಲೇ ತರಕಾರಿ ಬೆಳೆಯುತ್ತದೆ. ಮಾರ್ಚ್ ನಂತರವೇ ತರಕಾರಿ ಮಾರುಕಟ್ಟೆಗೆ ಬರುವುದು ಕಡಿಮೆಯಾಗುತ್ತದೆ. ಆಗ ಬೆಲೆ ಹೆಚ್ಚಾಗಲು ಶುರುವಾಗುತ್ತದೆ' ಎಂದು ಹೇಳಿದ್ದಾರೆ.

ಇದರಿಂದ ಎಲ್ಲರಿಗೂ ನಷ್ಟ ಉಂಟಾಗುತ್ತಿದೆ' ಎಂದು ನಗರದ ಜನವಾಡ ರಸ್ತೆಯ ರಾಜೀವ ಗಾಂಧಿ ವೃತ್ತದಲ್ಲಿ ತರಕಾರಿ ಮಾರಾಟ ಮಾಡುವ ವ್ಯಾಪಾರಿ ಮೆಹಮೂದ್ ತಿಳಿಸಿದ್ದಾರೆ.

'ಡಿಸೆಂಬರ್ ತಿಂಗಳ ವರೆಗೆ ಮದುವೆ, ಮುಂಜಿ ಸೇರಿದಂತೆ ಹೆಚ್ಚಿನ ಕಾರ್ಯಕ್ರಮಗಳಿದ್ದವು. ಸಹಜವಾಗಿಯೇ ತರಕಾರಿಗೆ ಬೇಡಿಕೆ ಇತ್ತು. ಜನವರಿಯಿಂದ ಫೆಬ್ರುವರಿ ತನಕ ಕೌಟುಂಬಿಕ ಕಾರ್ಯಕ್ರಮಗಳು ಹೆಚ್ಚಾಗಿ ಇರುವುದಿಲ್ಲ. ತರಕಾರಿಗೂ ಬೇಡಿಕೆ ಇರುವುದಿಲ್ಲ. ಇದು ಕೂಡ ಬೆಲೆ ಇಳಿಕೆಗೆ ಒಂದು ಕಾರಣ' ಎಂದು ಗುಂಪಾ ಸಮೀಪದ ತರಕಾರಿ ವ್ಯಾಪಾರಿ ಬಸವರಾಜ ತಿಳಿಸಿದ್ದಾರೆ. ತರಕಾರಿಯಲ್ಲಿ ವಿಶೇಷವಾಗಿ ಶುಂಠಿ ಬೆಲೆ ಅಂತರರಾಷ್ಟ್ರೀಯ ಮಾರುಕಟ್ಟೆಯನ್ನು ಅವಲಂಬಿಸಿದೆ. ಶುಂಠಿಯಲ್ಲಿ ಔಷಧೀಯ ಗುಣವಿದೆ. ವಿವಿಧ ಔಷಧಿ ತಯಾರಿಕೆ ಕಂಪನಿಗಳು ಅದನ್ನು ಖರೀದಿಸುತ್ತವೆ.

ಗುಣಮಟ್ಟದ ಶುಂಠಿಗೆ ಮೊದಲ ಆದ್ಯತೆ ನೀಡುತ್ತಾರೆ. ಯಾವುದಾದರೂ ದೇಶದಲ್ಲಿ ಆಯಾ ಕಾಲದಲ್ಲಿ ಉತ್ತಮ ಗುಣಮಟ್ಟದ ಶುಂಠಿ ಸಿಕ್ಕರೆ ಇನ್ನುಳಿದ ದೇಶಗಳಲ್ಲಿ ಅದರ ಬೆಲೆ ಮೇಲೆ ಪರಿಣಾಮ ಉಂಟಾಗುತ್ತದೆ' ಎಂದು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ವಿಶ್ವನಾಥ ಜೀರಳಿ ತಿಳಿಸಿದ್ದಾರೆ 'ಮಾರುಕಟ್ಟೆ ಏರಿಳಿತ ಕಾರಣ'

# ಜಿಡಿಪಿ ಬೆಳವಣಿಗೆ 6.8ಕ್ಕೆ ಏರಿಕೆ ಸಾಧ್ಯತೆ : ಸಮೀಕ್ಷೆ

## ಸಚಿವೆ ನಿರ್ಮಲಾ ಸೀತರಾಮನ್ ಅವರು ಸಂಸತ್‌ನಲ್ಲಿ ಮಂಡಿಸಿರುವ ಆರ್ಥಿಕ ಸಮೀಕ್ಷೆಯಲ್ಲಿ ಇದು ಬಹಿರಂಗಗೊಂಡಿದೆ

**ನವದೆಹಲಿ:** 2024-25ರ ಆರ್ಥಿಕ ಸಮೀಕ್ಷೆ ಪ್ರಕಾರ ಮುಂದಿನ 2025-26ರ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆಯು 6.3ರಿಂದ 6.8ರ ನಡುವೆ ಇರುತ್ತದೆ ಎಂದು ಅಂದಾಜಿಸಲಾಗಿದೆ. ಹಣಕಾಸು ಸಚಿವೆ ನಿರ್ಮಲಾ ಸೀತರಾಮನ್ ಅವರು ಸಂಸತ್‌ನಲ್ಲಿ ಮಂಡಿಸಿರುವ ಆರ್ಥಿಕ ಸಮೀಕ್ಷೆಯಲ್ಲಿ ಇದು ಬಹಿರಂಗಗೊಂಡಿದೆ. ಭಾರತದ ಆರ್ಥಿಕತೆಯು ಸ್ಥಿರವಾದ ಬೆಳವಣಿಗೆಯ ಹಾದಿಯಲ್ಲಿದೆ.

ಮುಂಬರುವ ವರ್ಷಗಳಲ್ಲಿ ದೇಶವು ತನ್ನ ಆರ್ಥಿಕ ಬೆಳವಣಿಗೆಯ ದರವನ್ನು ವೇಗಗೊಳಿಸಲು ಗುರಿಯನ್ನು ಹೊಂದಿರುವುದರಿಂದ, ದೇಶೀಯ ಕಾರ್ಪೊರೇಟ್ ಮತ್ತು ಹಣಕಾಸು ವಲಯಗಳಲ್ಲಿ ಬಲವಾದ ಆಯವ್ಯಯ ಪಟ್ಟಿಯನ್ನು ಹೊಂದಿದೆ. ಆದರೆ, ಜಾಗತೀಕರಣ ಹಿಂದೆ ಸರಿಯುತ್ತಿದೆ. ಆದ್ದರಿಂದ, ಮುಂದಿನ ಎರಡು ದಶಕಗಳಲ್ಲಿ ಬೆಳವಣಿಗೆಯ ಸರಾಸರಿಯನ್ನು ಹೆಚ್ಚಿಸಲು ಜನಸಂಖ್ಯಾ ಲಾಭಾಂಶವನ್ನು ಪಡೆಯುವ ಅಗತ್ಯವಿದೆ ಎಂದು ಆರ್ಥಿಕ ಸಮೀಕ್ಷೆ 2025 ಹೇಳಿದೆ.

ದೇಶವು ದೇಶದ ಗಡಿಗಳನ್ನು ರಕ್ಷಿಸಲು ಮತ್ತು ಆಂತರಿಕ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಹಲವಾರು ಐತಿಹಾಸಿಕ ಕ್ರಮಗಳನ್ನು ತೆಗೆದುಕೊಂಡಿದೆ ಸರ್ಕಾರವು ರಕ್ಷಣಾ ವಲಯದಲ್ಲಿ ಸ್ವಾವಲಂಬನೆಯತ್ತ ಹೆಜ್ಜೆ ಹಾಕಿದೆ. ಮೇಕ್ ಇನ್ ಇಂಡಿಯಾದಿಂದ ನಾವು ಜಗತ್ತಿಗೆ ಮಾಡಲು ಮುಂದಾಗಿದ್ದೇವೆ ಎಂದಿದ್ದಾರೆ.

> **ಸರ್ಕಾರದ ಪ್ರಯತ್ನಗಳಿಂದಾಗಿ ಭಾರತವು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲು ಸಿದ್ಧವಾಗಿದೆ ಎಂದು ರಾಷ್ಟ್ರಪತಿಗಳು ವಿಶ್ವಾಸ ವ್ಯಕ್ತಪಡಿಸಿದರು. ತನ್ನ ಆಡಳಿತದ ಮಾರ್ಗದರ್ಶಿ ಸೂತ್ರಗಳನ್ನು ಪುನರುಚ್ಚರಿಸಿ ಸಬ್ಕಾ ಸಾಥ್, ಸಬ್ಕಾ ವಿಕಾಸ್, ಸಬ್ಕಾ ವಿಶ್ವಾಸ್, ಸಬ್ಕಾ ಪ್ರಯಾಸ್ (ಎಲ್ಲರೊಂದಿಗೆ, ಎಲ್ಲರಿಗೂ ಅಭಿವೃದ್ಧಿ, ಎಲ್ಲರ ನಂಬಿಕೆ, ಎಲ್ಲರ ಪ್ರಯತ್ನ) ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.**

ಮುಂದಿನ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ 6.3ರಿಂದ 6.8ರಷ್ಟು ಏರಿಕೆಯಾಗುವ ಸಂಭವವಿದೆ. ಇದೊಂದು ಆಶದಾಯಕ ಬೆಳವಣಿಗೆ. ಸರ್ಕಾರದ ದಿಟ್ಟ ಕ್ರಮಗಳಿಂದಾಗಿ ಇತರೆ ದೇಶಗಳಿಗೆ ಹೋಲಿಸಿದರೆ ನಾವು ಚೇತರಿಕೆ ಹಾದಿಯಲ್ಲಿದ್ದೇವೆ. ಯಾವುದೇ ಪರಿಸ್ಥಿತಿಯನ್ನು ಎದುರಿಸಲು ದೇಶವು ಸಿದ್ದವಾಗಿದೆ ಎಂಬ ಅಂಶವು ಉಲ್ಲೇಖವಾಗಿದೆ.

ಖಾಸಗಿ ಬಳಕೆ ಸ್ಥಿರವಾಗಿದ್ದು, ದೇಶೀಯ ಬೇಡಿಕೆಯು ಹೆಚ್ಚುತ್ತಿದೆ. ಹಣಕಾಸಿನ ಶಿಸ್ತು ಮತ್ತು ಬಾಹ್ಯ ಸಮತೋಲನವು ಆರೋಗ್ಯಕರವಾಗಿದೆ. ನಮ ಆರ್ಥಿಕ ಬೆಳವಣಿಗೆಯು ಸ್ಥೂಲವಾದ ದಾರಿಯಲ್ಲಿದೆ. ಈ ಅಂಶಗಳು ಬಾಹ್ಯ ಅನಿಶ್ಚಿತತೆಗಳ ನಡುವೆ ನಿರಂತರ ಬೆಳವಣಿಗೆಗೆ ಭದ್ರ ಬುನಾದಿಯನ್ನು ಒದಗಿಸಿದೆ ಎಂದು ಸಮೀಕ್ಷೆ ಹೇಳಿದೆ.




ಇತ್ತೀಚಿನ ದಿನಗಳಲ್ಲಿ ಆಹಾರ ಹಣದುಬ್ಬರವು ಕುಸಿಯುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿರುವ ಸಮೀಕ್ಷೆ, ಮುಂದಿನ ತ್ರೈಮಾಸಿಕ ಅವಧಿಯಲ್ಲಿ ಇದು ಇಳಿಕೆಯಾಗುವ ಸಂಭವವಿದೆ. ತರಕಾರಿ ಬೆಲೆಗಳ ಹೆಚ್ಚಳ ನಿರೀಕ್ಷಿತ ಮಟ್ಟದಲ್ಲಿ ಋತುಮಾನದ ಕುಸಿತ, ಖಾರೀಫ್ ಬೆಳೆ ಆಗಮನದಿಂದ ಆಹಾರದ ಹಣದುಬ್ಬರ ಹೆಚ್ಚಳವಾಗಿತ್ತು. ಇದು ಸರಿ ದಾರಿಗೆ ಬರುವ ಸಂಭವವಿದೆ ಎಂದು ನಿರೀಕ್ಷೆ ಮಾಡಲಾಗಿದೆ.

2020ರ ಹಣಕಾಸಿನ ಮೊದಲರ್ಧದ ಅವಧಿಯಲ್ಲಿ ಆಹಾರ ಬೆಲೆಗಳನ್ನು ನಿಯಂತ್ರಣದಲ್ಲಿಡಲು ನಿರೀಕ್ಷಿಸಲಾಗಿದ್ದು, ಗ್ರಾಹಕರಿಗೆ ಪರಿಹಾರವನ್ನು ಒದಗಿಸಲಾಗುತ್ತದೆ. ದೇಶದ ವಿವಿಧ ವಲಯಗಳಲ್ಲಿ ಹೂಡಿಕೆ ಮಂದಗತಿಯಲ್ಲಿ ಸಾಗುತ್ತಿದೆ ಎಂಬುದು ಕೂಡ ಸಮೀಕ್ಷೆಯಲ್ಲಿ ಬಹಿರಂಗಗೊಂಡಿದೆ. ಇದು ತಾತ್ಕಾಲಿಕ ಎಂದಷ್ಟೇ ಹೇಳಿರುವ ಆರ್ಥಿಕ ಸಮೀಕ್ಷೆ ನೀತಿ ಬೆಂಬಲ ಮತ್ತು ವ್ಯಾಪಾರ ಮನೋಭಾವವನ್ನು ಸುಧಾರಿಸುವುದು ಸೇರಿದಂತೆ ಹಲವಾರು ಅಂಶಗಳು ಹೂಡಿಕೆಗಳಿಗೆ ಪೂರಕವಾಗಬಹುದು. ಆರೋಗ್ಯ, ರಕ್ಷಣೆ, ಸಂಶೋಧನೆ, ಕ್ರಿಮಿನಲ್ ನ್ಯಾಯ, ಶಿಕ್ಷಣ, ವ್ಯಾಪಾರ ಮತ್ತು ಹಣಕಾಸು ಸೇವೆಗಳಂತಹ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವ ಕ್ಷೇತ್ರದಲ್ಲಿ ಕೃತಕ ಬುದ್ದಿಶಕ್ತಿ ಮಾನವ ಕಾರ್ಯಕ್ಷಮತೆಯನ್ನು ಮೀರಿಸುತ್ತದೆ. ಈ ಪ್ರಗತಿಯು ಕಾರ್ಮಿಕರ ಸ್ಥಳಾಂತರಕ್ಕೆ ಗಮನಾರ್ಹ ಬೆಳವಣಿಗೆಯಾಗಬಹುದು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿ 100 ವರ್ಷ ಪೂರ್ಣಗೊಳ್ಳುವ 2047ಕ್ಕೆ ವಿಕಸಿತ ಭಾರತದ ಗುರಿಯನ್ನು ಸಾಕಾರಗೊಳಿಸಲು ದೇಶವು ಸುಮಾರು ಒಂದು ಅಥವಾ ಎರಡು ದಶಕಗಳವರೆಗೆ ಸ್ಥಿರ ಬೆಲೆಗಳಲ್ಲಿ ಸುಮಾರು 8 ಪ್ರತಿಶತದಷ್ಟು ಬೆಳವಣಿಗೆಯ ದರವನ್ನು ಸಾಧಿಸಬೇಕಾಗಿದೆ.

ಜಾಗತಿಕ ಪರಿಸರ, ರಾಜಕೀಯ ಬೆಳವಣಿಗೆಗಳು, ದೇಶದ ಆರ್ಥಿಕ ಬೆಳವಣಿಗೆಗಳ ಮೇಲೆ ಪ್ರಭಾವ ಬೀರುವುದನ್ನು ತಳ್ಳಿ ಹಾಕುವಂತಿಲ್ಲ ಎಂಬುದು ಸಮೀಕ್ಷೆಯಿಂದ ಗೊತ್ತಾಗಿದೆ.

### ಸಮೀಕ್ಷೆ ವಿಶ್ವಾಸ

**ದೇಶೀಯ ಹೂಡಿಕೆ, ಉತ್ಪಾದನಾ ಬೆಳವಣಿಗೆ ಮತ್ತು ಹಣದುಬ್ಬರ ಇಳಿತದ ಪ್ರವೃತ್ತಿಗಳು ಮುಂದಿನ ಹಣಕಾಸು ವರ್ಷದಲ್ಲಿ ನಾವು ಧನಾತಕ ಅಂಶಗಳನ್ನು ಕಾಣಬಹುದು ಎಂದು ಸಮೀಕ್ಷೆ ಹೇಳಿದೆ. ಮೂಲ ಸೌಕರ್ಯಗಳನ್ನು ಸುಧಾರಿಸುವುದು ಮತ್ತು ಬೆಳವಣಿಗೆಯ ಗುರಿಯನ್ನು ಹೆಚ್ಚಿಸುವ, ಸ್ಥೂಲ ಆರ್ಥಿಕ ಸ್ಥಿರತೆಯೊಂದಿಗೆ ಬಳಕೆ ನಿಯಂತ್ರಿತ ಹಣದುಬ್ಬರವು ಹೂಡಿಕೆಯ ಬೆಳವಣಿಗೆಯಿಂದ ಭಾರತದ ಆರ್ಥಿಕತೆಯನ್ನು ಸುಸ್ಥಿರಗೊಳಿಸಿದೆ ಎಂದು ಸಮೀಕ್ಷೆ ವಿಶ್ವಾಸ ವ್ಯಕ್ತಪಡಿಸಿದೆ.**

## ಬ್ರಿಕ್ಸ್ ರಾಷ್ಟ್ರಗಳಿಗೆ ಟ್ರಂಪ್ ವಾರ್ನಿಂಗ್

**ವಾಷಿಂಗ್ಟನ್:** ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಅಮೆರಿಕದ ಡಾಲರ್ ಅನ್ನು ಬದಲಿಸಲು ಪ್ರಯತ್ನಿಸಿದರೆ ಬ್ರಿಕ್ಸ್ ರಾಷ್ಟ್ರಗಳ ವಿರುದ್ಧ ಶೇಕಡಾ 100 ರಷ್ಟು ಸುಂಕವನ್ನು ವಿಧಿಸುವುದಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೊಮ್ಮೆ ಎಚ್ಚರಿಸಿದ್ದಾರೆ. ಬ್ರಿಕ್ಸ್ ಹತ್ತು ದೇಶಗಳ ಅಂತರ್ ಸರ್ಕಾರಿ ಸಂಸ್ಥೆಯಾಗಿದೆ ?ರಷ್ಯಾ, ಭಾರತ, ಚೀನಾ, ದಕ್ಷಿಣ ಆಫ್ರಿಕಾ, ಈಜಿಪ್ಟ್, ಇಥಿಯೋಪಿಯಾ, ಇಂಡೋನೇಷಿಯಾ, ಇರಾನ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ದೇಶಗಳನ್ನು ಒಳಗೊಂಡಿದೆ.




ಬ್ರಿಕ್ಸ್ ದೇಶಗಳು ಡಾಲರ್‌ನಿಂದ ದೂರ ಸರಿಯಲು ಪ್ರಯತ್ನಿಸುತ್ತಿವೆ, ಅಂತಹ ಪ್ರಯತ್ನ ಮುಂದುವರೆದರೆ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಟ್ರಂಪ್ ತಮ ಮಾಲೀಕತ್ವದ ಸಾಮಾಜಿಕ ಮಾಧ್ಯಮ ವೇದಿಕೆಯಾದ ಟ್ರೂತ್ ಸೋಶಿಯಲ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಅಥವಾ ಬೇರೆಲ್ಲಿಯಾದರೂ ಬ್ರಿಕ್ಸ್ ಯುಎಸ್ ಡಾಲರ್ ಅನ್ನು ಬದಲಿಸುವ ಯಾವುದೇ ಅವಕಾಶವಿಲ್ಲ, ಮತ್ತು ಯಾವುದೇ ದೇಶವು ಸುಂಕಗಳಿಗೆ ಹಲೋ ಹೇಳಬೇಕು ಮತ್ತು ಅಮೆರಿಕಕ್ಕೆ ವಿದಾಯ ಹೇಳಬೇಕು ಎಂದು ಟ್ರಂಪ್ ಬೆದರಿಕೆ ಹಾಕಿದ್ದಾರೆ.

ತಮ ಸ್ವಂತ ಕರೆನ್ಸಿಯನ್ನು ತೇಲಿಸುವ ಯಾವುದೇ ಕ್ರಮದ ವಿರುದ್ಧ ಬ್ರಿಕ್ಸ್ ರಾಷ್ಟ್ರಗಳನ್ನು ಟ್ರಂಪ್ ಪದೇ ಪದೇ ಟೀಕಿಸುತ್ತಿದ್ದರೂ, ಇದು ಇದುವರೆಗಿನ ಅವರ ಪ್ರಬಲ ವಿರೋಧವಾಗಿದೆ. ಡಿಸೆಂಬರ್‌ನಲ್ಲೂ ಟ್ರಂಪ್ ಇಂತಹ ಕ್ರಮದ ವಿರುದ್ಧ ಬ್ರಿಕ್ಸ್ ರಾಷ್ಟ್ರಗಳಿಗೆ ಎಚ್ಚರಿಕೆ ನೀಡಿದ್ದರು.

## ಇತ್ತೀಚೆಗಷ್ಟೇ ಸನ್ಯಾಸಿಯಾಗಿದ್ದ ಮಮತಾ ಕಿನ್ನರ ಅಖಾಡದಿಂದ ವಜಾ

**ಪ್ರಯಾಗ್ರಾಜ್:** ಇತ್ತೀಚೆಗಷ್ಟೇ ಬಾಲಿವುಡ್ ಚಿತ್ರರಂಗ ತೊರೆದು ಸನ್ಯಾಸಿಯಾಗುವ ಮೂಲಕ ಆಧ್ಯಾತಿಕ ಜೀವನದತ್ತ ಕಾಲಿಟ್ಟಿದ್ದ ಚಿತ್ರನಟಿ ಮಮತಾ ಕುಲಕರ್ಣಿ ಅವರನ್ನು ಕಿನ್ನರ ಅಖಾಡದಿಂದ ವಜಾಗೊಳಿಸಲಾಗಿದೆ. ದೇಶದ್ರೋಹ ಆರೋಪದ ಮೇಲೆ ಕಿನ್ನರ ಅಖಾಡದ ಸ್ಥಾಪಕ ವಿಜಯ್ ದಾಸ್ ಅವರು ಮಮತಾ ಅವರನ್ನು ಅಖಾಡದಿಂದ ಹೊರ ಹಾಕಿದ್ದಾರೆ.



**ದೇಶದ್ರೋಹ ಆರೋಪದ ಹಿನ್ನೆಲೆ**

ದೇಶದ್ರೋಹದ ಆರೋಪ ಹೊತ್ತಿರುವ ಮಮತಾ ಕುಲಕರ್ಣಿಯನ್ನು ಅಖಾಡಕ್ಕೆ ಸೇರಿಸಿದ್ದು ಮಾತ್ರವಲ್ಲದೇ ತಮ ಅರಿವಿಲ್ಲದೆ ಅವರನ್ನು ಮಹಾಮಂಡಲೇಶ್ವರ ಎಂದು ನೇಮಿಸಿದ್ದಕ್ಕಾಗಿ ಮಹಾಮಂಡಲೇಶ್ವರ ಲಕ್ಷಿನಾರಾಯಣ ತ್ರಿಪಾಠಿ ಅವರನ್ನೂ ಸಹ ಕಿನ್ನರ ಅಖಾಡದಿಂದ ಹೊರಹಾಕಿದ್ದಾರೆ. ಸ90ರ ದಶಕದಲ್ಲಿ ಬಾಲಿವುಡ್ ಸೇರಿದಂತೆ ಕನ್ನಡ ಸಿನಿಮಾದಲ್ಲಿ ನಟಿಸಿದ್ದ ಮಮತಾ ಕಿನ್ನರ ಅಖಾಡಕ್ಕೆ ಸೇರುವ ಮೂಲಕ ಮಹಾಮಂಡಲೇಶ್ವರಿ ಆಗಿದ್ದರು. ಮಮತಾ ಕುಲಕರ್ಣಿ ಹೆಸರನ್ನು ಬದಲಿಸಿಕೊಂಡು ಮಾಯಿ ಮಮತಾ ನಂದಗಿರಿ ಎಂದು ನಾಮಕರಣ ಮಾಡಿಕೊಂಡಿದ್ದರು. ಕಳೆದ 2 ವರ್ಷಗಳಿಂದ ಜೂನಾ ಅಖಾಡದೊಂದಿಗೆ ಸಂಪರ್ಕದಲ್ಲಿದ್ದ ಮಮತಾ, 2-3 ತಿಂಗಳಿಂದ ಕಿನ್ನರ ಅಖಾಡದೊಂದಿಗೆ ನಿಕಟ ಸಂಪರ್ಕ ಬೆಳೆಸಿಕೊಂಡಿದ್ದರು. ಇದೀಗ ಅದೇ ಅಖಾಡದ ಭಾಗವಾಗಲು ನಿರ್ಧರಿಸಿ ಲೌಕಿಕ ಜಗತ್ತನ್ನು ತೊರೆದು ಆಧ್ಯಾತಿಕ ಜಗತ್ತಿಗೆ ಇಳಿದಿದ್ದರು. ಮಮತಾ ಕುಲಕರ್ಣಿ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದ್ದರು.

ಬಳಿಕ ತಮ ಸ್ವಂತ ಪಿಂಡ ಪ್ರದಾನ ಮಾಡುವ ಮೂಲಕ ಕಿನ್ನರ ಅಖಾಡಕ್ಕೆ ಸೇರ್ಪಡೆಯಾಗಿ ಮಹಾಮಂಡಲೇಶ್ವರರಾಗಿದ್ದರು. ಇವರಿಗೆ ಕಿನ್ನರ ಅಖಾಡದ ಆಚಾರ್ಯ ಮಹಾಮಂಡಲೇಶ್ವರ ಲಕ್ಷಿನಾರಾಯಣ ತ್ರಿಪಾಠಿ ದೀಕ್ಷೆ ನೀಡಿದ್ದರು.

ನಟಿ ಕನ್ನಡದ ವಿಷ್ಣು ವಿಜಯ ಸಿನಿಮಾದಲ್ಲಿ ನಟಿಸಿದ್ದು, ವಕ್ತ ಹಮಾರಾ ಹೈ, ಕ್ರಾಂತಿವೀರ, ಸಬ್ಸೆ ಬಡಾ ಕಿಲಾಡಿ ಇನ್ನಿತರ ಬಾಲಿವುಡ್ ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದಾರೆ.

## ಹಿಂದೂಗಳ ವಿರುದ್ಧ ಷಡ್ಯಂತ್ರ: ಗಬ್ಬಾರ್ಡ್ ವಾಗ್ದಾಳಿ

**ಸಮಿತಿಯ ಮುಂದೆ ವಾಗ್ದಾಳಿ**

ವಾಷಿಂಗ್ಟನ್: ಅಮೆರಿಕದ ರಾಷ್ಟ್ರೀಯ ಗುಪ್ತಚರ ವಿಭಾಗದ ನಿರ್ದೇಶಕಿಯಾಗಿ ನಾಮನಿರ್ದೇಶನಗೊಂಡ ತುಳಸಿ ಗಬ್ಬಾರ್ಡ್ ಅವರು ಹಿಂದೂಗಳ ವಿರುದ್ಧದ ಷಡ್ಯಂತ್ರದ ಕುರಿತು ಸೆನೆಟ್ ಆಯ್ಕೆ ಸಮಿತಿಯ ಮುಂದೆ ವಾಗ್ದಾಳಿ ನಡೆಸಿದ್ದಾರೆ.

ಅಮೇರಿಕನ್ ಆಡಳಿತದಲ್ಲಿ ನೇಮಕಾತಿಯ ಸಂಪ್ರದಾಯದ ಅಡಿಯಲ್ಲಿ, ನಾಮನಿರ್ದೇಶಿತ ಅಧಿಕಾರಿಗಳು ಸೆನೆಟ್ ಸಮಿತಿಗಳ ಮುಂದೆ ಹಾಜರಾಗಬೇಕು ಮತ್ತು ಶಾಸಕರು ಕೇಳುವ ಪ್ರಶ್ನೆಗಳಿಗೆ ಉತ್ತರಿಸಬೇಕು.

ಈ ಪ್ರಕ್ರಿಯೆಯಲ್ಲಿ ಗಬ್ಬಾರ್ಡ್‌ಗೆ ಲಿಖಿತ ಪ್ರಶ್ನೆಯನ್ನು ಕೇಳಲಾಗಿದೆ. ತುಳಸಿ ಗಬ್ಬಾರ್ಡ್ ಅವರು ಡೆಮಾಕ್ರಟಿಕ್ ಪಕ್ಷದ ಹೇಳಿಕೆಯನ್ನು ತೀವ್ರವಾಗಿ ವಿರೋಧಿಸಿದ್ದಾರೆ.



ಡೆಮಾಕ್ರಟಿಕ್ ಪಕ್ಷದ ಹೇಳಿಕೆಯಲ್ಲಿ, ತುಳಸಿ ಗಬ್ಬಾರ್ಡ್ ಅವರು ಟ್ರಂಪ್, ಪುಟಿನ್, ಅಸಾದ್ ಮತ್ತು ಮೋದಿಯವರ ಕೈಗೊಂಬೆ ಎಂದು ಡೆಮಾಕ್ರಟಿಕ್ ಪಕ್ಷವು ಆರೋಪಿಸಿದೆ. ಅಸ್ಸಾದ್ ಅಥವಾ ಗಡಾಫಿ ಅಥವಾ ಯಾವುದೇ ಸರ್ವಾಧಿಕಾರಿಯ ಬಗ್ಗೆ ನನಗೆ ಯಾವುದೇ ಪ್ರೀತಿ ಇಲ್ಲ. ನಾನು ಅಲ್-ಖೈದಾವನ್ನು ದ್ವೇಷಿಸುತ್ತೇನೆ. ಇಸ್ಲಾಮಿಸ್ಟ್ ಉಗ್ರರ ಜೊತೆ ಸ್ನೇಹಪರರಾಗಿರುವ ಎಲ್ಲಾ ನಾಯಕರನ್ನೂ ನಾನು ದ್ವೇಷಿಸುತ್ತೇನೆ ಎಂದು ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಹಿಂದೂಗಳು ಮತ್ತು ಹಿಂದೂ ಧರ್ಮದ ವಿರುದ್ಧ ಧಾರ್ಮಿಕ ಮತಾಂಧತೆಯನ್ನು ಪ್ರಚೋದಿಸಲು ಅವರು ಪ್ರಯತ್ನಿಸುತ್ತಿದ್ದಾರೆ ಎಂದು ತುಳಸಿ ಗಬ್ಬಾರ್ಡ್ ಅವರು ಡೆಮಾಕ್ರಟಿಕ್ ಸೆನೆಟರ್‌ಗಳ ತೀಕ್ಷ್ಣವಾದ ದಾಳಿಗೆ ತಿರುಗೇಟು ನೀಡಿದ್ದಾರೆ.

ದೇಶದ ಗುಪ್ತಚರ ಸಂಸ್ಥೆಯನ್ನು ಮುನ್ನಡೆಸಲು ಟ್ರಂಪ್ ಆಯ್ಕೆ ಮಾಡಿದ ನಂತರ, ತುಳಸಿ ಗಬ್ಬಾರ್ಡ್ ಅವರ ಹಿಂದೂ ಧರ್ಮದ ಬಗ್ಗೆ ಅವರ ಅನೇಕ ವಿರೋಧಿಗಳಿಂದ ಟೀಕೆಗಳನ್ನು ಎದುರಿಸಿದ್ದಾರೆ.

ಧರ್ಮಾಭಿಮಾನವನ್ನು ಧರ್ಮ ಭೇದವಿಲ್ಲದೆ ನಾವೆಲ್ಲರೂ ಸಂಪೂರ್ಣವಾಗಿ ಖಂಡಿಸಬೇಕು ಎಂದಿದ್ದಾರೆ.

## ಇಸ್ರೇಲ್ ದಾಳಿ: ಹಮಾಸ್ ಕಮಾಂಡರ್ ಸಾವು

**ಜೆರುಸಲೇಂ:** ಹಮಾಸ್ ತನ್ನ ಸೇನಾ ಕಮಾಂಡರ್ ಮೊಹಮ್ಮದ್ ಡೀಫ್ ಅವರ ಸಾವನ್ನು ದೃಢಪಡಿಸಿದೆ. ಇಸ್ರೇಲಿ ರಕ್ಷಣಾ ಪಡೆ ಘೋಷಣೆ ಮಾಡಿದ 6 ತಿಂಗಳ ನಂತರ ಈ ಸುದ್ದಿಯನ್ನು ದೃಢೀಕರಿಸಲಾಗಿದೆ. ಕಳೆದ ವರ್ಷದ ಆಗಸ್ಟ್‌ನಲ್ಲಿ, ಖಾನ್ ಯೂನಿಸ್ ಪ್ರದೇಶದಲ್ಲಿ ಜುಲೈ 13 ರಂದು ವೈಮಾನಿಕ ದಾಳಿಯಲ್ಲಿ ಮೊಹಮ್ಮದ್ ಡೈಫ್‌ನನ್ನು ಕೊಂದಿರುವುದಾಗಿ ಇಸ್ರೇಲ್ ಘೋಷಿಸಿದೆ.

ಮೊಹಮ್ಮದ್ ಡೇಫ್ ಹಮಾಸ್‌ನ ಮೋಸ್ಟ್ ವಾಂಟೆಡ್ ಪಟ್ಟಿಯಲ್ಲಿ ಸೇರಿದ್ದಾನೆ. ಮಾಹಿತಿಯ ಪ್ರಕಾರ, ಇಸ್ರೇಲ್ ಕಳೆದ ವರ್ಷ ಆಗಸ್ಟ್ 2024 ರಲ್ಲಿ ಮೊಹಮ್ಮದ್ ಡೀಫ್ ಅವರನ್ನು ಕೊಂದಿರುವುದಾಗಿ ಹೇಳಿಕೊಂಡಿದೆ, ಆದರೆ ಹಮಾಸ್ ಇದನ್ನು ಬಹಿರಂಗಪಡಿಸಲಿಲ್ಲ. ಇದರೊಂದಿಗೆ ಡೆಪ್ಯುಟಿ ಕಮಾಂಡರ್ ಮರ್ವಾನ್ ಇಸ್ಸಾ ಅವರ ಸಾವು ಕೂಡ ಸತ್ಯ ಎಂದು ಹಮಾಸ್ ಘೋಷಿಸಿದೆ. ಕಳೆದ ವರ್ಷ ಮಾರ್ಚ್‌ನಲ್ಲಿ ಅಮೆರಿಕ ಇಸಾ ಸಾವಿನ ಸುದ್ದಿ ಪ್ರಕಟಿಸಿದೆ. ಹಮಾಸ್ ವಕ್ತಾರ ಅಬು ಒಬೇದಾ ಅವರು ಡೀಫ್ ಸಾವನ್ನಪ್ಪಿದ್ದಾರೆ ಎಂದು ವಿಡಿಯೋ ಬಿಡುಗಡೆ ಮಾಡಿದ್ದಾರೆ. ವರದಿಯ ಪ್ರಕಾರ, ಅವರು ಹಮಾಸ್‌ನ ಮಿಲಿಟರಿ ವಿಭಾಗದ ಉಪ ಕಮಾಂಡರ್ ಘಾಜಿ ಅಬು ತಮಾ, ಮಿಲಿಟರಿ ವಿಭಾಗದ ಮುಖ್ಯಸ್ಥ ರಾದ್ ಥಾಬೆಟ್, ಖಾನ್ ಯೂನಿಸ್ ಬ್ರಿಗೇಡ್‌ನ ಕಮಾಂಡರ್ ರಾಫಾ ಸಲಾಮೆಹ್, ಸೆಂಟ್ರಲ್ ಗಾಜಾದ ಕಮಾಂಡರ್ ಐಮನ್ ನೋಫಲ್, ಬ್ರಿಗೇಡ್, ಮತ್ತು ಉತ್ತರ ಗಾಜಾ ಬ್ರಿಗೇಡ್‌ನ ಕಮಾಂಡರ್ ಅಹ್ಮದ್ ಘಂಡೂರ್ ಅವರ ಸಾವು ಕೂಡ ದೃಢಪಟ್ಟಿದೆ.



ಅಕ್ಟೋಬರ್ 7 ರಂದು ನಡೆದ ದಾಳಿಯ ಪ್ರಮುಖ ಸಂಚುಕೋರ ಮೊಹಮ್ಮದ್ ಡೇಫ್ ಎಂದು ಹೇಳಲಾಗಿದೆ. ಅವರು 2002 ರಲ್ಲಿ ಹಮಾಸ್‌ನ ಸೇನಾಪಡೆ, ಕಸ್ಸಾಮ್ ಬ್ರಿಗೇಡ್‌ನ ನಾಯಕರಾದರು ಮತ್ತು ಅದರ ಸಂಸ್ಥಾಪಕನ ಉತ್ತರಾಧಿಕಾರಿಯಾದರು. ಅಂದಿನಿಂದ ಅವರು ಇಸ್ರೇಲ್ ಮೇಲೆ ಹಲವಾರು ದಾಳಿಗಳನ್ನು ಯೋಜಿಸಿದ್ದರು.

## ವಿಮಾನ ಪತನ: ಬ್ಲಾಕ್ ಬಾಕ್ಸ್ ಪತ್ತೆ

**ವಾಷಿಂಗ್ಟನ್:** ಸೇನಾ ಹೆಲಿಕಾಪ್ಟರ್‌ಗೆ ಅಮೆರಿಕನ್ ವಿಮಾನಯಾನ ಸಂಸ್ಥೆಗೆ ಸೇರಿದ ವಿಮಾನ ಡಿಕ್ಕಿ ಹೊಡೆದ ಪರಿಣಾಮ 67 ಮಂದಿ ಸಾವನ್ನಪ್ಪಿದ್ದು ಘಟನೆಗೆ ಸಂಬಂಧಿಸಿದಂತೆ ವಿಮಾನದ ಬ್ಲಾಕ್ ಬಾಕ್ಸ್ ಪತ್ತೆಯಾಗಿದೆ. ವಿಮಾನದಲ್ಲಿ 60 ಪ್ರಯಾಣಿಕರು ಮತ್ತು ನಾಲ್ವರು ಸಿಬ್ಬಂದಿ ಇದ್ದರು. ಅಮೆರಿಕನ್ ಏರ್‌ಲೈನ್ಸ್ ವಿಮಾನ ರಾತ್ರಿ ವಾಷಿಂಗ್ಟನ್, ಡಿಸಿ ಬಳಿ ಮಿಲಿಟರಿ ಹೆಲಿಕಾಪ್ಟರ್‌ಗೆ ಡಿಕ್ಕಿ ಹೊಡೆದು ನದಿಯಲ್ಲಿ ಪತನಗೊಂಡಿತ್ತು. ಇದರಿಂದ ವಿಮಾನದಲ್ಲಿದ್ದ ಎಲ್ಲರೂ ಸಾವನ್ನಪ್ಪಿದ್ದರು.

ವಿಮಾನದ ಬ್ಲಾಕ್ ಬಾಕ್ಸ್ ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಅಪಘಾತಕ್ಕೆ ಕಾರಣ ತಿಳಿಯಲು ಸಹಕಾರಿಯಾಗಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ವಾಷಿಂಗ್ಟನ್‌ನ ಅಗ್ನಿಶಾಮಕ ಮತ್ತು ಇಎಂಎಸ್ ಮುಖ್ಯಸ್ಥ ಜಾನ್ ಡೊನ್ನೆಲ್ಲಿ ಸುದ್ದಿಗಾರೊಂದಿಗೆ ಮಾತನಾಡಿ ಘಟನಾ ಸ್ಥಳದಿಂದ 40ಕ್ಕೂ ಶವಗಳನ್ನು ವಶಪಡಿಸಿಕೊಳ್ಳಲಾಗಿದೆ, ಉಳಿದ ಮೃತದೇಹಗಳಿಗೆ ಶೋಧ ನಡೆಸಲಾಗಿದೆ. ವಿಮಾನದಲ್ಲಿದ್ದ 40 ಪ್ರಯಾಣಿಕರು ಮತ್ತು ಹೆಲಿಕಾಪ್ಟರ್‌ನಿಂದ ಒಬ್ಬರ ಮೃತದೇಹ ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ

ಈ ಹಂತದಲ್ಲಿ, ಅಪಘಾತದಿಂದ ಬದುಕುಳಿದವರು ಯಾರೂ ಇಲ್ಲ ಎಂದು ನಾವು ನಂಬುವುದಿಲ್ಲ, ಅಂತಿಮ ಹಂತದ ಕಾರ್ಯಾಚರಣೆ ನಡೆಸಲಾಗಿದೆ.''ರಕ್ಷಣಾ ಕಾರ್ಯಾಚರಣೆ ನಂತರವೇ ಮುಂದಿನ ವಿಷಯ ಹೇಳಲು ಸಾಧ್ಯ ಎಂದು ತಿಳಿಸಿದ್ದಾರೆ



ಫೆಡರಲ್ ಏವಿಯೇಷನ್ ಅಡ್ಮಿನಿಸ್ಟ್ರೇಷನ್ ಪ್ರಕಾರ, ವಾಣಿಜ್ಯ ವಿಮಾನ ರೇಗನ್ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಮೀಪಿಸುತ್ತಿದ್ದಾಗ 9 ಗಂಟೆಗೆ ಸ್ವಲ್ಪ ಮೊದಲು ಘರ್ಷಣೆ ಸಂಭವಿಸಿದೆ. ಅಪಘಾತದಲ್ಲಿ ಸಾವನ್ನಪ್ಪಿದವರಲ್ಲಿ ಫಿಗರ್ ಸ್ಕೇಟರ್‌ಗಳು ಮತ್ತು ಅವರ ಕುಟುಂಬ ಸದಸ್ಯರು ಮತ್ತು ತರಬೇತುದಾರರು ಸೇರಿದ್ದಾರೆ. ಕ್ರೀಡೆಯ ರಾಷ್ಟ್ರೀಯ ಆಡಳಿತ ಮಂಡಳಿಯಾದ ಅಮೇರಿಕಾದ ಫಿಗರ್ ಸ್ಕೇಟಿಂಗ್, ಸ್ಕೇಟಿಂಗ್ ಸಮುದಾಯದ ಹಲವಾರು ಸದಸ್ಯರು'' ಕನ್ಸಾಸ್‌ನಿಂದ ವಿಮಾನದಲ್ಲಿದ್ದರು ಎಂದು ಹೇಳಲಾಗಿದೆ.

ಡೊನಾಲ್ಡ್ ಟ್ರಂಪ್ ಸಂತಾಪ: ವಿಮಾನ ಅಪಘಾತ ಪ್ರಕಣಕ್ಕೆ ಸಂಬಂದಿಸಿದಂತೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತೀವ್ರ ಸಂತಾಪ ಸೂಚಿಸಿದ್ದಾರೆ. ಮೃತಪಟ್ಟ ಕುಟುಂಬದ ಮಂದಿಗೆ ದುಃಖ ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುವುದಾಗಿ ಅವರು ತಿಳಿಸಿದ್ದಾರೆ.

# ಬಾಕಿ ಪ್ರಕರಣಗಳ ಇತ್ಯರ್ಥ್ಯಕ್ಕೆ ಐವರು ನಿವೃತ್ತ ನ್ಯಾಯಾಧೀಶರ ನೇಮಕ

## ಪ್ರತಿ ಹೈಕೋರ್ಟ್‌ಗೆ ಗರಿಷ್ಠ 5 ನಿವೃತ್ತ ನ್ಯಾಯಾಧೀಶರನ್ನು ಮರು ನೇಮಕ ಮಾಡಿಕೊಳ್ಳಲು ಸುಪ್ರೀಂ ಕೋರ್ಟ್ ಸಮ್ಮತಿ

**ನವದೆಹಲಿ:** ದೇಶದ ವಿವಿದ ಹಂತದ ನ್ಯಾಯಾಲಯಗಳಲ್ಲಿ 62 ಲಕ್ಷ ಪ್ರಕರಣಗಳ ಬಾಕಿ ಇದ್ದು ಅವುಗಳ ಇತ್ಯರ್ಥಕ್ಕೆ ಅನುಕೂಲವಾಗುವಂತೆ ಪ್ರತಿ ಹೈಕೋರ್ಟ್ ಗೆ ಗರಿಷ್ಠ 5 ನಿವೃತ್ತ ನ್ಯಾಯಾಧೀಶರನ್ನು ಮರು ನೇಮಕ ಮಾಡಿಕೊಳ್ಳಲು ಸುಪ್ರೀಂ ಕೋರ್ಟ್ ಸಮ್ಮತಿಸಿದೆ.

ಕೇಂದ್ರ ಸರ್ಕಾರದ ಅನುಮತಿಯೊಂದಿಗೆ ಸುಪ್ರೀಂಕೋರ್ಟ್ , ಈ ಆದೇಶ ನೀಡಿದ್ದು ಕ್ರಿಮಿನಲ್ ಪ್ರಕರಣಗಳ ವಿಚಾರಣೆಗೆ ಪ್ರತಿ ಹೈಕೋರ್ಟ್‌ಗೆ ಗರಿಷ್ಠ ಐವರು ನಿವೃತ್ತ ಹೈಕೋರ್ಟ್ ನ್ಯಾಯಾಧೀಶರನ್ನು ಮರುನೇಮಕ ಮಾಡಬಹುದು ಎಂದು ಹೇಳಿದೆ.

**62 ಲಕ್ಷ ಪ್ರಕರಣಗಳ ಬಾಕಿ**

ರಾಜ್ಯ ಹೈಕೋರ್ಟ್ ನಲ್ಲಿ ಮಂಜೂರಾದ ಸಾಮರ್ಥ್ಯದ ಶೇಕಡಾ 10 ರಷ್ಟು ಮೀರಬಾರದು ಎಂದು ಸುಪ್ರೀಂಕೋರ್ಟ್ ತಿಳಿಸಿದೆ.

ಅಟಾರ್ನಿ ಜನರಲ್ ಆರ್ ವೆಂಕಟರಮಣಿ ಅವರು ಕೇಂದ್ರ ಸರ್ಕಾರದಿಂದ ಯಾವುದೇ ಆಕ್ಷೇಪಣೆಯನ್ನು ದಾಖಲಿಸದ ಕಾರಣ, ಮುಖ್ಯ ನ್ಯಾಯಮೂರ್ತಿ ನೇತೃತ್ವದ ಪೀಠ ಸಂವಿಧಾನದ ಸುಪ್ತ ವಿಧಿ 224 ಎ ಅಡಿಯಲ್ಲಿ ಮರುನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಿತು, ಕಳೆದ 75 ವರ್ಷಗಳಲ್ಲಿ ಕೇವಲ ಮೂರು ಬಾರಿ ಈ ರೀತಿಯ ಅಧಿಕಾರ ಮಾತ್ರ ಬಳಸಲಾಗಿದೆ.

ಪ್ರಕರಣಗಳ ಸಮರ್ಥ ವಿಲೇವಾರಿಯ ಸಾಬೀತಾದ ದಾಖಲೆಯೊಂದಿಗೆ ನಿವೃತ್ತ ನ್ಯಾಯಮೂರ್ತಿಗಳ ಹೆಸರನ್ನು ಸುಪ್ರೀಂ ಕೋರ್ಟ್ ಕೊಲಿಜಿಯಂಗೆ ಶಿಫಾರಸು ಮಾಡಲು ಈ ಕ್ರಮವು ಹೈಕೋರ್ಟ್ ಕೊಲಿಜಿಯಂಗಳನ್ನು ಸಕ್ರಿಯಗೊಳಿಸುತ್ತದೆ.

ನಂತರ ಸೂಕ್ತ ವ್ಯಕ್ತಿಗಳನ್ನು ಆಯ್ಕೆ ಮಾಡುತ್ತದೆ ಮತ್ತು ಅವರ ಹೆಸರನ್ನು ನಿಗದಿತ ಅವಧಿಗೆ ಹೈಕೋರ್ಟ್‌ಗೆ ತಾತ್ಕಾಲಿಕ ನ್ಯಾಯಾಧೀಶರಾಗಿ ನೇಮಕ ಮಾಡಲು ಶಿಫಾರಸು ಮಾಡುತ್ತದೆ. .

ಸುಪ್ರೀಂ ಕೋರ್ಟ್‌ನ ಅಗ್ರ ಮೂರು ನ್ಯಾಯಾಧೀಶರಾದ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿಗಳಾದ ಬಿ ಆರ್ ಗವಾಯಿ ಮತ್ತು ಸೂರ್ಯ ಕಾಂತ್ ಅವರ ಪೀಠ ನಿವೃತ್ತ ನ್ಯಾಯಾಧೀಶರು ತಾತ್ಕಾಲಿಕ ನ್ಯಾಯಾಧೀಶರಾಗಿ ನೇಮಕಗೊಂಡ ನಂತರ, ಹೈಕೋರ್ಟ್‌ನ ಹಾಲಿ ನ್ಯಾಯಾಧೀಶರ ನೇತೃತ್ವದ ಪೀಠದ ಭಾಗವಾಗಿರುತ್ತಾರೆ ಎಂದು ಸ್ಪಷ್ಟಪಡಿಸಿದೆ.

ತಾತ್ಕಾಲಿಕ ನ್ಯಾಯಾಧೀಶರಿಗಿಂತ ಜೂನಿಯರ್ ಆಗಿರಬಹುದು ಮತ್ತು ಬಾಕಿ ಇರುವ ಪ್ರಕರಣ ಗಳನ್ನು ನಿರ್ಧರಿಸಬಹುದು. ಇದರರ್ಥ, ತಾತ್ಕಾಲಿಕ ನ್ಯಾಯಾಧೀಶರನ್ನು ಹೊಂದಿರುವ ಪೀಠದ ಮುಂದೆ ಯಾವುದೇ ಹೊಸ ಪ್ರಕರಣಗಳನ್ನು ಪಟ್ಟಿ ಮಾಡಲಾಗುವುದಿಲ್ಲ. 1970 ರವರೆಗೆ, ಕೆಲವು ನಿವೃತ್ತ ಸುಪ್ರೀಂಕೋರ್ಡ್ ನ್ಯಾಯಾಧೀಶರನ್ನು ಉನ್ನತ ನ್ಯಾಯಾಲಯಕ್ಕೆ ಮರುನೇಮಕ ಮಾಡಲಾಗಿತ್ತು ನಿವೃತ್ತ ಹೈಕೋರ್ಟ್ ನ್ಯಾಯಾಧೀಶರ ಮರುನೇಮಕ ನಿದರ್ಶನಗಳು ನಿರ್ದಿಷ್ಟ ಉದ್ದೇಶಗಳಿಗಾಗಿ ನ್ಯಾಯಮೂರ್ತಿ ಸೂರಜ್ ಭಾನ್ ಅವರು ನವೆಂಬರ್ 1972 ರಲ್ಲಿ ಮಧ್ಯಪ್ರದೇಶ ಹೈಕೋರ್ಟ್, ಅವರ ನಿವೃತ್ತಿಯ ಸುಮಾರು ಒಂಬತ್ತು ತಿಂಗಳ ನಂತರ, ಚುನಾವಣಾ ಅರ್ಜಿಗಳ ವಿಲೇವಾರಿಗಾಗಿ;ಆಗಸ್ಟ್ 1983 ರಲ್ಲಿ ಮದ್ರಾಸ್ ಹೈಕೋರ್ಟ್‌ನಲ್ಲಿ ಎರಡು ವರ್ಷಗಳ ಕಾಲ ನ್ಯಾಯಮೂರ್ತಿ ಪಿ ವೇಣುಗೋಪಾಲ್; ಮತ್ತು ನ್ಯಾಯಮೂರ್ತಿ ಒ ಪಿ ಶ್ರೀವಾಸ್ತವ ಅವರು ಅಯೋಧ್ಯೆ ಮೊಕದ್ದಮೆಗಳ ವಿಚಾರಣೆಯ ವಿಶೇಷ ಪೀಠದ ಭಾಗವಾಗಿ 2007 ರಲ್ಲಿ ಅಲಹಾಬಾದ್ ಹೈಕೋರ್ಟ್‌ನ ತಾತ್ಕಾಲಿಕ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿದರು.



### ಎಲ್ಲೆಲ್ಲಿ ಎಷ್ಟು ಬಾಕಿ ಪ್ರಕರಣ

**ಅಲಹಾಬಾದ್ ಉಚ್ಚ ನ್ಯಾಯಾಲಯ 160 ನ್ಯಾಯಾಧೀಶರ ಅನುಮೋದಿತ ಬಲವನ್ನು ಹೊಂದಿದೆ ಆದರೆ ಶೇಕಡಾ 50 ರಷ್ಟು ಬಲದಲ್ಲಿ ಕಾರ್ಯನಿರ್ವಹಿಸುತ್ತಿದೆ, 11.5 ಲಕ್ಷಕ್ಕೂ ಹೆಚ್ಚು ಪ್ರಕರಣಗಳಲ್ಲಿ ಗರಿಷ್ಠ ಬಾಕಿ ಇದೆ ? 6 ಲಕ್ಷ ಸಿವಿಲ್ ಪ್ರಕರಣಗಳು ಮತ್ತು 5.5 ಲಕ್ಷ ಕ್ರಿಮಿನಲ್ ಪ್ರಕರಣಗಳಿವೆ. ಹೈಕೋರ್ಟ್‌ಗಳಲ್ಲಿ ಒಟ್ಟು 62 ಲಕ್ಷಕ್ಕೂ ಹೆಚ್ಚು ಪ್ರಕರಣಗಳು ಬಾಕಿ ಉಳಿದಿದ್ದು, 18.2 ಲಕ್ಷ ಕ್ರಿಮಿನಲ್ ಪ್ರಕರಣಗಳು ಮತ್ತು 44 ಲಕ್ಷ ಸಿವಿಲ್ ಪ್ರಕರಣಗಳಾಗಿವೆ. ಬಾಂಬೆ ಹೈಕೋರ್ಟ್‌ನಲ್ಲಿ ಒಟ್ಟು ಬಾಕಿ 6.5 ಲಕ್ಷ, ಕಲ್ಕತ್ತಾ ಹೈಕೋರ್ಟ್ ನಲ್ಲಿ 2 ಲಕ್ಷ, ಮದ್ರಾಸ್ ಹೈಕೋರ್ಟ್ 5.2 ಲಕ್ಷ, ದೆಹಲಿ 1.3 ಲಕ್ಷ, ಪಂಜಾಬ್ ಮತ್ತು ಹರ್ಯಾಣ 4.3 ಲಕ್ಷ ಮತ್ತು ಕರ್ನಾಟಕ ಹೈಕೋರ್ಟ್ ನಲ್ಲಿ 3 ಲಕ್ಷ ಪ್ರಕರಣಗಳು ಬಾಕಿ ಇವೆ.**

## ಮಿನಿ ನ್ಯೂಸ್

### ಎಲ್‌ಒಸಿಯಲ್ಲಿ ಒಳನುಸುಳಲೆತ್ನಿಸಿದ ಇಬ್ಬರು ಶಸ್ತ್ರಸಜ್ಜಿತ ಉಗ್ರರ ಹತ್ಯೆ

**ಜಮು:** ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯ ಗಡಿ ನಿಯಂತ್ರಣ ರೇಖೆಯಿಂದ (ಎಲ್‌ಒಸಿ) ಒಳನುಸುಳಲು ಎಚ್ಚರಿಕೆಯ ಪಡೆಗಳು ನಡೆಸಿದ ಯತ್ನವನ್ನು ವಿಫಲಗೊಳಿಸಿದ ಇಬ್ಬರು ಭಾರೀ ಶಸ್ತ್ರಸಜ್ಜಿತ ಭಯೋತ್ಪಾದಕರನ್ನು ಹತ್ಯೆ ಮಾಡಲಾಗಿದೆ.

ಪೂಂಚ್ ಜಿಲ್ಲೆಯ ಖಾರಿ ಕರ್ಮಾರಾ ಪ್ರದೇಶದಲ್ಲಿ ಈ ಘಟನೆ ನಡೆದಿದ್ದು, ಬೆಳಿಗ್ಗೆ ಕೊನೆಯ ವರದಿಗಳು ಬಂದಾಗ ಭಾರಿ ಶೋಧ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪೂಂಚ್ ಸೆಕ್ಟರ್‌ನ ಗಡಿ ನಿಯಂತ್ರಣ ರೇಖೆಯಲ್ಲಿ ನಿನ್ನೆ ರಾತ್ರಿ ಭಯೋತ್ಪಾದಕರ ಚಲನವಲನ ಪತ್ತೆಯಾಗಿದೆ. ಎಚ್ಚರಿಕೆಯ ಪಡೆಗಳು ಒಳನುಸುಳುವ ಭಯೋತ್ಪಾದಕರನ್ನು ತ್ವರಿತವಾಗಿ ತೊಡಗಿಸಿಕೊಂಡವು, ತೀವ್ರವಾದ ಮತ್ತು ಭಾರೀ ಗುಂಡಿನ ಚಕಮಕಿಯನ್ನು ಪ್ರಚೋದಿಸಿತು, ಎಂದು ಸೇನೆಯ ಜಮು ಮೂಲದ ವೈಟ್ ನೈಟ್ ಕಾರ್ಪ್ಸ್ ಎಕ್ಸ್ ನಲ್ಲಿ ಪೋಸ್ಟ್ ನಲ್ಲಿ ತಿಳಿಸಿದೆ. ರಾತ್ರಿಯಿಡೀ ಕಾರ್ಯಾಚರಣೆ ಮುಂದುವರಿದಿದ್ದು, ಇಬ್ಬರು ಭಯೋತ್ಪಾದಕರನ್ನು ತಟಸ್ಥಗೊಳಿಸಲಾಗಿದೆ ಎಂದು ಸೇನೆ ತಿಳಿಸಿದೆ. ಈ ಪ್ರದೇಶದ ಹುಡುಕಾಟವು ಹಲವಾರು ಶಸ್ತ್ರಾಸ್ತ್ರಗಳು ಮತ್ತು ಯುದ್ಧದಂತಹ ಮಳಿಗೆಗಳನ್ನು ಮರುಪಡೆಯಲು ಕಾರಣವಾಗಿದೆ ಎಂದು ಅದು ಹೇಳಿದೆ.

### ಕೊಚ್ಚಿಯಲ್ಲಿ ಅಕ್ರಮವಾಗಿ ತಂಗಿದ್ದ 27 ಬಾಂಗ್ಲಾದೇಶಿ ಪ್ರಜೆಗಳ ಬಂಧನ

**ಕೊಚ್ಚಿ :** ಕೇರಳದ ಕೊಚ್ಚಿಯಲ್ಲಿ ಅಕ್ರಮವಾಗಿ ವಾಸವಾಗಿದ್ದ 27 ಬಾಂಗ್ಲಾದೇಶಿ ಪ್ರಜೆಗಳನ್ನು ಬಂಧಿಸಲಾಗಿದೆ.

ಎರ್ನಾಕುಲಂ ಜಿಲ್ಲೆಯ ಉತ್ತರ ಪರವೂರ್ ಪ್ರದೇಶದಲ್ಲಿ ಎರ್ನಾಕುಲಂ ಗ್ರಾಮಾಂತರ ಪೊಲೀಸರು ಮತ್ತು ಭಯೋತ್ಪಾದನಾ ನಿಗ್ರಹ ದಳ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಭಾರತದ ಒಳಗೆ ಅಕ್ರಮವಾಗಿ ನುಸಿಳಿದ ಬಂದ ಬಾಂಗ್ಲಾದೇಶಿ ಪ್ರಜೆಗಳು ನಾವು ಪಶ್ಚಿಮ ಬಂಗಾಳದವರೆಂದು ಹೇಳಕೊಂಡು ವಲಸೆ ಕಾರ್ಮಿಕರ ಸೋಗಿನಲ್ಲಿ ವಿವಿಧ ಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದರು.

ಬಂಧಿತರನ್ನು ವಿಚಾರಣೆ ನಡೆಯುತ್ತಿದೆ ಎಂದು ಉನ್ನತ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.ಕಳೆದ ಎರಡು ವಾರಗಳ ಹಿಂದೆ 28 ವರ್ಷದ ತಸ್ಲಿಮಾ ಬೇಗಂ ಎಂಬಾಕೆಯನ್ನು ಬಂಧಿಸಿದ ನಂತರ ಎರ್ನಾಕುಲಂ ಗ್ರಾಮಾಂತರ ಜಿಲ್ಲಾ ಪೊಲೀಸ್ ಮುಖ್ಯಸ್ಥ ವೈಭವ್ ಸಕ್ಸೇನಾ ಅವರು ಪ್ರಾರಂಭಿಸಿದ ವಿಶೇಷ ಕಾರ್ಯಾಚರಣೆಯ ಆಪರೇಷನ್ ಕ್ಲೀನ್‌ನ ಭಾಗವಾಗಿ ಇವರನ್ನು ಪತ್ತೆ ಹಚ್ಚಿ ಬಂಧಿಸಲಾಗಿದೆ.

### ಅನ್ನ ಪ್ರಸಾದಕ್ಕೆ ಬೂದಿ ಬೆರಕೆ ಪೋಲಿಸ್ ಪೇದೆ ಅಮಾನತು

**ಪ್ರಯಾಗ ರಾಜ್:** ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುವ ಮಹಾಕುಂಭದಲ್ಲಿ ಭಾಗವಹಿಸಲು ಕೋಟ್ಯಂತರ ಜನರು ಆಗಮಿಸುತ್ತಿದ್ದಾರೆ. ಈ ಭಕ್ತರಿಗೆ ಅನ್ನಸಂತರ್ಪಣೆಗಾಗಿ ಹಲವೆಡೆ ಅನ್ನಛತ್ರ ಏರ್ಪಡಿಸಲಾಗಿದೆ.

ಆದರೆ ಈ ಘಟನೆಯ ನಡುವೆಯೇ ವಿಡಿಯೋವೊಂದು ಹೊರಬಿದ್ದಿದ್ದು ಜನರಲ್ಲಿ ಬೇಸರ ಮೂಡಿಸಿದೆ. ಮಹಾಕುಂಭಕ್ಕೆ ಬರುವ ಜನರಿಗೆ ಅನ್ನಛತ್ರ ಅನ್ನ ಪ್ರಸಾದದಲ್ಲಿ ಪೊಲೀಸ್ ಪೇದೆಯೊಬ್ಬರು ಬೂದಿ ಬೆರೆಸಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಈ ವಿಡಿಯೋ ಬಹಿರಂಗಗೊಂಡ ನಂತರ ಪೊಲೀಸರು ಇದೀಗ ಕ್ರಮ ಕೈಗೊಂಡಿದ್ದಾರೆ.

ಭಂಡಾರದ ಆಹಾರ ಪ್ರಸಾದದಲ್ಲಿ ಬೂದಿ ಬೆರೆಸಿದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ, ಈ ಹಿನ್ನೆಲೆಯಲ್ಲಿ ಯುಪಿ ಪೊಲೀಸರೂ ಕಾರ್ಯಪ್ರವೃತ್ತರಾಗಿದ್ದಾರೆ. ಈ ಘಟನೆಗೆ ಸಂಬಂಧಿಸಿದ ಪೊಲೀಸನನ್ನು ಸೊರಾನ್ ಪೊಲೀಸ್ ಠಾಣೆಯ ಉಸ್ತುವಾರಿ ಬ್ರಿಜೇಶ್ ಕುಮಾರ್ ತಿವಾರಿ ಎಂದು ಗುರುತಿಸಲಾಗಿದೆ. ಗುರುವಾರ ಉಪ ಪೊಲೀಸ್ ಆಯುಕ್ತ (ಗಂಗಾ ನಗರ) ಕುಲದೀಪ್ ಸಿಂಗ್ ಗುಣವತ್ ಅವರು ಬ್ರಿಜೇಶ್ ಕುಮಾರ್ ತಿವಾರಿ ಅವರ ಠಾಣೆಯ ಉಸ್ತುವಾರಿಯನ್ನು ಅಮಾನತುಗೊಳಿಸಿದ್ದಾರೆ.

ಒಲೆಯ ಮೇಲೆ ತಯಾರಾಗುತ್ತಿರುವ ಅನ್ನಛತ್ರ ಪ್ರಸಾದಕ್ಕೆ ಪೊಲೀಸ್ ಅಧಿಕಾರಿಯೊಬ್ಬರು ಬೂದಿ ಹಾಕುತ್ತಿರುವುದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿರುವ ವಿಡಿಯೋದಲ್ಲಿ ಕಂಡು ಬರುತ್ತಿದೆ. ವಿಡಿಯೋ ಹೊರಬಿದ್ದ ಕೂಡಲೇ ಘಟನೆಯನ್ನು ನಾಚಿಕೆಗೇಡಿನ ಸಂಗತಿ ಎಂದು ಬಣ್ಣಿಸಲಾಗಿದೆ. ಪೊಲೀಸರ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಲಾಗಿದೆ.

### ಬುಡಕಟ್ಟು ಮಹಿಳೆಯನ್ನು ವಿವಸ್ತ್ರಗೊಳಿಸಿ, ಬೈಕ್‌ಗೆ ಕಟ್ಟಿ ಮೆರವಣಿಗೆ; 12 ಜನರ ಬಂಧನ

**ಅಹಮದಾಬಾದ್:** ಗುಜರಾತ್‌ನ ದಾಹೋದ್ ಜಿಲ್ಲೆಯಲ್ಲಿ ಜನವರಿ 28, 2024 ರಂದು ಮಹಿಳೆಯೊಬ್ಬರನ್ನು ವಿವಸ್ತ್ರಗೊಳಿಸಿ, ಬೈಕ್ ಗೆ ಕಟ್ಟಿ, ಧಲ್ಸಿಮಲ್ ಗ್ರಾಮದಲ್ಲಿ ಮೆರವಣಿಗೆ ಮಾಡಿದ್ದಾರೆ. ಈ ಅಮಾನವೀಯ ಘಟನೆಗೆ ಸಂಬಂಧಿಸಿದಂತೆ ಪೊಲೀಸರು 12 ಜನರನ್ನು ಬಂಧಿಸಿದ್ದಾರೆ.

ಆರೋಪಿಗಳಲ್ಲಿ ನಾಲ್ವರು ಮಹಿಳೆಯರು ಮತ್ತು ನಾಲ್ವರು ಅಪ್ರಾಪ್ತ ವಯಸ್ಕರು ಸೇರಿದ್ದಾರೆ. ದಾಹೋದ್ ಪೊಲೀಸ್ ವರಿಷ್ಠಾಧಿಕಾರಿ ರಾಜ್‌ದೀಪ್‌ಸಿನ್ಹ್ ಝಾಲಾ ಅವರ ಪ್ರಕಾರ, ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ 15-20 ಜನ, ಮಹಿಳೆಯನ್ನು ಅಪಹರಿಸಿ ಈ ಕೃತ್ಯ ಎಸಗಿದ್ದಾರೆ. ದುಷ್ಕರ್ಮಿಗಳು ಘಟನೆಯನ್ನು ರೆಕಾರ್ಡ್ ಮಾಡಿ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದು, ಇದು ಸ್ಥಳೀಯ ಅಧಿಕಾರಿಗಳ ಗಮನಕ್ಕೆ ಬಂದಿದೆ. ವೀಡಿಯೊ ಪತ್ತೆಯಾದ ನಂತರ ಪೊಲೀಸರು ತ್ವರಿತವಾಗಿ ಕ್ರಮ ತೆಗೆದುಕೊಂಡಿದ್ದು, ಮಹಿಳೆಯನ್ನು ಆಕೆಯ ಅತ್ತೆ-ಮಾವಂದಿರ ಅಕ್ರಮ ಬಂಧನದಿಂದ ರಕ್ಷಿಸಿದ್ದಾರೆ.

ಬಂಧಿತ ವಯಸ್ಕ ಮಹಿಳೆಯರು ನ್ಯಾಯಾಂಗ ಬಂಧನದಲ್ಲಿದ್ದು, ಅಪ್ರಾಪ್ತ ವಯಸ್ಕರನ್ನು ಬಾಲ ನ್ಯಾಯ ಮಂಡಳಿಯ ಮುಂದೆ ಹಾಜರುಪಡಿಸಲಾಗಿದೆ. ನಾಲ್ವರು ಪುರುಷರನ್ನು ವಿಚಾರಣೆಗಾಗಿ ಪೊಲೀಸ್ ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ. ಇನ್ನೂ ಒಬ್ಬ ಪುರುಷ, ಒಬ್ಬ ಮಹಿಳೆ ಮತ್ತು ಒಬ್ಬ ಅಪ್ರಾಪ್ತ ವಯಸ್ಕ ತಲೆಮರೆಸಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳೀಯ ಮೂಲಗಳ ಪ್ರಕಾರ, ಸಂತ್ರಸ್ತ ಮಹಿಳೆಯ ಪತಿ ಪ್ರಸ್ತುತ ಕೊಲೆ ಪ್ರಕರಣದಲ್ಲಿ ಜೈಲಿನಲ್ಲಿದ್ದಾರೆ. ಹೀಗಾಗಿ ಮಹಿಳೆ ತಮ್ಮ ಅತ್ತೆ-ಮಾವಂದಿರೊಂದಿಗೆ ವಾಸಿಸುತ್ತಿದ್ದರು. ಆದರೆ ಕೌಟುಂಬಿಕ ಕಲಹಗಳಿಂದಾಗಿ ಆಕೆ ಅವರನ್ನು ಬಿಟ್ಟು ಹೋಗಿದ್ದರು ಮತ್ತು ತನ್ನ ಗಂಡನ ಹಳ್ಳಿಯ ವ್ಯಕ್ತಿಯೊಂದಿಗೆ ಸಂಬಂಧ ಹೊಂದಿದ್ದಳು ಹಾಗೂ ಕಳೆದ ಮೂರು ತಿಂಗಳಿಂದ ಆತನೊಂದಿಗೆ ವಾಸಿಸುತ್ತಿದ್ದಳು ಎಂದು ವರದಿಯಾಗಿದೆ.

## ಹಾಯ್ ನಾನ್ನ ಚಿತ್ರ ಕನ್ನಡದ ಭೀಮಸೇನ ನಳಮಹಾರಾಜ



ನಟ ನಾನಿ ಅವರಿಗೆ ಹಾಯ್ ನಾನ್ನ ಚಿತ್ರವು ವೃತ್ತಿಜೀವನದಲ್ಲಿ ಮಹತ್ವದ ಸಿನಿಮಾವಾಗಿದೆ. ಇದು ಬಾಕ್ಸ್ ಆಫೀಸ್‌ನಲ್ಲಿ ಉತ್ತಮ ಗಳಿಕೆ ಕಾಣುವ ಮೂಲಕ ಸೂಪರ್‌ಹಿಟ್ ಚಿತ್ರವಾಗಿ ಗುರುತಿಸಿಕೊಂಡಿದೆ.

ಅವನೇ ಶ್ರೀಮನ್ನಾರಾಯಣ ಮತ್ತು ಕಿರಿಕ್ ಪಾರ್ಟಿ ಚಿತ್ರಗಳಿಗೆ ಹೆಸರಾದ ಕನ್ನಡ ಚಿತ್ರ ನಿರ್ಮಾಪಕ ಪುಷ್ಕರ ಮಲ್ಲಿಕಾರ್ಜುನಯ್ಯ, ತೆಲುಗಿನ 'ಹಾಯ್ ನಾನ್ನ' ನಿರ್ದೇಶಕರು ರೀಮೇಕ್ ಹಕ್ಕುಗಳನ್ನು ಪಡೆಯದೆ ತಮ್ಮ 2020ರಲ್ಲಿ ತೆರೆಕಂಡ ಕನ್ನಡದ 'ಭೀಮಸೇನ ನಳಮಹಾರಾಜ' ಚಿತ್ರವನ್ನು ನಕಲು ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ.

ಈ ಕುರಿತು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿರುವ ಅವರು, ತೆಲುಗು ಚಿತ್ರವು ತನ್ನ ಚಿತ್ರದ ಮೂಲ ಕಥೆಯನ್ನು ಮತ್ತು ನಿರೂಪಣೆಯನ್ನು ನೇರವಾಗಿ ನನ್ನ ಚಿತ್ರದಿಂದ ನಕಲು ಮಾಡಲಾಗಿದೆ ಎಂದು ಆರೋಪಿಸಿದ್ದಾರೆ. ನಟ ನಾನಿ ಮತ್ತು ಚಿತ್ರ ನಿರ್ದೇಶಕರನ್ನು ಟೀಕಿಸಿದ ಅವರು, 'ರೀಮೇಕ್ ಹಕ್ಕುಗಳನ್ನು ಪಡೆಯದೆ, ಹಾಯ್ ನಾನ್ನ ಚಿತ್ರವನ್ನು ನಮ್ಮ ಮೂಲ ಚಿತ್ರ ಭೀಮಸೇನ ನಳಮಹಾರಾಜ ಚಿತ್ರದಿಂದ ಮಾಡಲಾಗಿದೆ. ಇಂತಹ ಕೆಲಸ ಮಾಡುವುದು ಸರಿಯಾಗಿದೆಯಾ, ನಾನಿ' ಎಂದಿದ್ದಾರೆ. ನಟ ನಾನಿ ಅವರಿಗೆ ಹಾಯ್ ನಾನ್ನ ಚಿತ್ರವು ವೃತ್ತಿಜೀವನದಲ್ಲಿ ಮಹತ್ವದ ಸಿನಿಮಾವಾಗಿದೆ. ಇದು ಬಾಕ್ಸ್ ಆಫೀಸ್‌ನಲ್ಲಿ ಉತ್ತಮ ಗಳಿಕೆ ಕಾಣುವ ಮೂಲಕ ಸೂಪರ್‌ಹಿಟ್ ಚಿತ್ರವಾಗಿ ಗುರುತಿಸಿಕೊಂಡಿದೆ. 2023ರ ಡಿಸೆಂಬರ್ 7 ರಂದು ಬಿಡುಗಡೆಯಾದ ಈ ಚಿತ್ರದಲ್ಲಿ ನಾನಿ ತಂದೆಯಾಗಿ ಕಾಣಿಸಿಕೊಂಡಿದ್ದಾರೆ.




ನವೆಂಬರ್ ನಲ್ಲಿ ನಟಿ ಪ್ರೆಗ್ನೆಂಟ್

## ಬೇಬಿ ಬಂಪ್ ಫೋಟೋ ಹಂಚಿಕೊಂಡ ಅಥಿಯಾ ಶೆಟ್ಟಿ

ಬಾಲಿವುಡ್ ಬೆಡಗಿ ಅಥಿಯಾ ಶೆಟ್ಟಿ ಅವರು ಚೊಚ್ಚಲ ಮಗುವಿನ ನಿರೀಕ್ಷೆಯಲ್ಲಿದ್ದಾರೆ. ಇದೀಗ ಬೇಬಿ ಬಂಪ್ ಫೋಟೋವನ್ನು ನಟಿ ಹಂಚಿಕೊಂಡಿದ್ದಾರೆ. ಕಪ್ಪು ಬಣ್ಣದ ಟಾಪ್ ಮತ್ತು ಬಿಳಿ ಸ್ಕರ್ಟ್ ಧರಿಸಿ ನಟಿ ಬೇಬಿ ಬಂಪ್ ತೋರಿಸಿದ್ದಾರೆ. ತಾಯ್ತನದ ಕಳೆ ಅಥಿಯಾ ಮುಖದಲ್ಲಿ ಎದ್ದು ಕಾಣುತ್ತಿದೆ. ಇನ್ನೂ ನವೆಂಬರ್‌ನಲ್ಲಿ ನಟಿ ಪ್ರೆಗ್ನೆಂಟ್ ಆಗಿರುವ ಕುರಿತು ಅನೌನ್ಸ್ ಮಾಡಿದ್ದರು. ಬಾಲಿವುಡ್ ಕಲಾವಿದರು ಹಾಗೂ ಫ್ಯಾನ್ಸ್ ಶುಭಹಾರೈಸಿದ್ದರು.

ಇನ್ನೂ ಜ.23ರಂದು ಕೆ.ಎಲ್ ರಾಹುಲ್ ಮತ್ತು ಅಥಿಯಾ ಶೆಟ್ಟಿ ಮದುವೆಯಾದರು. ಗುರುಹಿರಿಯರ ಸಮ್ಮುಖದಲ್ಲಿ ಹಲವು ವರ್ಷಗಳ ಪ್ರೀತಿಗೆ ಮದುವೆಯ ಮುದ್ರೆ ಒತ್ತಿದ್ದರು.

## ಪ್ರಭಾಸ್ ಸಿನಿಮಾ ಶುರುವಾಗೋದು ಯಾವಾಗ



ಡಾರ್ಲಿಂಗ್ ಪ್ರಭಾಸ್ 'ಕಲ್ಕಿ 2898 ಎಡಿ' ಸಿನಿಮಾದ ಸಕ್ಸಸ್ ಬಳಿಕ ಬ್ಯಾಕ್ ಟು ಬ್ಯಾಕ್ ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. 'ಅನಿಮಲ್' ಡೈರೆಕ್ಟರ್ ಸಂದೀಪ್ ರೆಡ್ಡಿ ವಂಗಾ ಜೊತೆ ಪ್ರಭಾಸ್ ಸಿನಿಮಾ ಶುರುವಾಗೋದು ಯಾವಾಗ ಎಂಬುದಕ್ಕೆ ಇದೀಗ ಉತ್ತರ ಸಿಕ್ಕಿದೆ. 'ದಿ ರಾಜ್ ಸಾಬ್' ಸಿನಿಮಾದ ಕೆಲಸದಲ್ಲಿ ಪ್ರಭಾಸ್ ಬ್ಯುಸಿಯಾಗಿದ್ದಾರೆ. ಇದರ ಜೊತೆಗೆ ಸಂದೀಪ್ ನಿರ್ದೇಶನದ ಸ್ಪಿರಿಟ್ ಚಿತ್ರದ ಕೆಲಸ ಶುರು ಮಾಡಲು ಫ್ಯಾನ್ಸ್ ಯೋಚಿಸಿದ್ದಾರೆ. ಮೇನಲ್ಲಿ 'ಸ್ಪಿರಿಟ್' ಚಿತ್ರದ ಶೂಟಿಂಗ್ ಶುರು ಮಾಡಲು ಚಿತ್ರತಂಡ ಯೋಚಿಸಿದೆ. ಅದಕ್ಕಾಗಿ ಸಿದ್ಧತೆ ಕೂಡ ನಡೆಯುತ್ತಿದೆ. ಒಂದು ವರ್ಷದಲ್ಲಿ ಈ ಸಿನಿಮಾದ ಕೆಲಸ ಪೂರ್ಣಗೊಳಿಸುವ ಪ್ಲ್ಯಾನ್ ಚಿತ್ರತಂಡಕ್ಕಿದ್ದು, ಮುಂದಿನ ವರ್ಷ 2026ರಲ್ಲಿ ಸಿನಿಮಾ ಬಿಡುಗಡೆ ಆಗಲಿದೆ. ಈ ಸಿನಿಮಾದಲ್ಲಿ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಪ್ರಭಾಸ್ ನಟಿಸುತ್ತಿದ್ದಾರೆ. ಡಿಫರೆಂಟ್ ಲುಕ್‌ನಲ್ಲಿ ನಟ ಕಾಣಿಸಿಕೊಳ್ಳಲಿದ್ದಾರೆ. ಸಂದೀಪ್ ರೆಡ್ಡಿ ವಂಗಾ ಡೈರೆಕ್ಷನ್ ಅಂದರೆ ಅಲ್ಲಿ ಆಯಕ್ಷನ್ ಸೀಕ್ವೆನ್ಸ್‌ಗೆ ಹೆಚ್ಚಿನ ಆಧ್ಯತೆ ಇರುತ್ತದೆ. ಹಾಗಾಗಿ ಈ ಚಿತ್ರದ ಮೇಲೆ ಹೆಚ್ಚಿನ ನಿರೀಕ್ಷೆಯಿದೆ. ಈ ಸಿನಿಮಾದಲ್ಲಿ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಪ್ರಭಾಸ್ ನಟಿಸುತ್ತಿದ್ದಾರೆ.

## ರೆಟ್ರೋ ಗೆಟಪ್‌ನಲ್ಲಿ ಅಭಿಮಾನಿಗಳ ಮುಂದೆ ಬಂದ ಶ್ರೀಲೀಲಾ



ಕನ್ನಡದ ಬೆಡಗಿ ಶ್ರೀಲೀಲಾ ಪರಭಾಷೆಗಳಲ್ಲಿ ಬ್ಯುಸಿಯಾಗಿದ್ದಾರೆ. ಹೊಸ ಗೆಟಪ್‌ನಲ್ಲಿ ಕಾಣಿಸಿಕೊಂಡು ಫ್ಯಾನ್ಸ್‌ಗೆ ಸರ್ಪ್ರೈಸ್ ಕೊಟ್ಟಿದ್ದಾರೆ. ಹೊಸ ಸಿನಿಮಾದ ಅಪ್‌ಡೇಟ್ ಮೂಲಕ ನಟಿ ಸಿಹಿಸುದ್ದಿ ನೀಡಿದ್ದಾರೆ. ಶಿವಕಾರ್ತಿಕೇಯನ್ ನಟನೆಯ 'ಪರಾಶಕ್ತಿ' ಸಿನಿಮಾದಲ್ಲಿ ರೆಟ್ರೋ ಗೆಟಪ್‌ನಲ್ಲಿ ಶ್ರೀಲೀಲಾ ಕಾಣಿಸಿಕೊಂಡಿದ್ದಾರೆ.

ಸೀರೆಯುಟ್ಟು ಜಡೆ ಹಾಕಿಕೊಂಡ ಹೊಸ ಲುಕ್‌ನಲ್ಲಿ ನಟಿ ಮಿಂಚಿದ್ದಾರೆ. ಈ ಚಿತ್ರವನ್ನು ಸುಧಾ ಕೊಂಗರ ನಿರ್ದೇಶನ ಮಾಡಿದ್ದಾರೆ. ಸದ್ಯ ಈ ಸಿನಿಮಾದ ಟೀಸರ್ ರಿವೀಲ್ ಆಗಿದ್ದು, ಕಾಲೇಜು ವಿದ್ಯಾರ್ಥಿಗಳ ಪಾಲಿಟಿಕ್ಸ್ ಕಥೆಯನ್ನು ಒಳಗೊಂಡಿದೆ. ಈ ಚಿತ್ರದಲ್ಲಿ ಶಿವಕಾರ್ತಿಕೇಯನ್, ಶ್ರೀಲೀಲಾ, ರವಿ ಮೋಹನ್, ಅಥರ್ವ ಸೇರಿದಂತೆ ಅನೇಕರು ನಟಿಸಿದ್ದಾರೆ. ಇನ್ನೂ 'ಪುಷ್ಪ 2' ಸಿನಿಮಾದಲ್ಲಿ ಸೊಂಟ ಬಳುಕಿಸಿದ ಮೇಲೆ ನಟಿಗೆ ಬೇಡಿಕೆ ಹೆಚ್ಚಾಗಿದೆ. ತೆಲುಗು, ತಮಿಳು, ಬಾಲಿವುಡ್‌ನಲ್ಲೂ ಶ್ರೀಲೀಲಾ ಆಯಕ್ಟೀವ್ ಆಗಿದ್ದಾರೆ.

ಸೊಂಟ ಬಳುಕಿಸಿದ ಮೇಲೆ ನಟಿ

## ಮಮತಾ ಕುಲಕರ್ಣಿ ಅಖಾಡದಿಂದಲೇ ಔಟ್



ಮಹಾಕುಂಭ ಮೇಳದಲ್ಲಿ ಸನ್ಯಾಸಿನಿಯಾಗಲು ಹೊರಟ ಬಾಲಿವುಡ್ ನಟಿ ಮಮತಾ ಕುಲಕರ್ಣಿ ಅವರನ್ನು ಕಿನ್ನರ ಅಖಾಡದಿಂದ ಹೊರ ಹಾಕಲಾಗಿದೆ. ಕಿನ್ನರ ಅಖಾಡ ಸ್ಥಾಪಕ ರಿಷಿ ಅಜಯ್ ದಾಸ್ ಶುಕ್ರವಾರ ಮಮತಾ ಕುಲಕರ್ಣಿ ಅವರನ್ನು ಅಖಾಡದಿಂದಲೇ ಹೊರಹಾಕಿದ್ದಾರೆ. ದೇಶದ್ರೋಹದ ಆರೋಪ ಹೊತ್ತಿರುವ ಮಮತಾ ಕುಲಕರ್ಣಿಯನ್ನು ಅಖಾಡಕ್ಕೆ ಸೇರಿಸಿದ್ದು ಮಾತ್ರವಲ್ಲದೇ ತನ್ನ ಅರಿವಿಲ್ಲದೆ ಅವರನ್ನು ಮಹಾಮಂಡಲೇಶ್ವರ ಎಂದು ನೇಮಿಸಿದ್ದಕ್ಕಾಗಿ ಮಹಾಮಂಡಲೇಶ್ವರ ಲಕ್ಷ್ಮಿನಾರಾಯಣ ತ್ರಿಪಾಠಿ ಅವರನ್ನೂ ಸಹ ಕಿನ್ನರ ಅಖಾಡದಿಂದ ಹೊರ ಹಾಕಿದ್ದಾರೆ. 90ರ ದಶಕದಲ್ಲಿ ಬಾಲಿವುಡ್ ಸೇರಿದಂತೆ ಕನ್ನಡ ಸಿನಿಮಾದಲ್ಲಿ ನಟಿಸಿದ್ದ ಮಮತಾ ಕಿನ್ನರ ಅಖಾಡಕ್ಕೆ ಸೇರುವ ಮೂಲಕ ಮಹಾಮಂಡಲೇಶ್ವರಿಯಾಗಿದ್ದರು. ಮಮತಾ ಕುಲಕರ್ಣಿ ಹೆಸರನ್ನು ಬದಲಿಸಿಕೊಂಡು 'ಮಾಯಿ ಮಮತಾ ನಂದಗಿರಿ' ಎಂದು ನಾಮಕರಣ ಮಾಡಿಕೊಂಡಿದ್ದರು. ಕಳೆದ 2 ವರ್ಷಗಳಿಂದ ಜೂನಾ ಅಖಾಡದೊಂದಿಗೆ ಸಂಪರ್ಕದಲ್ಲಿದ್ದ ಮಮತಾ, 2-3 ತಿಂಗಳಿಂದ ಕಿನ್ನರ ಅಖಾಡದೊಂದಿಗೆ ನಿಕಟ ಸಂಪರ್ಕ ಬೆಳೆಸಿಕೊಂಡಿದ್ದರು. ಇದೀಗ ಅದೇ ಅಖಾಡದ ಭಾಗವಾಗಲು ನಿರ್ಧರಿಸಿ ಲೌಕಿಕ ಜಗತ್ತನ್ನು ತೊರೆದು ಆಧ್ಯಾತ್ಮಿಕ ಜಗತ್ತಿಗೆ ಇಳಿದಿದ್ದರು. ಮಮತಾ ಕುಲಕರ್ಣಿ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದ್ದರು. ಬಳಿಕ ತಮ್ಮ ಸ್ವಂತ ಪಿಂಡ ಪ್ರದಾನಮಾಡುವ ಮೂಲಕ ಕಿನ್ನರ ಅಖಾಡಕ್ಕೆ ಸೇರ್ಪಡೆಯಾಗಿ ಮಹಾಮಂಡಲೇಶ್ವರರಾಗಿದ್ದರು. ಇವರಿಗೆ ಕಿನ್ನರ ಅಖಾಡದ ಆಚಾರ್ಯ ಮಹಾಮಂಡಲೇಶ್ವರ ಲಕ್ಷ್ಮಿ ನಾರಾಯಣ ತ್ರಿಪಾಠಿ ದೀಕ್ಷೆ ನೀಡಿದ್ದರು. ನಟಿ ಕನ್ನಡದ ವಿಷ್ಣು ವಿಜಯ ಸಿನಿಮಾದಲ್ಲಿ ನಟಿಸಿದ್ದು, ವಕ್ತ ಹಮಾರಾ ಹೈ, ಕ್ರಾಂತಿವೀರ, ಸಬ್ಸೆ ಬಡಾ ಕಿಲಾಡಿ ಇನ್ನಿತರ ಬಾಲಿವುಡ್ ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದಾರೆ.

## ರೊಮ್ಯಾಂಟಿಕ್ ಫೋಟೋ ಹಂಚಿಕೊಂಡ ಖುಷಿ



ಬಾಲಿವುಡ್ ಬೆಡಗಿ ಶ್ರೀದೇವಿ ಪುತ್ರಿ ಖುಷಿ ಕಪೂರ್ ಅವರು ಮಿಸ್ಟರಿ ಹುಡುಗನ ಜೊತೆಗಿರುವ ಫೋಟೋ ಹಂಚಿಕೊಂಡಿದ್ದಾರೆ. ಈ ಬೆನ್ನಲ್ಲೇ ನಟಿ ಎಂಗೇಜ್ ಆಗಿರುವ ಕುರಿತು ಸುಳಿವು ನೀಡಿದ್ರಾ ಎಂಬ ಅನುಮಾನ ಅಭಿಮಾನಿಗಳಲ್ಲಿ ಮೂಡಿದೆ. ಮಿಸ್ಟರಿ ಹುಡುಗನನ್ನು ಖುಷಿ ತಬ್ಬಿಕೊಂಡು ಕನ್ನಡಿ ಮುಂದೆ ಸೆಲ್ಫಿ ಕ್ಲಿಕಿಸಿರುವ ರೊಮ್ಯಾಂಟಿಕ್ ಫೋಟೋವನ್ನು ನಟಿ ಪೋಸ್ಟ್ ಮಾಡಿದ್ದಾರೆ. ಈ ಫೋಟೋದಲ್ಲಿರುವ ವ್ಯಕ್ತಿ ವೈದಾಂಗ್ ರೈನಾನಾ ಎಂದೆಲ್ಲಾ ಫ್ಯಾನ್ಸ್ ಕಾಮೆಂಟ್ ಮಾಡುತ್ತಿದ್ದಾರೆ. ಬಾಯ್‌ಫ್ರೆಂಡ್ ಜೊತೆಗಿನ ಫೋಟೋ ಶೇರ್ ಮಾಡಿ ಡೇಟಿಂಗ್ ಕುರಿತು ನಟಿ ಸುಳಿವು ನೀಡಿದ್ದಾರೆ ಎಂದು ಫ್ಯಾನ್ಸ್ ಊಹಿಸಿದ್ದಾರೆ. ಇನ್ನೂ ಜುನೈದ್ ಖಾನ್ ಜೊತೆ 'ಲವ್‌ಯಾಪಾ' ಚಿತ್ರದಲ್ಲಿ ಪೂರ್ಣ ಪ್ರಮಾಣದ ನಾಯಕಿಯಾಗಿ ಖುಷಿ ಕಪೂರ್ ನಟಿಸಿದ್ದಾರೆ. ಆಮೀರ್ ಖಾನ್ ಪುತ್ರನ ಜೊತೆಗಿನ ನಟಿಯ ಸಿನಿಮಾ ಫೆ.7ರಂದು ರಿಲೀಸ್ ಆಗಲಿದೆ. ಈ ಚಿತ್ರದ ಮೂಲಕ ನಟಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ.

## ಸಚಿನ್ ತೆಂಡೂಲ್ಕರ್ ಕಿರೀಟಕ್ಕೆ ಜೀವಮಾನ ಸಾಧನೆ ಪ್ರಶಸ್ತಿ ಗರಿ

ಫೆಬ್ರವರಿ 1 ರಂದು ನಡೆಯುವ ಬಿಸಿಸಿಐ ವಾರ್ಷಿಕ ಪ್ರಶಸ್ತಿ ಸಮಾರಂಭದಲ್ಲಿ ಕ್ರಿಕೆಟ್ ದಂತಕಥೆ ಸಚಿನ್ ತೆಂಡೂಲ್ಕರ್ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಗುವುದು ಎಂದು ವರದಿಯಾಗಿದೆ. ತಮ್ಮ ಅದ್ಭುತ ಅಂತರಾಷ್ಟ್ರೀಯ ಕ್ರಿಕೆಟ್ ವೃತ್ತಿಜೀವನದಲ್ಲಿ ಅನೇಕ ದಾಖಲೆಗಳನ್ನು ಸೃಷ್ಟಿಸಿರುವ ಸವ್ಯಸಾಚಿ ಸಚಿನ್ ಅವರ ಸಾಧನೆಯ ಕಿರೀಟಕ್ಕೆ ಇದೀಗ ಈ ಪ್ರಶಸ್ತಿಯೊಂದು ಸೇರುತ್ತಿದೆ. ಸಚಿನ್ ಇದುವರೆಗೆ ಭಾರತ ರತ್ನ ಸೇರಿದಂತೆ ಹಲವು ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದ್ದಾರೆ. ಫೆಬ್ರವರಿ 1 ರಂದು ಅಂದರೆ ನಾಳೆ ನಡೆಯಲ್ಲಿರುವ ಬಿಸಿಸಿಐ ವಾರ್ಷಿಕ ಪ್ರಶಸ್ತಿ ಸಮಾರಂಭದಲ್ಲಿ ಕ್ರಿಕೆಟ್ ದೇವರು ಸಚಿನ್ ತೆಂಡೂಲ್ಕರ್ ಜೀವಮಾನ ಸಾಧನೆ ಪ್ರಶಸ್ತಿಗೆ ಭಾಜನರಾಗಲಿದ್ದಾರೆ ಎಂದು ವರದಿಯಾಗಿದೆ. 2013 ರಲ್ಲಿ ಅಂತರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ ಮಾಸ್ಟರ್ ಬ್ಲಾಸ್ಟರ್ ತಮ್ಮ ವೃತ್ತಿ ಬದುಕಿನಲ್ಲಿ ಮುರಿಯಲಾಗದಂತಹ ಹಲವು ದಾಖಲೆಗಳನ್ನು ಸೃಷ್ಟಿಸಿದ್ದಾರೆ. ಕ್ರಿಕೆಟ್ ಲೋಕದಲ್ಲಿ ತನ್ನದೇಯಾದಂತಹ ಕೋಟ್ಯಾಂತರ ಅಭಿಮಾನಿ ಬಳಗವನ್ನು ಹೊಂದಿರುವ ಸಚಿನ್ ತೆಂಡೂಲ್ಕರ್‌ಗೆ ನಾನಾ ಪ್ರಶಸ್ತಿಗಳು ಒಲಿದು ಬಂದಿವೆ. ಇದೀಗ ಮುಂಬೈನಲ್ಲಿರುವ ಕೇಂದ್ರ ಕಚೇರಿಯಲ್ಲಿ ನಡೆಯಲ್ಲಿರುವ ಈ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಚಿನ್‌ತೆಂಡೂಲ್ಕರ್‌ಗೆ ಬಿಸಿಸಿಐ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಿದೆ. ಕಳೆದ ವರ್ಷ ನಡೆದ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರವಿಶಾಸ್ತ್ರಿ ಮತ್ತು ಮಾಜಿ ಅನುಭವಿ ವಿಕೆಟ್‌ಕೀಪರ್ ಫಾರೂಕ್ ಇಂಜಿನಿಯರ್ ಕರ್ನಲ್ ಸಿಕೆ ನಾಯುಡು ಜೀವಮಾನ ಸಾಧನೆ ಪ್ರಶಸ್ತಿಯನ್ನು ಸ್ವೀಕರಿಸಿದ್ದರು.

ಭಾರತ ರತ್ನ ಸಚಿನ್ ತೆಂಡೂಲ್ಕರ್

ಸಚಿನ್ ಈ ಹಿಂದೆ ಭಾರತದ ಅತ್ಯುನ್ನತ ಗೌರವ ಭಾರತ ರತ್ನವನ್ನು ಪಡೆದಿದ್ದಾರೆ. ಇದಲ್ಲದೆ, ಅವರು ಅರ್ಜುನ್ ಪ್ರಶಸ್ತಿ, ಖೇಲ್ ರತ್ನ, ಪದ್ಮಶ್ರೀ, ಪದ್ಮವಿಭೂಷಣ ಮತ್ತು ಮಹಾರಾಷ್ಟ್ರ ಭೂಷಣ ಪ್ರಶಸ್ತಿಗಳಿಗೂ ಭಾಜನರಾಗಿದ್ದಾರೆ. ಹಾಗೆಯೇ ಐಸಿಸಿ ಮತ್ತು ಬಿಸಿಸಿಐ ಕೂಡ ಸಚಿನ್‌ಗೆ ಹಲವು ಕ್ರೀಡಾ ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ.


ಸಚಿನ್ ವೃತ್ತಿ ಬದುಕು

ಸಚಿನ್ ಭಾರತದ ಪರ 1 ಟಿ20, ದಾಖಲೆಯ 200 ಟೆಸ್ಟ್ ಮತ್ತು 463 ಏಕದಿನ ಅಂದರೆ ಒಟ್ಟು 664 ಅಂತರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದಾರೆ. ಈ ಅವಧಿಯಲ್ಲಿ ಅವರು ಟೆಸ್ಟ್‌ನಲ್ಲಿ 15921 ರನ್, ಏಕದಿನದಲ್ಲಿ 18426 ರನ್ ಗಳಿಸಿ ದಾಖಲೆ ಬರೆದಿದ್ದಾರೆ. ಸಚಿನ್ ಅಂತರಾಷ್ಟ್ರೀಯ ಕ್ರಿಕೆಟ್‌ನಲ್ಲಿ 100 ಶತಕ ಸಿಡಿಸಿದ ದಾಖಲೆ ಕೂಡ ಇದೆ. ಈ ಕಾರಣಕ್ಕಾಗಿಯೇ ಬಿಸಿಸಿಐ ಅವರಿಗಾಗಿ ಈ ದೊಡ್ಡ ಪ್ರಶಸ್ತಿ ನೀಡಿ ಗೌರವಿಸುತ್ತಿದೆ.

ಇನ್ನು ಜೀವಮಾನ ಸಾಧನೆಗಾಗಿ ನೀಡುವ ಸಿಕೆ ನಾಯುಡು ಪ್ರಶಸ್ತಿಯ ಬಗ್ಗೆ ಹೇಳುವುದಾದರೆ.. ಸಚಿನ್ ಅವರಿಗಿಂತ ಮೊದಲು ಭಾರತೀಯ ಕ್ರಿಕೆಟ್‌ನ ಅನೇಕ ದಂತಕಥೆಗಳು ಈ ಗೌರವಕ್ಕೆ ಪಾತ್ರರಾಗಿದ್ದಾರೆ. ಕಳೆದ ಬಾರಿ ಅಂದರೆ 2023ರಲ್ಲಿ ಟೀಂ ಇಂಡಿಯಾದ ಮಾಜಿ ಕೋಚ್ ರವಿಶಾಸ್ತ್ರಿ ಅವರಿಗೆ ಈ ಪ್ರಶಸ್ತಿ ನೀಡಲಾಗಿತ್ತು. ಇವರಿಗಿಂತ ಮೊದಲು ಲಾಲಾ ಅಮರನಾಥ್, ಸೈಯದ್ ಮುಷ್ತಾಕ್ ಅಲಿ, ವಿಜಯ್ ಹಜಾರೆ, ಕೆಎನ್ ಪ್ರಭು, ಹೇಮು ಅಧಿಕಾರಿ, ಸುಭಾಷ್ ಗುಪ್ತೆ, ಮನ್ಸೂರ್ ಅಲಿ ಖಾನ್ ಪಟೌಡಿ ಕೂಡ ಈ ಪ್ರಶಸ್ತಿ ಪಡೆದಿದ್ದಾರೆ.



## ಟಿ20 ವಿಶ್ವಕಪ್‌ನಿಂದ ಆಸ್ಟ್ರೇಲಿಯಾ ಔಟ್




ಆಫ್ರಿಕಾ- ಭಾರತ ನಡುವೆ ಫೈನಲ್ ಫೈಟ್ ದಕ್ಷಿಣ ಆಫ್ರಿಕಾ ಮಹಿಳಾ ಕ್ರಿಕೆಟ್ ತಂಡ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ತಂಡವನ್ನು ಮಣಿಸಿ ಮೊದಲ ಬಾರಿಗೆ ಅಂಡರ್-19 ಟಿ20 ವಿಶ್ವಕಪ್ ಫೈನಲ್‌ಗೆ ಪ್ರವೇಶಿಸಿದೆ. ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾವನ್ನು ಸೋಲಿಸಿದ ಆಫ್ರಿಕಾ ಮಹಿಳಾ ತಂಡ ಇದೀಗ ಫೈನಲ್‌ನಲ್ಲಿ ಅಜೇಯ ಟೀಂ ಇಂಡಿಯಾವನ್ನು ಎದುರಿಸಲಿದೆ. ಉಭಯ ತಂಡಗಳ ನಡುವಿನ ಈ ಪ್ರಶಸ್ತಿ ಪಂದ್ಯ ಫೆಬ್ರವರಿ 2 ರಂದು ನಡೆಯಲಿದೆ. ಮಹಿಳೆಯರ ಅಂಡರ್-19 ಟಿ20 ವಿಶ್ವಕಪ್ ಅಂತಿಮ ಹಂತಕ್ಕೆ ಬಂದು ನಿಂತಿದೆ. ಇಂದು ನಡೆದ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ತಂಡಗಳು ಮುಖಾಮುಖಿಯಾಗಿದ್ದವು. ಈ ಪಂದ್ಯದಲ್ಲಿ ಆಫ್ರಿಕಾ ವಿರುದ್ಧ ಸೋಲನುಭವಿಸಿದ ಕಾಂಗರೂ ತಂಡ ಟೂರ್ನಿಯಿಂದ ಹೊರಬಿದ್ದಿರೆ ದಕ್ಷಿಣ ಆಫ್ರಿಕಾ ತಂಡ ಮೊದಲ ಬಾರಿಗೆ ಫೈನಲ್ ಪ್ರವೇಶಿಸಿದೆ. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ ತಂಡ ಕೇವಲ 105 ರನ್ ಗಳಿಗೆ ಆಲೌಟ್ ಆಯಿತು. ಆ ನಂತರ ಗುರಿ ಬೆನ್ನಟ್ಟಿದ ಆಫ್ರಿಕಾ ತಂಡ ಇನ್ನು 11 ಎಸೆತಗಳು ಬಾಕಿ ಇರುವಾಗಲೇ 5 ವಿಕೆಟ್ ಕಳೆದುಕೊಂಡು ಜಯದ ನಗೆ ಬೀರಿತು. ಈ ಪಂದ್ಯದ ಬಳಿಗ ನಡೆದ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಟೀಂ ಇಂಡಿಯಾ, ಇಂಗ್ಲೆಂಡ್ ತಂಡವನ್ನು 9 ವಿಕೆಟ್‌ಗಳಿಂದ ಮಣಿಸಿ ಸತತ 2ನೇ ಬಾರಿಗೆ ಫೈನಲ್ ಪ್ರವೇಶಿಸಿದ್ದು, ಈ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಹಾಗೂ ಭಾರತ ಮಹಿಳಾ ತಂಡಗಳು ಮುಖಾಮುಖಿಯಾಗಲಿವೆ. ಸೆಮಿಫೈನಲ್‌ನಲ್ಲಿ ಮಿಂಚಿದ ವ್ಯಾನ್ ವೈಕ್ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಲು ನಿರ್ಧರಿಸಿತು. ದೊಡ್ಡ ಮೊತ್ತ ಕಲೆಹಾಕಿ ಎದುರಾಳಿ ತಂಡದಲ್ಲಿ ಒತ್ತಡ ಸೃಷ್ಟಿಸುವುದು ಅದರ ಉದ್ದೇಶವಾಗಿತ್ತು. ಆದರೆ ಆರಂಭ ಉತ್ತಮವಾಗಿರದ ಕಾರಣ ತಂಡ ಮೊದಲ ಎಸೆತದಲ್ಲೇ ವಿಕೆಟ್ ಕಳೆದುಕೊಂಡಿತು. ಅಲ್ಲದೆ ಪವರ್‌ಪ್ಲೇನಲ್ಲಿಯೇ ತಂಡದ ಮೂವರು ಅಗ್ರ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳು ಪೆವಿಲಿಯನ್ ಸೇರಿಕೊಂಡರು. ಇದಾದ ಬಳಿಕ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ರನ್ ಗಳಿಸಲು ಇನ್ನಿಲ್ಲದ ಪ್ರಯತ್ನ ನಡೆಸಿದರಾದರೂ ದಕ್ಷಿಣ ಆಫ್ರಿಕಾದ ಎಡಗೈ ಸ್ಪಿನ್ನರ್ ಆಶ್ಲೇ ವ್ಯಾನ್ ವೈಕ್ ಅವರ ಮಾರಕ ಬೌಲಿಂಗ್ ಮುಂದೆ ಪರದಾಡಬೇಕಾಯಿತು. ವ್ಯಾನ್ ವೈಕ್ 3 ಓವರ್ ಗಳಲ್ಲಿ ಕೇವಲ 17 ರನ್ ನೀಡಿ 3 ವಿಕೆಟ್ ಪಡೆದರು. ಇದರಿಂದಾಗಿ ಅರ್ಧ ಕಾಂಗರೂ ತಂಡ 62 ರನ್‌ಗಳಿಸುವಷ್ಟರಲ್ಲೇ ಪೆವಿಲಿಯನ್ ಸೇರಿಕೊಂಡಿತು. ಆದರೆ ಕೆಳ ಕ್ರಮಾಂಕದ ಬ್ಯಾಟರ್‌ಗಳು ಸ್ಕೋರನ್ನು 105 ರನ್‌ಗಳಿಗೆ ಕೊಂಡೊಯ್ಯುವಲ್ಲಿ ಯಶಸ್ವಿಯಾದರು. ಗೆಮ್ಮಾ ಬೋಥಾ ಅದ್ಭುತ ಬ್ಯಾಟಿಂಗ್ 106 ರನ್‌ಗಳ ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ಮೂರನೇ ಓವರ್‌ನಲ್ಲಿ ಮೊದಲ ವಿಕೆಟ್ ಕಳೆದುಕೊಂಡಿತು. ಇದಾದ ಬಳಿಕ ತಂಡದ ಇನ್ನಿಂಗ್ಸ್ ಜವಬ್ದಾರಿ ಹೊತ್ತ ಮತ್ತೊಬ್ಬ ಆರಂಭಿಕ ಆಟಗಾರ್ತಿ ಗೆಮ್ಮಾ ಬೋಥಾ ವೇಗವಾಗಿ ರನ್ ಕಲೆಹಾಕಲು ಮುಂದಾದರು.

## ಅಭಿಮಾನಿಗಳಿಗೆ ನಿರಾಸೆ ಮಾಡಿದ ವಿರಾಟ್ ಒಂದಂಕಿಗೆ ಕ್ಲೀನ್ ಬೋಲ್ಡ್



ವಿರಾಟ್ ಕೊಹ್ಲಿ ಅವರ ರಣಜಿ ಟ್ರೋಫಿ ಪದಾರ್ಪಣೆ ನಿರಾಶಾದಾಯಕವಾಗಿದೆ. ಡೆಲ್ಲಿ ತಂಡದ ಪರ ಆಡಿದ ಅವರು ಕೇವಲ 6 ರನ್ ಗಳಿಸಿ ಬೌಲ್ಡ್ ಆದರು. 13 ವರ್ಷಗಳ ಬಳಿಕ ರಣಜಿ ಕ್ರಿಕೆಟ್‌ಗೆ ಮರಳಿದ್ದ ಕೊಹ್ಲಿ ಅವರ ಕಳಪೆ ಫಾರ್ಮ್ ಮುಂದುವರಿದಿದೆ. ಇದರಿಂದ ಅಭಿಮಾನಿಗಳು ನಿರಾಶರಾಗಿದ್ದಾರೆ. ಟೀಂ ಇಂಡಿಯಾ ಆಟಗಾರ ವಿರಾಟ್ ಕೊಹ್ಲಿ ಅವರು ರಣಜಿ ಕ್ರಿಕೆಟ್‌ನಲ್ಲಿ ಆಡೋಕೆ ಬಂದಿದ್ದಾರೆ. ಡೆಲ್ಲಿ ತಂಡದ ಪರ ಅವರು ಆಡುತ್ತಿದ್ದಾರೆ. ಕೊಹ್ಲಿ ಆಟವನ್ನು ನೋಡಲು ಬಂದ ಅಭಿಮಾನಿಗಳಿಗೆ ಅವರು ನಿರಾಸೆ ಮಾಡಿದ್ದಾರೆ. ಬೌಂಡರಿ ಸಿಡಿಸಿದ ಮರು ಬಾಲ್‌ನಲ್ಲಿ ಕೊಹ್ಲಿ ಬೋಲ್ಡ್ ಆಗಿದ್ದಾರೆ. ಆರು ರನ್‌ಗೆ ವಿಕೆಟ್ ಒಪ್ಪಿಸಿ ಅವರು ಪೆವಿಲಿಯನ್ ಸೇರಿದ್ದಾರೆ. ಈ ಮೂಲಕ ಇಲ್ಲಿಯೂ ಅವರು ಕಳಪೆ ಫಾರ್ಮ್ ಮುಂದುವರಿದಿದೆ. ವಿರಾಟ್ ಕೊಹ್ಲಿ ಅವರು ಸುಮಾರು 13 ವರ್ಷಗಳ ಬಳಿಕ ರಣಜಿ ಕ್ರಿಕೆಟ್ ಆಡಿದ್ದಾರೆ. ಟಾಸ್ ಗೆದ್ದು ಮೊದಲು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ರೈಲ್ವೆ ತಂಡ ಕೇವಲ 241 ರನ್‌ಗಳಿಗೆ ಆಲ್‌ಔಟ್ ಆಯಿತು. ಮೊದಲ ದಿನ ಕೊಹ್ಲಿ ಮೈದಾನಕ್ಕೆ ಇಳಿಯಲಿಲ್ಲ. ಹೀಗಾಗಿ, ಅಲ್ಲಿ ನೆರೆದಿದ್ದ ಅಭಿಮಾನಿಗಳಿಗೆ ನಿರಾಸೆ ಆಯಿತು. ಎರಡನೇ ದಿನ ಕೊಹ್ಲಿ ಅವರು ಡೆಲ್ಲಿ ಪರ ಬ್ಯಾಟ್ ಬೀಸಿದರು. ಇಲ್ಲಿಯೂ ಆಗಿದ್ದು ನಿರಾಸೆಯೇ. ಕೊಹ್ಲಿ ಬ್ಯಾಟಿಂಗ್‌ಗೆ ಇಳಿಯುತ್ತಿದ್ದಂತೆ ಅಲ್ಲಿ ನೆರೆದಿದ್ದ ಅಭಿಮಾನಿಗಳು ಹರ್ಷೋದ್ಗಾರ ಮಾಡಿದರು. ಮೊದಲು ನಿಧಾನ ಗತಿಯಲ್ಲಿ ಬ್ಯಾಟ್ ಬೀಸಿದ ಕೊಹ್ಲಿ ಒಂದು ಬೌಂಡರಿ ಸಿಡಿಸಿದರು. ಮತ್ತೆ ಅದೇ ರೀತಿಯಲ್ಲಿ ಬ್ಯಾಟ್ ಬೀಸಲು ಹೋಗಿ ಕ್ಲೀನ್ ಬೌಲ್ಡ್ ಆಗಿ ವಿಕೆಟ್ ಒಪ್ಪಿಸಿದರು. ಹಿಮಾಂಶು ಸಂಗ್ವಾನ್ ಅವರ ಮಾರಕ ದಾಳಿಗೆ ಕೊಹ್ಲಿ ತತ್ತರಿಸಿ ಹೋದರು. ಈ ಮೂಲಕ ಇಲ್ಲಿಯೂ ಕೊಹ್ಲಿ ಕಳಪೆ ಪ್ರದರ್ಶನ ಮುಂದುವರಿದಿದೆ. ಸುಮಾರು 13 ವರ್ಷಗಳ ಸುದೀರ್ಘ ಕಾಯುವಿಕೆಯ ನಂತರ ರಣಜಿ ಟ್ರೋಫಿಗೆ ಮರಳಿರುವ ವಿರಾಟ್ ಕೊಹ್ಲಿ ತಮ್ಮ ಅಭಿಮಾನಿಗಳಿಗೆ ಭಾರಿ ನಿರಾಸೆ ಮೂಡಿಸಿದ್ದಾರೆ. ದೆಹಲಿ ಮತ್ತು ರೈಲ್ವೇಸ್ ನಡುವೆ ನಡೆಯುತ್ತಿರುವ ಪಂದ್ಯದಲ್ಲಿ ವಿರಾಟ್ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ಕೇವಲ 6 ರನ್ ಗಳಿಸಲಷ್ಟೇ ಶಕ್ತರಾದರು. ಹೀಗಾಗಿ ರನ್ ಸಾಮ್ರಾಟನ ಬ್ಯಾಟಿಂಗ್ ಆನಂದಿಸಲು ಕ್ರೀಡಾಂಗಣಕ್ಕೆ ಬಂದಿದ್ದ ಸಾವಿರಾರು ಅಭಿಮಾನಿಗಳು ಬೇಸರದಿಂದಲೇ ಮೈದಾನದಿಂದ ಹೊರನಡೆದಿದ್ದಾರೆ. ಆದರೆ 29 ವರ್ಷದ ಬೌಲರ್ ಹಿಮಾಂಶು ಸಂಗ್ವಾನ್ ಅವರ ಇನ್ಸ್ವಿಂಗ್ ಎಸೆತವನ್ನು ಡಿಫೆಂಡ್ ಮಾಡುವಲ್ಲಿ ವಿಫಲರಾದ ಕೊಹ್ಲಿ ಒಂದಂಕಿಗೆ ಪೆವಿಯನ್ ಸೇರಿಕೊಂಡರು. ಇತ್ತ ವಿರಾಟ್ ಕೊಹ್ಲಿಯನ್ನು ಕ್ಲೀನ್ ಬೌಲ್ಡ್ ಮಾಡಿ ಅಭಿಮಾನಿಗಳ ಹೃದಯ ಒಡೆದ ಹಿಮಾಂಶು ಸಾಂಗ್ವಾನ್ ಯಾರು ಎಂಬುದರ ಬಗ್ಗೆ ಇದೀಗ ಸೋಶಿಯಲ್ ಮೀಡಿಯಾದಲ್ಲಿ ಹುಡುಕಾಟ ಶುರುವಾಗಿದೆ.

ಹಿಮಾಂಶು ಸಾಂಗ್ವಾನ್ ಯಾರು

## ಪಾಂಡ್ಯ, ದುಬೆ ಅರ್ಭಟ ಇಂಗ್ಲೆಂಡ್ ಧೂಳಿಪಟ

ಪುಣೆಯಲ್ಲಿ ನಡೆದ ಭಾರತ ಮತ್ತು ಇಂಗ್ಲೆಂಡ್ ನಡುವಿನ ನಾಲ್ಕನೇ ಟಿ20 ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಟೀಮ್ ಇಂಡಿಯಾ ಭರ್ಜರಿ ಗೆಲುವು ಸಾಧಿಸಿದೆ. ಈ ಮೂಲಕ ಐದು ಪಂದ್ಯಗಳ ಟಿ20 ಸರಣಿಯನ್ನು ಭಾರತ ವಶಪಡಿಸಿಕೊಂಡಿದೆ.

ಇಂಗ್ಲೆಂಡ್ ಪರ ಅಮೋಘ ಬ್ಯಾಟಿಂಗ್ ಮಾಡಿದ ಬೆನ್ ಡಕೆಟ್ (39) ಮತ್ತು ಹ್ಯಾರಿ ಬ್ರೂಕ್‌ರ ಆಕರ್ಷಕ ಅರ್ಧಶತಕ (51) ಕಡೆಗೂ ಫಲಿಸಲಿಲ್ಲ. ಟೀಮ್ ಇಂಡಿಯಾ ವಿರುದ್ಧದ ಗೆಲುವಿಗೆ ಇಬ್ಬರ ಕೊಡುಗೆಯೂ ಫಲ ನೀಡದೆ ಹೋಗಿದ್ದು, ಇಂಗ್ಲೆಂಡ್ ಅಭಿಮಾನಿಗಳ ಭಾರೀ ನಿರಾಸೆಗೆ ಕಾರಣವಾಯಿತು. ಟಾಸ್ ಗೆದ್ದ ಇಂಗ್ಲೆಂಡ್ ಮೊದಲು ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಈ ವೇಳೆ ಬ್ಯಾಟಿಂಗ್ ಮಾಡಿದ ಭಾರತ, 20 ಓವರ್‌ನಲ್ಲಿ 9 ವಿಕೆಟ್ ನಷ್ಟಕ್ಕೆ 181 ರನ್ ಗಳಿಸಲು ಶಕ್ತವಾಯಿತು. ಭಾರತ ನೀಡಿದ 182 ರನ್ ಗುರಿಯನ್ನು ಬೆನ್ನಟ್ಟಿದ ಇಂಗ್ಲೆಂಡ್ ಬ್ಯಾಟರ್‌ಗಳು ಮೊದಲ ಹತ್ತು ಓವರ್‌ನಲ್ಲೇ ಮೂರು ವಿಕೆಟ್‌ಗಳನ್ನು ಕಳೆದುಕೊಂಡಿತು. ಆರಂಭಿಕ ಹಂತದಲ್ಲೇ ಸ್ಟಾರ್ ಬ್ಯಾಟರ್‌ಗಳ ವಿಕೆಟ್ ಉರುಳಿದ್ದು, ಇಂಗ್ಲೆಂಡ್‌ಗೆ ಕಂಟಕವಾಯಿತು.

ಭಾರತದ ಪರ ಅಬ್ಬರದ ಬ್ಯಾಟಿಂಗ್ ಮಾಡಿದ ಹಾರ್ದಿಕ್ ಪಾಂಡ್ಯ (53) ಮತ್ತು ಶಿವಂ ದುಬೆ (53★) ಆಕರ್ಷಕ ಅರ್ಧಶತಕ ಟೀಮ್ ಇಂಡಿಯಾ ಗೆಲುವಿಗೆ ಪ್ರಮುಖ ಕಾರಣವಾಯಿತು. ಇನ್ನು ಭಾರತ ನೀಡಿದ ಗುರಿಯನ್ನು ಚೇಸ್ ಮಾಡಿದ ಇಂಗ್ಲೆಂಡ್ ಬ್ಯಾಟರ್‌ಗಳನ್ನು ಬೆಂಬಿಡದೆ ಕಾಡಿದ ರವಿ ಬಿಷ್ಣೋಯಿ, ಹರ್ಷಿತ್ ರಾಣ ತಲಾ ಮೂರು ವಿಕೆಟ್ ಗಳನ್ನು ಪಡೆದರೆ, ವರುಣ್ ಚಕ್ರವರ್ತಿ 2 ವಿಕೆಟ್ ಪಡೆದು, ಟೀಮ್ ಇಂಡಿಯಾ ಪರ ಮಿಂಚಿದರು. ನಾಲ್ಕನೇ ಟಿ20 ಪಂದ್ಯವನ್ನೂ ಗೆದ್ದ ಭಾರತ, 3-1 ಅಂತರದಲ್ಲಿ ಇಂಗ್ಲೆಂಡ್ ವಿರುದ್ಧ ಸರಣಿ ವಶಪಡಿಸಿಕೊಂಡಿದೆ.



ಸರಣಿ ಭಾರತದ ಕೈವಶ

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966